ಶುಕ್ರವಾರ, ಡಿಸೆಂಬರ್ 15, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 345 | ಪುಟ 14

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಸಿನಿಮಾದೊಳಗೆ ಸಹಾಯಕ ನಿರ್ದೇಶಕನ ಪಾತ್ರದಲ್ಲಿ ನಟಿಸಿರುವ ಅನೀಶ್ ತೇಜೇಶ್ವರ್‌ಗೆ ಗೆಲುವಿನ ಹಂಬಲ



ಕರ್ನಾಟಕ 50 — 25 ವರ್ಷಗಳ ಮುನ್ನೋಟ — ಗಾಯಗೊಂಡ ಪರಿಸರ ಮತ್ತು ನಾವು

ವಿದೇಶಿ ಬಂಡವಾಳ ಶೇ 46ರಷ್ಟು ಕುಸಿತ 8

ಮಹಿಳೆ ಬೆತ್ತಲು ಕೃತ್ಯ: ಮರುಗಿದ ಹೈಕೋರ್ಟ್ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
70,514 ▲	21,182 ▲	₹ 64,350 (ಬೆಂಗಳೂರು) ▲	₹75,600 (ಬೆಂಗಳೂರು) ▲	83.30 ▼

ಮಥುರಾ ಮಸೀದಿ ಸಮೀಕ್ಷೆಗೆ ಕೋರ್ಟ್ ಅಸ್ತು

ಪ್ರಯಾಗರಾಜ್ (ಪಿಟಿಐ): ಮಥುರಾದಲ್ಲಿ ಕೃಷ್ಣ ಜನ್ಮಭೂಮಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಶಾಹಿ ಈದ್ಗಾ ಆವರಣದಲ್ಲಿ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಮೀಕ್ಷೆ ನಡೆಸಲು ಅಲಹಾಬಾದ್ ಹೈಕೋರ್ಟ್ ಗುರುವಾರ ಅವಕಾಶ ನೀಡಿದೆ. ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲೋಕಸಭೆಯಲ್ಲಿ ಭದ್ರತಾ ಲೋಪ: ಕಲಾಪಕ್ಕೆ ಅಡ್ಡಿ, ಅಮಿತ್ ಶಾ ರಾಜೀನಾಮೆಗೆ ವಿಪಕ್ಷ ಪಟ್ಟು

14 ಸಂಸದರ ಅಮಾನತು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಭದ್ರತಾ ಲೋಪ ಸಂಸತ್‌ನ ಉಭಯ ಸದನಗಳಲ್ಲಿ ಗುರುವಾರ ಪ್ರತಿಧ್ವನಿಸಿತು. ಘಟನೆ ಕುರಿತು ಕೇಂದ್ರ ಸರ್ಕಾರದ ಹೇಳಿಕೆ ಹಾಗೂ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ವಿರೋಧ ಪಕ್ಷಗಳು ಉಭಯ ಸದನಗಳಲ್ಲಿ ಪಟ್ಟು ಹಿಡಿದವು. ಸದನದ ಕಲಾಪಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ 14 ಸಂಸದರನ್ನು ಅಮಾನತುಗೊಳಿಸಲಾಯಿತು.

ರಾಜ್ಯಸಭೆಯಲ್ಲಿ ಟಿಎಂಸಿಯ ಡೆರಿಕ್ ಒಬ್ರಿಯಾನ್ ಹಾಗೂ ಲೋಕಸಭೆಯಲ್ಲಿ ಕಾಂಗ್ರೆಸ್‌ನ ಒಂಬತ್ತು, ಸಿಪಿಎಂನ ಇಬ್ಬರು, ಡಿಎಂಕೆ ಹಾಗೂ ಸಿಪಿಐನ ತಲಾ ಒಬ್ಬರು ಸದಸ್ಯರನ್ನು ಅಮಾನತುಗೊಳಿಸಲಾಯಿತು.

ಕಾಂಗ್ರೆಸ್, ಟಿಎಂಸಿ ಸೇರಿದಂತೆ ವಿಪಕ್ಷಗಳ ಸದಸ್ಯರು ಉಭಯ ಸದನಗಳಲ್ಲಿ ಪ್ರತಿಭಟನೆ ನಡೆಸಿದರು. ಲೋಕಸಭೆಯ ಸದನದೊಳಗೆ ಜಿಗಿದ ಇಬ್ಬರು ಆರೋಪಿಗಳಿಗೆ ಪಾಸ್ ವ್ಯವಸ್ಥೆ ಮಾಡಿಕೊಟ್ಟ ಮೈಸೂರಿನ ಸಂಸದ ಪ್ರತಾಪ ಸಿಂಹ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಆಗ್ರಹಿಸಿದರು.



ಭದ್ರತೆಯನ್ನು ಬಿಗಿಗೊಳಿಸಿದ್ದರಿಂದ ಸಂಸತ್ ಆವರಣ ಗುರುವಾರ ಬಿಕೋ ಎನ್ನುತ್ತಿತ್ತು — ಪಿಟಿಐ ಚಿತ್ರ

ಭದ್ರತಾ ಲೋಪವನ್ನು ಪ್ರಶ್ನಿಸಿ, ಸರ್ಕಾರದ ಹೇಳಿಕೆಗೆ ಆಗ್ರಹಿಸಿ ವಿರೋಧ ಪಕ್ಷಗಳ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದರು. ಭದ್ರತೆ ಹೆಚ್ಚಿಸುವ ಕುರಿತು ಸದಸ್ಯರ ಜತೆಗೆ ಮತ್ತೊಮ್ಮೆ ಚರ್ಚೆ ನಡೆಸಲು ಸಿದ್ಧ ಎಂದು ಸ್ಪೀಕರ್ ಓಂ ಬಿರ್ಲಾ ತಿಳಿಸಿದರು. ಪ್ರತಿಭಟನೆಯ ನಡುವೆಯೇ ಪ್ರಶ್ನೋತ್ತರ ಅವಧಿಯನ್ನು ನಡೆಸಲಾಯಿತು. ಗಲಾಟೆ ಹೆಚ್ಚಾದಾಗ ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ಬಳಿಕ ಕಲಾಪ ಶುರುವಾದಾಗ, 'ರಾಷ್ಟ್ರದ ಗಂಭೀರ ವಿಚಾರವನ್ನು ರಾಜಕೀಯಗೊಳಿಸಬೇಡಿ' ಎಂದು ಸರ್ಕಾರವು ಪ್ರತಿಪಕ್ಷವನ್ನು ಮನವಿ ಮಾಡಿತು. ವಿಪಕ್ಷಗಳ ಸದಸ್ಯರು ಪಟ್ಟು ಸಡಿಲಿಸಲಿಲ್ಲ. ಪ್ರತಿಪಕ್ಷಗಳ ಪ್ರತಿಭಟನೆಯ ನಡುವೆಯೇ, 13 ಸದಸ್ಯರನ್ನು ಅಮಾನತುಗೊಳಿಸುವ ಎರಡು ಪ್ರತ್ಯೇಕ ನಿರ್ಣಯಗಳನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಲೋಕಸಭೆಯಲ್ಲಿ ಮಂಡಿಸಿದರು. ಬಳಿಕ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

9ನೇ ಪುಟ ನೋಡಿ

ದೇಶದ್ರೋಹ ಕಾಯ್ದೆಯಡಿ ಪ್ರಕರಣ ದಾಳಿ ರೂವಾರಿ ಲಲಿತ್ ಝಾ ಬಂಧನ

ನವದೆಹಲಿ (ಪಿಟಿಐ): ಭದ್ರತಾ ವ್ಯವಸ್ಥೆಯನ್ನು ಭೇದಿಸಿ, ಲೋಕಸಭೆ ಹಾಗೂ ಸಂಸತ್ ಭವನದ ಹೊರಗಡೆ ಸ್ಮೋಕ್ ಕ್ಯಾನ್ (ಅನಿಲ ಉಗುಳುವ ಡಬ್ಬಿ) ಪ್ರಯೋಗಿಸಿದ್ದ ನಾಲ್ಕು ಮಂದಿ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ (ಯುಎಪಿಎ) ಪ್ರಕರಣ ದಾಖಲಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿಯೂ ಪ್ರಕರಣ ದಾಖಲಿಸಿದೆ.

ಈ ಮಧ್ಯೆ ದಾಳಿ ರೂವಾರಿ ಕೋಲ್ಕತ್ತಾ ಮೂಲದ ಲಲಿತ್ ಝಾನನ್ನು ಗುರುವಾರ ರಾತ್ರಿ ಪೊಲೀಸರು ಬಂಧಿಸಿದ್ದಾರೆ.

ಡಿ.ಮನೋರಂಜನ್, ಸಾಗರ್ ಶರ್ಮ, ಅಮೋಲ್ ಶಿಂದೆ, ನೀಲಂ ದೇವಿ ಅವರನ್ನು ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಹರದೀಪ್ ಕೌರ್ ಅವರ ಎದುರು ದೆಹಲಿ ಪೊಲೀಸರು ಗುರುವಾರ ಹಾಜರು ಪಡಿಸಿದರು.

ಬಂಧಿತರನ್ನು 15 ದಿನದ ಅವಧಿಗೆ ವಶಕ್ಕೆ ಒಪ್ಪಿಸಬೇಕು ಎಂದು ಪೊಲೀಸರು ಕೋರಿದರು. ಆದರೆ ವಿಶೇಷ ನ್ಯಾಯಾಲಯವು ಏಳು ದಿನದ ಅವಧಿಗೆ ಮಾತ್ರ ಪೊಲೀಸ್ ವಶಕ್ಕೆ ನೀಡಿದೆ.

9ನೇ ಪುಟ ನೋಡಿ

ಎಂಟು ಸಿಬ್ಬಂದಿ ಅಮಾನತು

ಸಂಸತ್‌ನಲ್ಲಿ ಭದ್ರತಾ ಲೋಪಕ್ಕೆ ಸಂಬಂಧಿಸಿದಂತೆ ದೆಹಲಿಯ ಎಂಟು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ. ಇವರೆಲ್ಲ ಸಂಸತ್ತಿನ ಭದ್ರತೆಗಾಗಿ ನಿಯೋಜಿತರಾಗಿದ್ದರು. ಸಂದರ್ಶಕರು, ಮಾಧ್ಯಮ ಪ್ರತಿನಿಧಿಗಳ ತಪಾಸಣೆಯ ಕಾರ್ಯ ನಿರ್ವಹಿಸುತ್ತಿದ್ದರು.

'ಕೈ' ಔತಣಕೂಟ: ಬಿಜೆಪಿ ಇಬ್ಬರು ಶಾಸಕರು ಭಾಗಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಿಜೆಪಿ ರಾಜ್ಯ ಘಟಕದಲ್ಲಿ ಅಸಮಾಧಾನದ ಹೊಗೆಯಾಡುತ್ತಿರುವ ಹೊತ್ತಲ್ಲೇ ಕಾಂಗ್ರೆಸ್ ಶಾಸಕರಿಗೆ ಏರ್ಪಡಿಸಿದ್ದ ಔತಣ ಕೂಟದಲ್ಲಿ ಬಿಜೆಪಿಯ ಶಾಸಕರಿಬ್ಬರು ಭಾಗಿಯಾಗುವ ಮೂಲಕ ಕುತೂಹಲ ಮೂಡಿಸಿದ್ದಾರೆ.

ನಗರದ ಹೊರವಲಯದ ಶೂನ್ಯ ರೆಸಾರ್ಟ್‌ನಲ್ಲಿ ಬುಧವಾರ ರಾತ್ರಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯ ಬಳಿಕ ಏರ್ಪಡಿಸಿದ್ದ ಔತಣ ಕೂಟದಲ್ಲಿ ಯಶವಂತಪುರ ಕ್ಷೇತ್ರದ ಶಾಸಕ ಎಸ್‌.ಟಿ. ಸೋಮಶೇಖರ್, ಯಲ್ಲಾಪುರ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ್, ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಚ್‌.ವಿಶ್ವನಾಥ್ ಪಾಲ್ಗೊಂಡಿದ್ದಾರೆ.

ಬಿಜೆಪಿ ಸಭೆಗಳಿಂದ ದೂರ ಉಳಿದಿರುವ ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್, ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಕೇಳುವ ನೆಪದಲ್ಲಿ ಹಲವು ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈಗಾಗಲೇ ಭೇಟಿ ಮಾಡಿದ್ದಾರೆ. ವಿಶ್ವನಾಥ್ ಕೂಡಾ ಬಿಜೆಪಿ ಜೊತೆ ಅಂತರ ಕಾಯ್ದುಕೊಂಡಿದ್ದಾರೆ.

'ಅನ್ಯ ಪಕ್ಷದ 10 ಶಾಸಕರು ಇದ್ದರು'

ಬೆಳಗಾವಿ: 'ಬುಧವಾರ ರಾತ್ರಿ ನಡೆದ ಶಾಸಕಾಂಗ ಪಕ್ಷದ ಸಭೆಗೆ ಬಿಜೆಪಿ ಶಾಸಕರಾದ ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್ ಬಂದಿಲ್ಲ. ನಾವು ಆಹ್ವಾನ ನೀಡಿದ್ದ ಭೋಜನಕೂಟಕ್ಕೆ ಬಂದಿದ್ದರು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುವರ್ಣಸೌಧದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಚ್. ವಿಶ್ವನಾಥ್ ಅವರೂ ಸೇರಿದಂತೆ ಅನ್ಯ ಪಕ್ಷದ 10 ಶಾಸಕರು ಭೋಜನ ಕೂಟಕ್ಕೆ ಬಂದಿದ್ದರು' ಎಂದರು. 'ಅನ್ಯಪಕ್ಷದ ಶಾಸಕರು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಗೆ ಬಂದಿದ್ದರೇ' ಎಂದು ಕೇಳಿದಾಗ, 'ಅವರು ಏಕೆ ನಮ್ಮ ಶಾಸಕಾಂಗ ಸಭೆಗೆ ಬರುತ್ತಾರೆ. ಅವರು ನಮ್ಮ ಪಕ್ಷದ ಶಾಸಕರಲ್ಲ. ಹೀಗಾಗಿ, ಬಂದಿಲ್ಲ' ಎಂದರು.

'ನಿಮ್ಮ ಮೇಲಿರುವ ಸಿಬಿಐ ವಿಚಾರಣೆ ಹಿಂಪಡೆದ ವಿಚಾರವನ್ನು ಸದನದಲ್ಲಿ ಬಿಜೆಪಿ ಪ್ರಸ್ತಾವ ಮಾಡಲು ತಯಾರಿ ನಡೆಸಿದೆಯಂತೆ' ಎಂದಾಗ, 'ಪ್ರಸ್ತಾವ ಮಾಡಲಿ, ಕಾನೂನಿದೆ. ಬೇಡ ಎಂದವರು ಯಾರು?' ಎಂದರು.

ಅವಿರೋಧ ಆಯ್ಕೆ

ಯಲಹಂಕ: ಸಿಂಗನಾಯಕನ ಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಡಿ. ಹೇಮಂತ ಕುಮಾರ್ ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಹೊಸ ವರ್ಷ: ಡ್ರಗ್ಸ್ ಪಾರ್ಟಿ ಮೇಲೆ ನಿಗಾ ಇರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ರ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಡ್ರಗ್ಸ್ ಪಾರ್ಟಿಗಳನ್ನು ಆಯೋಜಿಸಲು ಹಲವರು ಸಿದ್ಧತೆ ನಡೆಸುತ್ತಿರುವ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕಿದ್ದಾರೆ. ಅಂಥ ಪಾರ್ಟಿಗಳು ಹಾಗೂ ಆಯೋಜಕರ ಮೇಲೆ ನಿಗಾ ಇರಿಸಿ ಕಾನೂನು ಕ್ರಮ ಜರುಗಿಸುವಂತೆ ಕಮಿಷನರ್ ಬಿ. ದಯಾನಂದ್ ಅವರು ಪೊಲೀಸರಿಗೆ ಖಡಕ್ ಸೂಚನೆ ನೀಡಿದ್ದಾರೆ.

ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಕಮಿಷನರ್, ಡ್ರಗ್ಸ್ ಸಾಗಣೆ, ಮಾರಾಟ ಪತ್ತೆಗೆ ಕಾರ್ಯಾಚರಣೆ ನಡೆಸುವಂತೆ ಹೇಳಿದ್ದಾರೆ.

‘ಹೊಸ ವರ್ಷವನ್ನು ಸ್ವಾಗತಿಸಲು ನಗರದ ಹಲವು ಕಡೆಗಳಲ್ಲಿ ವಿಶೇಷ ಪಾರ್ಟಿಗಳನ್ನು ಆಯೋಜಿಸಲಾಗುತ್ತಿದೆ. ಇಂಥ ಸಂದರ್ಭದಲ್ಲಿಯೇ ಡ್ರಗ್ಸ್ ಮಾರಾಟಕ್ಕೆ ಪೆಡ್ಲರ್‌ಗಳು ತೆರೆಮರೆಯಲ್ಲಿ ತಯಾರಿ ಮಾಡಿಕೊಳ್ಳುತ್ತಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

635 ವಿದೇಶಿ ಪ್ರಜೆಗಳ ಅಕ್ರಮ ವಾಸ್ತವ್ಯ

ವಿಧಾನ ಪರಿಷತ್: ಪಾಸ್‌ಪೋರ್ಟ್ ಅವಧಿ ಮುಗಿದ ಬಳಿಕವೂ 635 ವಿದೇಶಿ ಪ್ರಜೆಗಳು ರಾಜ್ಯದಲ್ಲೇ ಉಳಿದುಕೊಂಡಿದ್ದಾರೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಜೆಡಿಎಸ್‌ನ ಟಿ.ಎ. ಶರವಣ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ಅಕ್ಟೋಬರ್ ವರೆಗೆ ಗುರುತಿಸಲಾಗಿದ್ದ 262 ವಿದೇಶಿ ಪ್ರಜೆಗಳನ್ನು ಆಯಾ ದೇಶಗಳಿಗೆ ಗಡೀಪಾರು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. 172 ಪ್ರಕರಣ ದಾಖಲಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 160, ಮೈಸೂರು ನಗರದಲ್ಲಿ 6 ಪ್ರಕರಣ ದಾಖಲಾಗಿವೆ ಎಂದರು.

ಸರ್ಕಾರ ಗುರುತಿಸಿರುವ ಪ್ರಜೆಗಳಲ್ಲಿ ಹೆಚ್ಚಿನವರು ನೈಜೀರಿಯಾಕ್ಕೆ ಸೇರಿದವರು. ಉಳಿದವರು ಸುಡಾನ್, ಕಾಂಗೋ, ಯೆಮೆನ್, ಕ್ಯಾಮರೂನ್, ಉಗಾಂಡಾ ಹಾಗೂ ಬಾಂಗ್ಲಾದೇಶದ ಪ್ರಜೆಗಳು. ಪಾಸ್‌ಪೋರ್ಟ್ ಅವಧಿ ಮುಗಿದ ನಂತರವೂ ಹೆಚ್ಚಿನವರು ತಮ್ಮ ವಾಸ್ತವ್ಯ ಮುಂದುವರಿಸಲು ಬೆಂಗಳೂರು ನಗರವನ್ನು ಆಯ್ಕೆ ಮಾಡಿಕೊಂಡಿದ್ದರು. ವಿವಿಧ ಕಾರಣಗಳಿಗಾಗಿ ಇಲ್ಲಿಯೇ ವಾಸ್ತವ್ಯ ಮುಂದುವರಿಸಿದ್ದಾರೆ ಎಂಬ ಮಾಹಿತಿ ವಿಚಾರಣೆಯಿಂದ ತಿಳಿದುಬಂದಿದೆ ಎಂದು ಹೇಳಿದರು.

ನ್ಯಾಯಾಲಯ ಶ್ಯೂರಿಟಿ: ಜಾಲ ಭೇದಿಸಿದ ಸಿಸಿಬಿ–ಒಂದೇ ಹೆಸರಿನಲ್ಲಿ ಹಲವು ಆಧಾರ್ ಪತ್ತೆ

ನಕಲಿ ದಾಖಲೆ: 9 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಶ್ಯೂರಿಟಿಗೆ ನೀಡುತ್ತಿದ್ದ ಆರೋಪದಡಿ ಮಹಿಳೆ ಸೇರಿ 9 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ. ನಗರದ ದಿಣ್ಣೂರು ಮುಖ್ಯರಸ್ತೆಯ ನಿವಾಸಿ ತಬಸ್ಸುಮ್ (38), ರಾಯಚೂರು ಜಿಲ್ಲೆಯ ಜಾನಕಲ್‌ನ ವೀರೇಶ್ (37), ನಾಗೋಲಿಯ ಅಮರೇಶ್ (38), ಕೊಪ್ಪಳ ಜಿಲ್ಲೆಯ ಕೆಸರಹಟ್ಟಿಯ ಜೆ. ಉಮೇಶ್‌ಕುಮಾರ್ (48), ಕುಣಿಕೇರಿಯ ಸಂತೋಷ್ (29), ಬೆಂಗಳೂರು ಮಾದಾವರ ನಂದೀಶ್ವರ ಬಡಾವಣೆಯ ಪ್ರಕಾಶ್ (42), ಮೈಸೂರು ನಂಜನಗೂಡಿನ ಉಮೇಶ್ (49), ಕೋಲಾರ ಜಿಲ್ಲೆಯ ಶ್ರೀನಿವಾಸಪುರದ ಜಿ. ನಾಗರಾಜ್ ಅಲಿಯಾಸ್ ಸೋಡಾ (46) ಹಾಗೂ ಗುಂಟುಪಲ್ಲಿಯ ಮಂಜುನಾಥ್ (48) ಬಂಧಿತರು.

ಅಪರಾಧ ಸುದ್ದಿ

‘ಮೈಸೂರು ಬ್ಯಾಂಕ್ ವೃತ್ತದ ಪಾದಚಾರಿ ಮಾರ್ಗದಲ್ಲಿ ಕುಳಿತುಕೊಳ್ಳುತ್ತಿದ್ದ ಆರೋಪಿಗಳು, ನಕಲಿ ದಾಖಲೆಗಳನ್ನು ಮಾರುತ್ತಿದ್ದರು. ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸುತ್ತಿದ್ದ ಆರೋಪಿಗಳು, ಇವರ ಬಳಿ ನಕಲಿ ದಾಖಲೆಗಳನ್ನು ಖರೀದಿಸುತ್ತಿದ್ದರು. ಅದೇ ದಾಖಲೆಗಳನ್ನು ಆರೋಪಿಗಳು, ನ್ಯಾಯಾಲಯಕ್ಕೆ ಶ್ಯೂರಿಟಿಯಾಗಿ ನೀಡುತ್ತಿದ್ದರು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ನಕಲಿ ದಾಖಲೆಗಳ ಸೃಷ್ಟಿ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ವಿಶೇಷ ತಂಡ ರಚಿಸಿ ಡಿ. 12ರಂದು ಕಾರ್ಯಾಚರಣೆ ನಡೆಸಿ, ಪುರಾವೆ ಸಮೇತ 9 ಆರೋಪಿಗಳನ್ನು ಬಂಧಿಸಲಾಗಿದೆ. ಇವರೆಲ್ಲರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿವೆ.

ಒಂದೇ ಹೆಸರಿನಲ್ಲಿ ಹಲವು ಆಧಾರ್: ‘ನಕಲಿ ಆಧಾರ್, ಪಹಣಿ, ಸೇಲ್ ಡೀಡ್, ಮ್ಯೂಟೇಷನ್ ಹಾಗೂ ಇತರೆ ದಾಖಲೆಗಳು ಆರೋಪಿಗಳ ಬಳಿ ಸಿಕ್ಕಿವೆ. ಒಂದೇ ಹೆಸರಿನಲ್ಲಿ ಹಲವು ಆಧಾರ್ ಪತ್ತೆಯಾಗಿವೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ವ್ಯಕ್ತಿಯೊಬ್ಬರ ಆಧಾರ್ ಸ್ಕ್ಯಾನ್ ಮಾಡಿರುವ ಆರೋಪಿಗಳು, ಒಂದೇ ’ಆಧಾರ್’ನಲ್ಲಿ ಹಲವು ಬಾರಿ ಫೋಟೊ, ಹೆಸರು, ಸಂಖ್ಯೆ, ವಿಳಾಸ ಬದಲಾಯಿಸಿದ್ದರು. ಇದೇ ರೀತಿಯಲ್ಲಿ ಒಂದೇ ಹೆಸರಿನಲ್ಲಿ ಹೆಚ್ಚು ‘ಆಧಾರ್’ ಸೃಷ್ಟಿಸಿದ್ದಾರೆ. ಇವುಗಳನ್ನು ಮಾರಿ ಹಣ ಸಂಪಾದಿಸುತ್ತಿದ್ದರು. ಯಾರದ್ದೋ ಆಸ್ತಿ ಹೆಸರಿನಲ್ಲಿ ನಕಲಿ ಪಹಣಿ, ಸೇಲ್ ಡೀಡ್, ಮ್ಯೂಟೇಷನ್ ಪ್ರಮಾಣ ಪತ್ರಗಳನ್ನೂ ಆರೋಪಿಗಳು ಸೃಷ್ಟಿಸಿದ್ದರು. 9 ಆರೋಪಿಗಳ ಜೊತೆ ಮತ್ತಷ್ಟು ಮಂದಿ ಶಾಮೀಲಾಗಿರುವ ಶಂಕೆ ಇದೆ’ ಎಂದು ಮೂಲಗಳು ತಿಳಿಸಿವೆ.

ಸಿಗರೇಟ್ ಪೂರೈಕೆದಾರರ ಸುಲಿಗೆ: ಐವರ ಸೆರೆ

ಬೆಂಗಳೂರು: ನಗರದ ಅಂಗಡಿಗಳಿಗೆ ಸಿಗರೇಟ್ ಪೂರೈಕೆ ಮಾಡಿ ಹಣ ಸಂಗ್ರಹಿಸುತ್ತಿದ್ದ ಕಂಪನಿಗಳ ಪ್ರತಿನಿಧಿಗಳನ್ನು ಸುಲಿಗೆ ಮಾಡುತ್ತಿದ್ದ ಐವರು ಆರೋಪಿಗಳನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಾದ ಅಕ್ಮಲ್, ವಸೀಂ, ಬಕಾಸ್, ಅಜರ್ ಮತ್ತು ಅಲಿ ಬಂಧಿತರು. ₹ 2 ಲಕ್ಷ ಮೌಲ್ಯದ ಸಿಗರೇಟ್, ಬೈಕ್‌ನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

‘ಆರೋಪಿಯೊಬ್ಬ ಅಪರಾಧ ಹಿನ್ನೆಲೆಯುಳ್ಳವ. ನೆಲಮಂಗಲ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ. ಜಾಮೀನಿನ ಮೇಲೆ ಹೊರಬಂದಿದ್ದ ಈತ, ತನ್ನದೇ ತಂಡ ಕಟ್ಟಿಕೊಂಡು ಸುಲಿಗೆ ಮಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಗರದಲ್ಲಿ ಸಿಗರೇಟ್ ವ್ಯವಹಾರ ಜೋರಾಗಿ ನಡೆಯುತ್ತದೆ. ಕಂಪನಿಯ ಪ್ರತಿನಿಧಿಗಳು, ಬೈಕ್‌ನಲ್ಲಿ ಸುತ್ತಾಡಿ ನಗರದ ಅಂಗಡಿಗಳಿಗೆ ಸಿಗರೇಟ್ ಪೂರೈಸುತ್ತಿದ್ದಾರೆ. ಇದರ ಜೊತೆಯಲ್ಲಿ, ಹಣವನ್ನೂ ಸಂಗ್ರಹಿಸಿ ಕಂಪನಿಗೆ ನೀಡುತ್ತಿದ್ದಾರೆ. ಅಂಗಡಿಗಳಿಂದ ಹಣ ಸಂಗ್ರಹಿಸಿಕೊಂಡು ಹೋಗುವ ಪ್ರತಿನಿಧಿಗಳನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ಮಾರಕಾಸ್ತ್ರ ತೋರಿಸಿ ಬೆದರಿಸಿ ಸುಲಿಗೆ ಮಾಡುತ್ತಿದ್ದರು. ಸಿಗರೇಟ್ ಹಾಗೂ ಹಣ ದೋಚುತ್ತಿದ್ದರು. ಕೊಂಡಪ್ಪ ಬಡಾವಣೆಯಲ್ಲಿ ಇತ್ತೀಚೆಗೆ ಸುಲಿಗೆ ಮಾಡಿದ್ದರು. ಈ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಲಾಗಿದೆ. ಇನ್ನೊಬ್ಬ ತಲೆಮರೆಸಿಕೊಂಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಸುಧಾ ಓದಿರಿ...

ಪೊಟ್ಟಣ ಬದಲಿಸಿ ಆಹಾರ ಮಾರಾಟ: ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಮೀರಿದ ಆಹಾರ ವಸ್ತುಗಳನ್ನು ಹೊಸ ಪೊಟ್ಟಣಕ್ಕೆ ತುಂಬಿ ಜನರಿಗೆ ಮಾರಾಟ ಮಾಡುತ್ತಿದ್ದ ಸಿದ್ದಾಪುರ ಬಳಿಯ ಎಚ್.ಎಂ. ಟ್ರೇಡರ್ಸ್ ಮಳಿಗೆ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಮಾಲೀಕನನ್ನು ವಶಕ್ಕೆ ಪಡೆದಿದ್ದಾರೆ.

‘ಹಲವು ಕಂಪನಿಗಳ ಅವಧಿ ಮೀರಿದ ಆಹಾರವನ್ನು ಕಡಿಮೆ ಬೆಲೆಗೆ ಖರೀದಿ ಮಾಡುತ್ತಿದ್ದ ಆರೋಪಿ, ಪೊಟ್ಟಣ ಬದಲಿಸಿ ಮಾರಾಟ ಮಾಡುತ್ತಿದ್ದ. ಇಂಥ ಆಹಾರ ಸೇವನೆಯಿಂದ ಜನರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ₹ 10 ಲಕ್ಷ ಮೌಲ್ಯದ ಚಾಕೊಲೇಟ್ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಸಿಸಿಬಿ ಪೊಲೀಸರು ಹೇಳಿದರು.

ಬಸ್ಸಿನ ಚಕ್ರ ಹರಿದು ಗೃಹಿಣಿ ಸಾವು

ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಅಪಘಾತ: ಪತಿ, ಮಗು ಅಪಾಯದಿಂದ ಪಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲ್ಕ್‌ಬೋರ್ಡ್ ಜಂಕ್ಷನ್ ಬಳಿ ಬಿಎಂಟಿಸಿ ಬಸ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಬಸ್ಸಿನ ಚಕ್ರ ತಲೆ ಮೇಲೆ ಹರಿದು ಗೃಹಿಣಿ ಸೀಮಾ (21) ಸ್ಥಳದಲ್ಲೇ ಮೃತಪಟ್ಟಿದ್ದಾರೆ.


ಸೀಮಾ

‘ಸಿಂಗಸಂದ್ರದ ನಿವಾಸಿ ಸೀಮಾ, ಪತಿ ಗುರುಮೂರ್ತಿ ಹಾಗೂ ಒಂದೂವರೆ ವರ್ಷದ ಪುತ್ರಿ ಜೊತೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಚಾಲಕ ಸೋಮಶೇಖರ್ ಅವರನ್ನು ಬಂಧಿಸಲಾಗಿದೆ. ಬಸ್ ಜಪ್ತಿ ಮಾಡಲಾಗಿದೆ’ ಎಂದು ಮಡಿವಾಳ ಸಂಚಾರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ಪೊಲೀಸರಿಂದ ಬಿಎಂಟಿಸಿ ಬಸ್ ಜಪ್ತಿ
- ಬೈಕ್‌ನಲ್ಲಿ ಚಲಿಸುತ್ತಿದ್ದವರಿಗೆ ಡಿಕ್ಕಿ

‘ವಿಜಯನಗರ ಜಿಲ್ಲೆಯ ಗುರುಮೂರ್ತಿ ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಬೆಸ್ಕಾಂನಲ್ಲಿ ಲೈನ್‌ಮೆನ್ ಕೆಲಸ ಮಾಡುತ್ತಿದ್ದರು. ಸಿಂಗಸಂದ್ರದಲ್ಲಿ ಬಾಡಿಗೆ ಮನೆಯಲ್ಲಿ ಪತಿ ಹಾಗೂ ಮಗುವಿನ ಜೊತೆ ನೆಲೆಸಿದ್ದರು. ಕೆಲಸ ನಿಮಿತ್ತ ಬುಧವಾರ ಸಂಜೆ ದ್ವಿಚಕ್ರ ವಾಹನದಲ್ಲಿ ಪತ್ನಿ ಮಗುವನ್ನು ಕೂರಿಸಿಕೊಂಡು ರೂಪೇನ್ ಅಗ್ರಹಾರ ಮುಖ್ಯರಸ್ತೆ ಮೂಲಕ ಸಿಲ್ಕ್‌ಬೋರ್ಡ್ ಜಂಕ್ಷನ್‌ನತ್ತ ಹೊರಟಿದ್ದರು’.

‘ಸಿಲ್ಕ್‌ಬೋರ್ಡ್ ಮೇಲ್ಸೇತುವೆ ಬಳಿ ದ್ವಿಚಕ್ರ ವಾಹನ ತೆರಳುತ್ತಿತ್ತು. ಅತೀ ವೇಗವಾಗಿ ಬಂದ ಬಿಎಂಟಿಸಿ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಗುರುಮೂರ್ತಿ ಹಾಗೂ ಮಗು, ರಸ್ತೆಯ ಪಕ್ಕಕ್ಕೆ ಬಿದ್ದಿದ್ದರು. ರಸ್ತೆಯಲ್ಲಿ ಬಿದ್ದಿದ್ದ ಸೀಮಾ ತಲೆ ಮೇಲೆಯೇ ಬಸ್ಸಿನ ಚಕ್ರ ಹರಿದು ಹೋಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸೀಮಾ ಸ್ಥಳದಲ್ಲೇ ಮೃತಪಟ್ಟರು. ಪತಿ ಹಾಗೂ ಮಗು ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ’ ಎಂದು ಹೇಳಿವೆ.

ನಗರದಲ್ಲಿ ಇಂದು

ನೂತನ ಕಟ್ಟಡ ‘ಜಯಂತ’ ಭೂಮಿ ಪೂಜೆ: ಸಾನ್ನಿಧ್ಯ: ವಿಶ್ವಪ್ರಸನ್ನತೀರ್ಥ ಶ್ರೀಪಾದ ಸ್ವಾಮೀಜಿ, ಅತಿಥಿ:ಎಂ. ಎನ್. ವೆಂಕಟಾಚಲಯ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಮತಿ, ಗಿರಿನಗರ, ಬೆಳಿಗ್ಗೆ 8

ಸುಸ್ಥಿರತೆಗಾಗಿ ಸಹಯೋಗ–ಉದ್ಯಮಶೀಲತೆಯ ಸಾಧ್ಯತೆ, ವಿಸ್ತರಣೆಗಳ ಕುರಿತು ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನೆ: ಸುರೇಶ್ ಹಬ್ಬೀಕರ್, ಅತಿಥಿಗಳು: ಯು. ಚಂದ್ರಶೇಖರ್, ಸೋಮೇಶ್, ವೇಣುಗೋಪಾಲ್, ಜಯರಾಮ್ ಎಚ್. ಆರ್., ಅರ್ಹನ್ ಸ್ಥಾಪಿತ್, ಬಸಣ್ಣ ಪಟಗುಂಡಿ, ನೀರಜಾ, ಸಂದೀಪ್ ನಾಯರ್, ಸೌಂದರ್ಯ ಪಿ. ಮಂಜಪ್ಪ, ಆಯೋಜನೆ ಮತ್ತು ಸ್ಥಳ: ಅವನಿ ಆರ್ಚರ್ಡ್ಸ್ ಸಾವಯವ ತೋಟ, ಸೊಂಡೇಕೊಪ್ಪ, ಬೆಳಿಗ್ಗೆ 9.30

‘ಕಲಾಂಜಲಿ’ ವಾರ್ಷಿಕ ಸಾಂಸ್ಕೃತಿಕ ಉತ್ಸವ: ಅಧ್ಯಕ್ಷತೆ: ಎ.ಸಿ. ಚಂದ್ರಶೇಖರ್ ರಾಜು, ಅತಿಥಿಗಳು: ಬಿ.ಆರ್. ಛಾಯಾ, ಪೂಜಾ ಗಾಂಧಿ, ಸಮನ್ವಿತಾ ಶರ್ಮಾ, ಸ್ಥಳ: ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಯಲಹಂಕ, ಬೆಳಿಗ್ಗೆ 10


ಪೂಜಾ ಗಾಂಧಿ

ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ: ಎಂ.ಡಿ ಪಲ್ಲವಿ, ಅಧ್ಯಕ್ಷತೆ: ವಿಷ್ಣು ಭರತ್ ಎ.ಎಸ್., ಉಪಸ್ಥಿತಿ: ಎಸ್. ಸಿ. ಶರ್ಮ, ಆರ್.ವಿ. ವಿಜಯ್ ಭಾಸ್ಕರ್, ಎ. ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30


ಎಂ.ಡಿ.ಪಲ್ಲವಿ

ಮಂಗಳ ಘಂಟಾರಾಧನ ಪೂಜಾ ಮಹೋತ್ಸವ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸುಬುಧೇಂದ್ರ ತೀರ್ಥ ಸ್ವಾಮೀಜಿ, ಸ್ಥಳ: ಬ್ರಹ್ಮಚೈತನ್ಯ ಮಂದಿರ, ಬನಶಂಕರಿ, ಬೆಳಿಗ್ಗೆ 10.30

ಕರ್ನಾಟಕ 50 ರ ಸಂಭ್ರಮ, ‘ರಾಜ್‌ಕುಮಾರ್ ರತ್ನ ಪ್ರಶಸ್ತಿ’, ‘ಅಪ್ಪು ಸೇವಾ ಪುರಸ್ಕಾರ’ ಪ್ರಶಸ್ತಿಗಳ ಪ್ರದಾನ: ಉದ್ಘಾಟನೆ: ಶಂಕರ ಬಿದರಿ, ಸನ್ಮಾನ: ಅಶ್ವಿನಿ ಪುನೀತ್‌ರಾಜ್‌ಕುಮಾರ್, ಎಂ.ಎನ್. ಅನುಚೇತ್, ಅಧ್ಯಕ್ಷತೆ: ಬಿ.ಕೆ. ಶಿವರಾಂ, ಅತಿಥಿಗಳು: ಉಮೇಶ್ ಬಣಕಾರ್, ಪ್ರಕಾಶ್‌ರೆಡ್ಡಿ, ಪ್ರಶಸ್ತಿ ಪುರಸ್ಕೃತರು: ಜಿ.ಎ. ಬಾವಾ, ಬಿ.ಬಿ. ಅಶೋಕ್ ಕುಮಾರ್, ಕೆ. ಮೋಹನ್‌ರಾವ್, ಗಿರಿಜಾ ಲೋಕೇಶ್, ಎನ್. ಜಯರಾಮ್, ಎ. ಅಮೃತರಾಜ್, ಕೆ.ಸಿ. ಜಗನ್ನಾಥರೆಡ್ಡಿ, ಬಿ. ಮಹಾದೇವಸ್ವಾಮಿ, ರಾಮಚಂದ್ರ, ಎಂ. ಬಸವರಾಜ ಪಡುಕೋಟೆ, ಎಸ್.ಎ. ಮಾರುತಿ, ಆಯೋಜನೆ: ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್ ಸೇವಾ ಸಮಿತಿ, ಸ್ಥಳ: ಬಾಪು ಸಭಾಂಗಣ, ಗಾಂಧಿಭವನ. ಶಿವಾನಂದ ವೃತ್ತ, ಬೆಳಿಗ್ಗೆ 11

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ರಾಷ್ಟ್ರೀಯ ಸಮಾವೇಶ: ಅತಿಥಿಗಳು: ಅರವಿಂದ್ ಜಾಧವ್, ಶ್ರೀನಿವಾಸನ್, ಬಿ.ಎಸ್. ರಾಗಿಣಿ ನಾರಾಯಣ್, ಅಮಿಯಾ ಬೆಹೆರಾ, ಪಿ. ದಯಾನಂದ ಪೈ, ಸ್ಥಳ: ಬಿ.ಎಂ.ಎಸ್ ಎಂಜಿನಿಯರಿಂಗ್ ಕಾಲೇಜು, ಮಧ್ಯಾಹ್ನ 2

ರಾಜಾಜಿನಗರ ಕದಳಿ ಮಹಿಳಾ ವೇದಿಕೆ ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜ ಮೂರ್ತಿ, ಅತಿಥಿಗಳು: ಪ್ರಮೀಳಾ ಗರಡಿ, ಎಸ್. ಆರ್. ಪಾಟೀಲ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಕಂಬಿ ಸಿದ್ಧರಾಮಣ್ಣ ವಿದ್ಯಾರ್ಥಿನಿಲಯ, ಬಸವೇಶ್ವರನಗರ, ಸಂಜೆ 5

ಚೈತನ್ಯ ಸಂಜೆ: ಅಧ್ಯಕ್ಷತೆ: ಶಾಂತಾಮಣಿ ಮೃತ್ಯುಂಜಯ, ‘ಶರಣರ ದೃಷ್ಟಿಯಲ್ಲಿ ದೈವವನ್ನು ಕಾಣುವ ಪರಿ’ ಕುರಿತ ಉಪನ್ಯಾಸ: ಎಸ್.ಎಂ. ಶಿವಪ್ಪ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ನಾ. ಮಲ್ಲಿಕಾರ್ಜುನ, ಸ್ಥಳ: ಜೆ.ಎಸ್.ಎಸ್. ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 5.30

ಬಹುಭಾಷ ಸಂಗೀತ ಸ್ಪರ್ಧೆಯ ಬಹುಮಾನ ವಿತರಣೆ: ಆರ್.ಪಿ. ಮೋಹನ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಉಪಸ್ಥಿತಿ: ಕವಿತಾ ಶರ್ಮ ಸಿ., ಟಿ. ಸುಂದರ್, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ: 6

‘36 ಅಲ್ಲ 63’ ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ಶಾಂತಕುಮಾರ್, ಆಯೋಜನೆ: ಪಾಪು ಕಲಾವಿದರ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ: 6.30

'ಚಾವುಂಡರಾಯ' ನಾಟಕ ಪ್ರದರ್ಶನ: ರಚನೆ: ಜಯರಾಮ್ ರಾಯಪುರ, ನಿರ್ದೇಶನ: ಹುಲುಗಪ್ಪ ಕಟ್ಟಿಮನಿ, ಸಂಗೀತ: ದಿಗ್ವಿಜಯ ಹೆಗ್ಗೋಡು, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ: 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಗಲಾಟೆ: ವ್ಯಕ್ತಿ ಕೊಲೆ

ಬೆಂಗಳೂರು: ಮಲಗುವ ಜಾಗದ ವಿಚಾರವಾಗಿ ನಡೆದಿದ್ದ ಗಲಾಟೆಯಲ್ಲಿ ಅಪರಿಚಿತರೊಬ್ಬರನ್ನು ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಆರ್.ಟಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸ್ಥಳೀಯ ನಿವಾಸಿ ಸೈಯದ್ ಕಮ್ರಾನ್ ಹಾಗೂ ವಿಶಾಲ್ ಅಹಿವದಾಸ್ ಬಂಧಿತರು. ಕೊಲೆಯಾದ ವ್ಯಕ್ತಿಯ ಹೆಸರು ಹಾಗೂ ವಿಳಾಸ ಸದ್ಯಕ್ಕೆ ಪತ್ತೆಯಾಗಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಂಧಿತ ಆರೋಪಿ ಕಮ್ರಾನ್ ವಿರುದ್ಧ ಈ ಹಿಂದೆಯೇ ಪ್ರಕರಣವೊಂದು ದಾಖಲಾಗಿತ್ತು. ಕುಟುಂಬದವರು ಈತನನ್ನು ಮನೆಯಿಂದ ಹೊರಗೆ ಹಾಕಿದ್ದರು. ಅಂದಿನಿಂದಲೇ ಈತ, ರಸ್ತೆ ಪಕ್ಕದಲ್ಲಿ ಹಾಗೂ ಖಾಲಿ ಕಟ್ಟಡಗಳಲ್ಲಿ ಮಲಗುತ್ತಿದ್ದ. ಆರೋಪಿ ವಿಶಾಲ್ ಸಹ ಮನೆಯಿಂದ ದೂರವಿದ್ದ. ಮಲಗುವ ಸ್ಥಳದಲ್ಲಿ ಇಬ್ಬರಿಗೂ ಪರಿಚಯವಾಗಿ ಸ್ನೇಹಿತರಾಗಿದ್ದರು’ ಎಂದು ತಿಳಿಸಿವೆ.

‘ಠಾಣೆ ವ್ಯಾಪ್ತಿಯಲ್ಲಿರುವ ಕೃಷ್ಣಪ್ಪ ಕಾಂಪ್ಲೆಕ್ಸ್ ಕಟ್ಟಡದ ಕೆಳ ಮಹಡಿಯಲ್ಲಿ ಅಪರಿಚಿತ ಮಲಗುತ್ತಿದ್ದರು. ಅದೇ ಜಾಗದಲ್ಲಿ ಕಮ್ರಾನ್ ಸಹ ಆಗಾಗ ಬಂದು ಮಲಗುತ್ತಿದ್ದರು. ಡಿ. 11ರಂದು ರಾತ್ರಿ ಅಪರಿಚಿತ ಬೇಗನೇ ಬಂದು ಸ್ಥಳದಲ್ಲಿ ಮಲಗಿದ್ದರು. ತಡರಾತ್ರಿ ಸ್ಥಳಕ್ಕೆ ಬಂದು ಅವರನ್ನು ಎಬ್ಬಿಸಿದ್ದ ಆರೋಪಿ ಕಮ್ರಾನ್, ಬೇರೆಡೆ ಹೋಗಿ ಮಲಗುವಂತೆ ಹೇಳಿದ್ದರು. ವಿಶಾಲ್ ಸಹ ಕಮ್ರಾನ್ ಜೊತೆ ಬಂದಿದ್ದ. ಇಬ್ಬರ ನಡುವೆ ಮಾತಿಗೆ ಮಾತು ಬೆಳೆದಿತ್ತು. ಇದೇ ಸಂದರ್ಭದಲ್ಲಿ ಕಮ್ರಾನ್ ಹಾಗೂ ವಿಶಾಲ್, ಅಪರಿಚಿತ ವ್ಯಕ್ತಿ ಮೇಲೆ ಹಲ್ಲೆ ಮಾಡಿದ್ದರು. ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ಸ್ಥಳದಿಂದ ಪರಾರಿಯಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಜಧನ ಪಾವತಿ ವ್ಯವಸ್ಥೆ ಸುಧಾರಿಸಿ’

ಬೆಂಗಳೂರು: ‘ಕಲ್ಲುಗಣಿಗಾರಿಕೆಯ ರಾಜಧನ ಪಾವತಿ ವ್ಯವಸ್ಥೆಯನ್ನು ಅಧಿವೇಶನದ ನಂತರ ಸುಧಾರಿಸಬೇಕು‘ ಎಂದು ಸರ್ಕಾರವನ್ನು ಆಗ್ರಹಿಸಿರುವ ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ಸ್ ಓನರ್ಸ್ ಅಸೋಸಿಯೇಷನ್, ಇಲ್ಲದಿದ್ದರೆ ಕಲ್ಲುಗಣಿಗಾರಿಕೆ ಯನ್ನು ನಿಲ್ಲಿಸುವುದಾಗಿ’ ಎಂದು ಎಚ್ಚರಿಕೆ ನೀಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ರವೀಂದ್ರ ಶೆಟ್ಟಿ, ‘ಕಟ್ಟಡ ಕಲ್ಲು ಗಣಿಗಾರಿಕೆ ನೀತಿಗೆ ಸಂಬಂಧಿಸಿದಂತೆ ಸರ್ಕಾರ ಕೂಡಲೇ ಸಭೆ ಕರೆದು ಸಮಸ್ಯೆ ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು’ ಎಂದು ತಿಳಿಸಿದರು.

‘ರಾಜಧನ ಪಾವತಿಯಲ್ಲಿ ದ್ವಿಮುಖ ನೀತಿ ಅನುಸರಿಸಲಾಗುತ್ತಿದೆ. ಕಟ್ಟಡ ಕಲ್ಲು ಗುತ್ತಿಗೆದಾರರು ಸರ್ಕಾರಕ್ಕೆ ರಾಜಧನ ಪಾವತಿಸಬೇಕು. ಸರ್ಕಾರಿ, ಖಾಸಗಿ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರು ಸಹ ಕಟ್ಟಡ ಕಲ್ಲು ಸಾಮಾಗ್ರಿಗಳನ್ನು ರವಾನಿಸಲು ರಾಜಧನ ಪಾವತಿಸಿ ಪರವಾನಗಿ ಪಡೆದುಕೊಂಡು ಕಾಮಗಾರಿಗಳನ್ನು ಮಾಡಬೇಕೆಂಬ ನಿಯಮವಿದ್ದು, ಅದನ್ನು ಬದಲಾವಣೆ ಮಾಡಬೇಕು’ ಎಂದು ಒತ್ತಾಯಿಸಿದರು. ಅಸೋಸಿಯೇಷನ್ ಉಪಾಧ್ಯಕ್ಷ ಕಿರಣ್ ಜೈನ್ ಬಿ. ಆರ್., ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್ ಇದ್ದರು.

75 ಲಕ್ಷ ದೋಚಲು ಸುಳ್ಳು ಪ್ರಕರಣ ಸೃಷ್ಟಿಸಿದ್ದ ಪ್ರಕರಣ

ಬಿಡದಿ ಇನ್‌ಸ್ಪೆಕ್ಟರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 75 ಲಕ್ಷ ದೋಚಲು ಸುಳ್ಳು ಪ್ರಕರಣ ಸೃಷ್ಟಿಸಿದ್ದ ಆರೋಪದಡಿ ಬಿಡದಿ ಠಾಣೆಯ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಇದರ ಬೆನ್ನಲ್ಲೇ ಪ್ರಕರಣದ ಮಧ್ಯವರ್ತಿಯಾಗಿದ್ದ ಆರೋಪಿ ಲೋಕನಾಥ್ ಸಿಂಗ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬ್ಯಾಟರಾಯನಪುರ ಠಾಣೆಯ ಇನ್‌ಸ್ಪೆಕ್ಟರ್ ಆಗಿದ್ದ ಸಂದರ್ಭದಲ್ಲಿ ಶಂಕರ್ ನಾಯಕ್ ವಿರುದ್ಧ ಕೇಳಿಬಂದಿದ್ದ ಆರೋಪದ ಬಗ್ಗೆ ವಿಚಾರಣೆ ನಡೆಸಿದ್ದ ಬ್ಯಾಟರಾಯನಪುರ ಉಪವಿಭಾಗದ ಎಸಿಪಿ ಭರತ್ ರೆಡ್ಡಿ, ಪುರಾವೆಗಳ ಸಮೇತ ಬ್ಯಾಟರಾಯನಪುರ ಠಾಣೆಗೆ ದೂರು ನೀಡಿದ್ದರು.

ಐಪಿಸಿ 409 (ಸಾರ್ವಜನಿಕ ಸೇವಕರಿಂದ ನಂಬಿಕೆಯ ಉಲ್ಲಂಘನೆ), ಐಪಿಸಿ 465 (ನಕಲಿ ದಾಖಲೆ ಸೃಷ್ಟಿ), ಐಪಿಸಿ 201 (ಸಾಕ್ಷ್ಯಗಳನ್ನು ಕಣ್ಮರೆ ಮಾಡುವುದು), ಐಪಿಸಿ 110 (ಅಪರಾಧಕ್ಕೆ ಕುಮ್ಮಕ್ಕು) ಆರೋಪ ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಹಾಗೂ ಲೋಕನಾಥ್ ಸಿಂಗ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದರ ತನಿಖೆಯನ್ನು ಸಿಸಿಬಿ ಮುಂದುವರಿಸಿದೆ.



ಶಂಕರ್ ನಾಯಕ್

ಅಮಾನತುಗೊಳಿಸಿ ಐಜಿಪಿ ಆದೇಶ: ಪ್ರಕರಣದ ಬಗ್ಗೆ ಬೆಂಗಳೂರು ಪೊಲೀಸ್ ಕಮಿಷನರ್ ಬಿ. ದಯಾನಂದ್, ಕೇಂದ್ರ ವಲಯದ ಐಜಿಪಿ ರವಿಕಾಂತೇಗೌಡ ಅವರಿಗೆ ಇತ್ತೀಚೆಗೆ ವರದಿ ಸಲ್ಲಿಸಿದ್ದರು. ವರದಿ ಪರಿಶೀಲಿಸಿರುವ ರವಿಕಾಂತೇಗೌಡ, ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಅವರನ್ನು ಅಮಾನತು ಮಾಡಿ ಬುಧವಾರ ಆದೇಶ ಹೊರಡಿಸಿದ್ದಾರೆ.

'ಇನ್‌ಸ್ಪೆಕ್ಟರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜೊತೆಗೆ, ಪ್ರಕರಣ ಸಂಬಂಧ ಕಮಿಷನರ್ ಸಹ ವರದಿ ನೀಡಿದ್ದಾರೆ. ಹೀಗಾಗಿ, ಶಂಕರ್ ನಾಯಕ್‌ನನ್ನು ಸೇವೆಯಿಂದ ಅಮಾನತುಗೊಳಿಸಿ ಇಲಾಖೆ ವಿಚಾರಣೆಗೆ ಆದೇಶಿಸಲಾಗಿದೆ' ಐಜಿಪಿ ರವಿಕಾಂತೇಗೌಡ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಉದ್ಯಮಿ ಕರೆತಂದಿದ್ದ ಮಧ್ಯವರ್ತಿ

'2022ರ ಸೆಪ್ಟೆಂಬರ್‌ನಲ್ಲಿ ಉದ್ಯಮಿ ಹರೀಶ್ ಅವರಿಗೆ ಸೇರಿದ್ದ ₹ 75 ಲಕ್ಷವನ್ನು ಚಾಲಕ ಸಂತೋಷ್ ಕದ್ದೊಯ್ದಿದ್ದ. ಈ ವಿಚಾರ ಮಧ್ಯವರ್ತಿ ಲೋಕನಾಥ್ ಸಿಂಗ್‌ಗೆ ಗೊತ್ತಾಗಿತ್ತು. ಆತನೇ ಹರೀಶ್ ಅವರನ್ನು ಶಂಕರ್ ನಾಯಕ್ ಬಳಿ ಕರೆತಂದಿದ್ದ. ಆರೋಪಿಯನ್ನು ಹುಡುಕಿಕೊಡಲು ₹ 20 ಲಕ್ಷ ಲಂಚಕ್ಕೆ ಇನ್‌ಸ್ಪೆಕ್ಟರ್ ಬೇಡಿಕೆ ಇರಿಸಿದ್ದ. ನಂತರ, ಸುಳ್ಳು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ ₹ 72 ಲಕ್ಷ ಜಪ್ತಿ ಮಾಡಿದ್ದ. ಆದರೆ, ಹಣವನ್ನು ದೂರುದಾರರಿಗೆ ನೀಡದೇ ಸ್ವಂತಕ್ಕೆ ಬಳಸಿಕೊಂಡಿದ್ದನೆಂಬ ಆರೋಪವಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.



ಲೋಕನಾಥ್ ಸಿಂಗ್

ಅನಧಿಕೃತ ಕ್ಲಿನಿಕ್‌ಗಳಿಗೆ ಬೀಗ

ದಾಬಸ್‌ಪೇಟೆ: ಸೋಂಪುರ ಹೋಬಳಿಯಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಗುರುವಾರ ಕಾರ್ಯಾಚರಣೆ ನಡೆಸಿ ಆರು ಅನಧಿಕೃತ ಕ್ಲಿನಿಕ್‌ಗಳಿಗೆ ನೋಟಿಸ್ ಅಂಟಿಸಿದ್ದಾರೆ. ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಹೇಮಾವತಿ ನೇತೃತ್ವದ ತಂಡವು ದಾಬಸ್ ಪೇಟೆಯ ಮೂಲವ್ಯಾಧಿ ಚಿಕಿತ್ಸಾಲಯ, ಪೆಮ್ಮನಹಳ್ಳಿಯ ತಿರುಮಲ, ನರಸೀಪುರದ ಮಾರುತಿ ಹಾಗೂ ನಿಡವಂದದ ಶ್ರೀಮಾರುತಿ, ಶ್ರೀನಂದಿ ಮತ್ತು ಶ್ರೀಸಿದ್ಧಗಂಗಾ ಕ್ಲಿನಿಕ್‌ಗಳ ಬಾಗಿಲಿನ ಬೀಗಕ್ಕೆ ಸೀಲ್ ಹಾಕಿ, ನೋಟಿಸ್ ಅಂಟಿಸಿದರು.

1,434 ನಕಲಿ ವೈದ್ಯರ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಬಾಹಿರವಾಗಿ ನಡೆಸಲಾಗುತ್ತಿರುವ ಕ್ಲಿನಿಕ್, ಪ್ರಯೋಗಾಲಯಗಳ ಮೇಲೆ ದಾಳಿ ನಡೆಸುತ್ತಿರುವ ಆರೋಗ್ಯ ಇಲಾಖೆ ಅಧಿಕಾರಿಗಳ ತಂಡ, 2007ರಿಂದ ಕಳೆದ ನವೆಂಬರ್ ಅಂತ್ಯಕ್ಕೆ 1,434 ನಕಲಿ ವೈದ್ಯರ ಮೇಲೆ ಕಾನೂನಿನ ಅಡಿ ಪ್ರಕರಣ ದಾಖಲಿಸಿದೆ.

ವೈದ್ಯಕೀಯ ಪ್ರಮಾಣ ಪತ್ರ ಹೊಂದಿರದಿರುವುದು, ಅಕ್ರಮವಾಗಿ ಕ್ಲಿನಿಕ್ ನಡೆಸುತ್ತಿರುವುದು, ನಕಲಿ ಪ್ರಮಾಣ ಪತ್ರ ಹೊಂದಿರುವುದು ಸೇರಿ ವಿವಿಧ ಕಾರಣಗಳಿಂದ ಕ್ರಮ ಕೈಗೊಳ್ಳಲಾಗಿದೆ. ಅಲೋಪತಿ, ಹೋಮಿಯೋಪತಿ, ಆಯುರ್ವೇದ, ನ್ಯಾಚುರೋಪತಿ, ಯುನಾನಿ ಹಾಗೂ ಸಿದ್ಧ ವೈದ್ಯರು ಸೇರಿದ್ದಾರೆ. ನಕಲಿ ವೈದ್ಯರು ಹಾಗೂ ಕ್ಲಿನಿಕ್‌ಗಳ ಪತ್ತೆ ಕಾರ್ಯ ಕೆಲ ದಿನಗಳಿಂದ ಚುರುಕುಗೊಂಡಿದೆ ಎನ್ನುವುದು ಇಲಾಖೆ ಮೂಲಗಳಿಂದ ತಿಳಿದುಬಂದಿದೆ.

ಈಗಾಗಲೇ ದಾಖಲಿಸಲಾದ ಪ್ರಕರಣಗಳಲ್ಲಿ ಬೀದರ್‌ನಲ್ಲಿ 423 ನಕಲಿ ವೈದ್ಯರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಕೋಲಾರದಲ್ಲಿ 179, ಬೀದರ್‌ನಲ್ಲಿ 170 ಪ್ರಕರಣಗಳನ್ನು ದಾಖಲಿಸಲಾಗಿದೆ. ಅಧಿಕ ಸಂಖ್ಯೆಯಲ್ಲಿ ನಕಲಿ ವೈದ್ಯರು ಪತ್ತೆಯಾದ ಜಿಲ್ಲೆಗಳ ಸಾಲಿನಲ್ಲಿ ಈ ಜಿಲ್ಲೆಗಳು ಮೊದಲ ಮೂರು ಸ್ಥಾನದಲ್ಲಿವೆ.

'ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕೆಪಿಎಂಇ ಕಾಯ್ದೆಯಡಿ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆ) ಕಡ್ಡಾಯವಾಗಿ ನೋಂದಣಿಯಾಗಬೇಕು. ಆದರೆ, ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದ ನಕಲಿ ವೈದ್ಯರು ಅನಧಿಕೃತವಾಗಿ ಕ್ಲಿನಿಕ್ ಮತ್ತು ಪ್ರಯೋಗಾಲಯ ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಇಂತಹವರ ವಿರುದ್ಧ ಕಾನೂನಿನ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

17ಕ್ಕೆ ವಿಷ್ಣು ಅಭಿಮಾನಿಗಳಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ವಿಷ್ಣುವರ್ಧನ್

ಬೆಂಗಳೂರು: ನಟ ದಿವಂಗತ ವಿಷ್ಣುವರ್ಧನ್ ಅವರ ಪುಣ್ಯಭೂಮಿಯನ್ನು ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿರುವ ಡಾ.ವಿಷ್ಣುವರ್ಧನ್ ಅಭಿಮಾನಿ ಸಂಘಗಳ ಒಕ್ಕೂಟ, ಇದೇ 17ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

'ಅಭಿಮಾನ್ ಸ್ಟುಡಿಯೊದಲ್ಲಿ ವಿಷ್ಣುವರ್ಧನ್ ಅವರ ಪುಣ್ಯಭೂಮಿ ಇದೆ. ಸ್ಟುಡಿಯೊ ಮಾಲೀಕರು ಅಭಿಮಾನಿಗಳಿಗೆ ಒಳಪ್ರವೇಶಿಸಲು ನಿರ್ಬಂಧಗಳನ್ನು ವಿಧಿಸುವುದರ ಜೊತೆಗೆ, ಅಲ್ಲಿ ವಿಷ್ಣುವರ್ಧನ್ ಅವರ ಜನ್ಮದಿನ ಮತ್ತು ಪುಣ್ಯಸ್ಮರಣೆಗೆ ಪ್ರತಿವರ್ಷ ಹಲವಾರು ತೊಂದರೆಗಳನ್ನು ನೀಡುತ್ತಿದ್ದಾರೆ. ಈ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರಿಗೆ ಅಹವಾಲು ಸಲ್ಲಿಸಲಾಗಿದೆ. ನಟನಿಗೆ ಎರಡು ಕಡೆ ಸ್ಮಾರಕ, ಪುಣ್ಯಭೂಮಿ ಮಾಡುವುದು ಸರ್ಕಾರಕ್ಕೆ ಕಷ್ಟವಾದರೆ, ಆ ಜಮೀನಿಗೆ ತಗಲುವ ವೆಚ್ಚ ಮತ್ತು ಪುಣ್ಯಭೂಮಿ ಅಭಿವೃದ್ಧಿಗೆ ಬೇಕಾಗುವ ಹಣವನ್ನು ಅಭಿಮಾನಿಗಳೇ ನೀಡುವುದಾಗಿ ತಿಳಿಸಿರುತ್ತೇವೆ' ಎಂದು ಒಕ್ಕೂಟದ ಮುಖಂಡ ವೀರಕಪುತ್ರ ಶ್ರೀನಿವಾಸ ಹೇಳಿದ್ದಾರೆ.

'ಬದುಕಿನುದ್ದಕ್ಕೂ ಕಲಾರಸಿಕರನ್ನು ಮನೋರಂಜಿಸುತ್ತಾ, ನಾಡು–ನುಡಿ ರಕ್ಷಣೆಗಾಗಿ ಸದಾ ಸಿದ್ಧರಾಗಿದ್ದ ವಿಷ್ಣುವರ್ಧನ್ ಅವರು ಅಗಲಿ ಇದೇ 30ಕ್ಕೆ ಒಂದೂವರೆ ದಶಕ ಕಳೆಯಲಿದೆ. ಇಷ್ಟು ವರ್ಷವಾದರೂ ಅವರು ನೋವಿನಿಂದ ಮುಕ್ತವಾಗಿಲ್ಲ ಎನ್ನುವುದು ನಾಡಿಗೆ ನಾಡೇ ತಲೆ ತಗ್ಗಿಸಬೇಕಾದ ಸಂಗತಿ. ಆದ್ದರಿಂದ ಬೃಹತ್ ಪ್ರತಿಭಟನೆ ಮಾಡುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

'ವಿಷ್ಣುವರ್ಧನ್ ಅವರ ಸ್ಮಾರಕ ಮೈಸೂರಿನಲ್ಲಿ ಲೋಕಾರ್ಪಣೆಗೊಂಡಿದ್ದರೂ ನಾಡಿನ ಪ್ರತಿ ಅಭಿಮಾನಿಯೂ ಅಭಿಮಾನ್ ಸ್ಟುಡಿಯೊದಲ್ಲಿಯೇ ವಿಷ್ಣುವರ್ಧನ್ ಇರುವಿಕೆಯನ್ನು ನಂಬಿದ್ದಾರೆ. ಅವರ ಪ್ರತಿ ಹುಟ್ಟುಹಬ್ಬ ಮತ್ತು ಪುಣ್ಯಸ್ಮರಣೆಯ ದಿನಗಳಂದು ಐವತ್ತು ಸಾವಿರಕ್ಕೂ ಹೆಚ್ಚು ಜನ ಪುಣ್ಯಭೂಮಿಗೆ ಬಂದು, ದರ್ಶನಮಾಡಿ ಹೋಗುತ್ತಿದ್ದಾರೆ. ಸ್ಮಾರಕ ಎಲ್ಲೇ ಇರಲಿ, ಪುಣ್ಯಭೂಮಿ ಮಾತ್ರ ಅಂತ್ಯಸಂಸ್ಕಾರಗೊಂಡ ಜಾಗದಲ್ಲಿಯೇ ಇರಲಿ ಎಂಬ ಮನೋಭಾವ ಪ್ರತಿ ಅಭಿಮಾನಿಯದ್ದಾಗಿದೆ' ಎಂದು ವೀರಕಪುತ್ರ ಶ್ರೀನಿವಾಸ ಹೇಳಿದರು.

ವಿಷ್ಣುವರ್ಧನ್ ಅವರ ಪುಣ್ಯಭೂಮಿ (ಸಮಾಧಿ) ವಿವಾದ ಈವರೆಗೂ ಅಂತ್ಯ ಕಾಣದಿರುವುದು ನೋವಿನ ಸಂಗತಿ

ವೀರಕಪುತ್ರ ಶ್ರೀನಿವಾಸ

ಡಾ.ವಿಷ್ಣುವರ್ಧನ್ ಅಭಿಮಾನಿ ಸಂಘಗಳ ಒಕ್ಕೂಟದ ಮುಖಂಡ

ವೆಂಕಟರಾಮಯ್ಯ ಸ್ಮಾರಕ ಉಪನ್ಯಾಸ ಇದೇ 17ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ ವತಿಯಿಂದ ಡಿಸೆಂಬರ್ 17ರಂದು 'ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಶತಮಾನೋತ್ಸವ ಸ್ಮಾರಕ' ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿರುವ ಉಪನ್ಯಾಸ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಭಾಗವಹಿಸಲಿದ್ದಾರೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ರೈಲ್ವೆ ಕಾಮಗಾರಿ ಮುಂದೂಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಂಕ್ಷನ್ ರೈಲ್ವೆ ಯಾರ್ಡ್ ಮರುನಿರ್ಮಾಣ ಕಾಮಗಾರಿಯನ್ನು ಕುಕ್ಕೆಸುಬ್ರಹ್ಮಣ್ಯದಲ್ಲಿ ನಡೆಯಲಿರುವ 'ಸುಬ್ರಹ್ಮಣ್ಯ ಷಷ್ಠಿ'ಯ ಬಳಿಕ ಕೈಗೊಳ್ಳಬೇಕು ಎಂದು ಕೆಪಿಸಿಸಿ ವಕ್ತಾರ ಶಂಕರ್ ಗುಹ ದ್ವಾರಕನಾಥ್ ರೈಲ್ವೆ ಇಲಾಖೆಯನ್ನು ಮನವಿ ಮಾಡಿದ್ದಾರೆ.

ಯಾರ್ಡ್ ಮರುನಿರ್ಮಾಣಕ್ಕಾಗಿ ಡಿ.14ರಿಂದ 22ರ ವರೆಗೆ 20 ರೈಲುಗಳ ಸಂಚಾರ ಸ್ಥಗಿತಗೊಳಿಸಲಾಗಿದೆ. 8 ರೈಲುಗಳನ್ನು ಭಾಗಶಃ ರದ್ದು ಮಾಡಲಾಗಿದೆ. 2 ರೈಲುಗಳು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಲಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದರು.

ಡಿ.18ರಂದು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಾಲಯದಲ್ಲಿ ಸುಬ್ರಹ್ಮಣ್ಯ ಷಷ್ಠಿ ನಡೆಯಲಿದೆ. ದೇಶ ಮತ್ತು ರಾಜ್ಯದ ವಿವಿಧ ಪ್ರದೇಶಗಳ ಲಕ್ಷಾಂತರ ಭಕ್ತರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಷಷ್ಠಿ ಸಮಯದಲ್ಲಿ ರೈಲು ಸಂಚಾರ ಇಲ್ಲದಿದ್ದರೆ ಭಕ್ತರಿಗೆ ಸುಬ್ರಹ್ಮಣ್ಯಕ್ಕೆ ತೆರಳಲು ಅನನುಕೂಲವಾಗಲಿದೆ. ಇದನ್ನು ತಪ್ಪಿಸಲು ಕಾಮಗಾರಿಯನ್ನು ಮುಂದೂಡಬೇಕು. ಡಿ. 20ರ ನಂತರ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಎಂದು ಶಂಕರ್ ಗುಹ ದ್ವಾರಕನಾಥ್ ಒತ್ತಾಯಿಸಿದ್ದಾರೆ.

ಸುಬ್ರಹ್ಮಣ್ಯ ಷಷ್ಠಿ ಸಮಯದಲ್ಲಿ ಭಕ್ತರಿಗೆ ಸಂಚರಿಸಲು ಅನುಕೂಲವಾಗುವಂತೆ ಕೆಎಸ್‌ಆರ್‌ಟಿಸಿ ಸಹಿತ ವಿವಿಧ ನಿಗಮಗಳ ಬಸ್‌ಗಳ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಸಾರಿಗೆ ಸಚಿವರಿಗೂ ಅವರು ಮನವಿ ಮಾಡಿದ್ದಾರೆ.

ಬಿಬಿಎಂಪಿ, ಜಲಮಂಡಳಿಗೆ ನೀಡಲಾಗಿದ್ದ 15ನೇ ಹಣಕಾಸು ಆಯೋಗದ ಅನುದಾನ

₹291 ಕೋಟಿ ಕ್ರಿಯಾಯೋಜನೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರ ಬಿಡುಗಡೆ ಮಾಡಿದ್ದ 15ನೇ ಹಣಕಾಸು ಆಯೋಗದ 2022–23ನೇ ಸಾಲಿನ ₹291 ಕೋಟಿ ಅನುದಾನದ ಕ್ರಿಯಾ-ಯೋಜನೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ.

ಬಿಬಿಎಂಪಿಯಲ್ಲಿ ನೀರು ಸರಬರಾಜು, ನೈರ್ಮಲ್ಯ, ಕೆರೆಗಳ ಪುನರುಜ್ಜೀವನ ಮತ್ತು ಘನತ್ಯಾಜ್ಯ ನಿರ್ವಹಣೆಗೆ 2023ರ ಮೇ 25ರಂದು ಹಣ ಬಿಡುಗಡೆ ಆಗಿತ್ತು. ಅದರಂತೆ ಸೆ.6ರಂದು ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯ-ಲ್ಲಿ ನಡೆದ ಸಭೆಯಲ್ಲಿ ಅಗತ್ಯವಿರುವ ಕಾಮಗಾರಿಗಳಿಗೆ ಕ್ರಿಯಾಯೋಜನೆ ರೂಪಿಸಲಾಗಿತ್ತು.

ಕ್ರಿಯಾಯೋಜನೆಯ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಡಿ.11ರಂದು 'ಸೂಕ್ಷ್ಮಮಟ್ಟದ ಕ್ರಿಯಾಯೋಜನೆ' ಕಾಮಗಾರಿಗಳ ಪಟ್ಟಿಗೆ ಸರ್ಕಾರ ಷರತ್ತುಬದ್ಧ ಅನುಮೋದನೆ ನೀಡಿದೆ.

ಅನುಮೋದನೆ ನೀಡಲಾಗಿರುವ ಕ್ರಿಯಾಯೋಜನೆಯ ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆ ಪಡೆದು, ₹10 ಕೋಟಿಗೆ ಕಡಿಮೆ ಇರದಂತೆ ಪ್ಯಾಕೇಜ್ ಮಾಡಿ, ಕೆಟಿಪಿಪಿ ಕಾಯ್ದೆಯಂತೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಕರೆಯಬೇಕು.

'ಸೂಕ್ಷ್ಮಮಟ್ಟದ ಕ್ರಿಯಾಯೋಜನೆ' ಕಾಮಗಾರಿಗಳ ಅನುಷ್ಠಾನದ ಪ್ರಗತಿ ಕುರಿತು ಪರಿಶೀಲನೆ ಮತ್ತು ಮೇಲ್ವಿಚಾರಣೆಗೆ ಆನ್‌ಲೈನ್ ತಂತ್ರಾಂಶ ಸಿದ್ಧಪಡಿಸಿ, ತಿಂಗಳುವಾರು ಪ್ರಗತಿಯನ್ನು ಅಪ್‌ಲೋಡ್ ಮಾಡಬೇಕು ಎಂದು ಷರತ್ತು ವಿಧಿಸಲಾಗಿದೆ.

ಒತ್ತುವರಿ ತೆರವಿನ ನಂತರ ಅಭಿವೃದ್ಧಿ: ಕೆರೆಗಳ ಪುನರುಜ್ಜೀವನ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಆರಂಭಿಸುವ ಮುನ್ನ ಒತ್ತುವರಿಗಳನ್ನು ತೆರವುಗೊಳಿಸಬೇಕು ಎಂದು ಕ್ರಿಯಾ ಯೋಜನೆಗೆ ಅನುಮತಿ ನೀಡಿರುವ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಕೆರೆಗಳ ಗ್ರಾಮ ನಕ್ಷೆ, ಸರ್ವೆ ನಕ್ಷೆಯಂತೆ ಗಡಿರೇಖೆಗಳನ್ನು ಸರಿಯಾಗಿ ಗುರುತಿಸಬೇಕು. ಯಾವುದೇ ಒತ್ತುವರಿ-ಗಳನ್ನು ತೆರವುಗೊಳಿಸಿದ ಮೇಲೆ ಕಾಮ-ಗಾರಿಗಳನ್ನು ಆರಂಭಿಸಬೇಕು ಎಂದು ಷರತ್ತು ವಿಧಿಸಲಾಗಿದೆ.

ಕ್ರಿಯಾಯೋಜನೆಗಳು ಒಟ್ಟು ₹291 ಕೋಟಿ

ಕೆರೆಗಳ ಕಾಮಗಾರಿ ಒಟ್ಟು ₹49 ಕೋಟಿ	
ಮಡಿವಾಳ ಕೆರೆ ಸಮಗ್ರ ಅಭಿವೃದ್ಧಿ	₹15
ಕಾಚರಕನಹಳ್ಳಿ ಕೆರೆ ಬಾಕಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ	₹4
ಗರುಡಾಚಾರ್‌ಪಾಳ್ಯ ಕೆರೆ–1, ಶೀಲವಂತನ ಕೆರೆ, ಮಹದೇವಪುರ ಕೆರೆ–1ರಲ್ಲಿ ಒಳಚರಂಡಿ ಮಾರ್ಗ ಬದಲು, ಸಿಲ್ಟ್ ಟ್ರ್ಯಾಪ್, ವೆಟ್‌ಲ್ಯಾಂಡ್ ಮರುಸ್ಥಾಪನೆ	₹4
ಕೋಗಿಲು ಕೆರೆ ಮತ್ತು ಕಟ್ಟಿಗೇನಹಳ್ಳಿ ಕೆರೆಯಲ್ಲಿ ಒಳಚರಂಡಿ ಮಾರ್ಗದ ಬದಲು, ಇತರೆ ಅಭಿವೃದ್ಧಿ ಕಾಮಗಾರಿ	₹4
ಲಿಂಗಧೀರನಹಳ್ಳಿ ಕೆರೆ–3ರಲ್ಲಿ ವೆಟ್‌ಲ್ಯಾಂಡ್, ಒಳಹರಿವು ಪ್ರಗತಿ ಹಾಗೂ ಇತರೆ ಕಾಮಗಾರಿ	₹2
ನರಸೀಪುರ ಕೆರೆ– 20, ನರಸೀಪುರ ಕೆರೆ–26 ಮತ್ತು ವೀರಸಾಗರ ಕೆರೆಯಲ್ಲಿ ಪುನರುಜ್ಜೀವನ ಮತ್ತು ಒಳಚರಂಡಿ ಮಾರ್ಗ ಬದಲು ಕಾಮಗಾರಿ	₹4
ಹಲಸೂರು ಕೆರೆಯಲ್ಲಿ ಹೂಳು ತೆಗೆಯುವುದು ಮತ್ತು ಇತರೆ ಕಾಮಗಾರಿ	₹9
ಯಲಹಂಕ ಕೆರೆಯ ಅಭಿವೃದ್ಧಿ	₹4
ಅಂಜನಾಪುರ ಕೆರೆ ಅಭಿವೃದ್ಧಿ ಮತ್ತು ಪ್ರಗತಿ ಕಾಮಗಾರಿ	₹3
ಕುಡಿಯುವ ನೀರಿನ ಕಾಮಗಾರಿ ಒಟ್ಟು ₹40 ಕೋಟಿ	
ಬಿಬಿಎಂಪಿ 8 ವಲಯಗಳಲ್ಲಿ ಕೊಳವೆಬಾವಿ ಪುನಶ್ಚೇತನ, ಹೊಸ ಕೊಳವೆಬಾವಿ, ಅಂತರ್ಜಲ ವೃದ್ಧಿಗೆ ಇಂಗುಗುಂಡಿ ಸ್ಥಾಪನೆ	₹20
2024ರ ಬೇಸಿಗೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆ	₹20
ಜಲಮಂಡಳಿ ಕಾಮಗಾರಿ ಒಟ್ಟು ₹73 ಕೋಟಿ	
ಹೈಗ್ರೌಂಡ್ಸ್ ಸೇವಾ ಜಲಾಗಾರದ ಸಾಮರ್ಥ್ಯ 5 ಎಂಎಲ್‌ಡಿ ವೃದ್ಧಿಗೆ ಕಾಮಗಾರಿ. ಸಗಾಯಪುರ, ಪುಲಕೇಶಿನಗರದಲ್ಲಿ ಪಂಪ್‌ಹೌಸ್, ಇತರೆ ಕಾಮಗಾರಿ	₹30
ರಾಚೇನಹಳ್ಳಿ ಕೆರೆ ಮತ್ತು ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಒಳಭಾಗದಲ್ಲಿ 10 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಸ್ಥಾಪನೆ	₹30
ಜೆ.ಪಿ ನಗರದ 24ನೇ ಮುಖ್ಯರಸ್ತೆಯಿಂದ ಡಾಲರ್ಸ್ ಕಾಲೊನಿಯ 4ನೇ ಮುಖ್ಯರಸ್ತೆವರೆಗೆ 3 ಒಳಚರಂಡಿ ಮಾರ್ಗ	₹13
ಘನತ್ಯಾಜ್ಯ ನಿರ್ವಹಣೆ ಒಟ್ಟು ₹129 ಕೋಟಿ	
ಇಂಧನ ಘಟಕ ಸ್ಥಾಪನೆಗೆ ಕೆಪಿಸಿಎಲ್‌ಗೆ ಬಾಕಿ ಮೊತ್ತ	₹30
ಮಿಟ್ಟಗಾನಹಳ್ಳಿ/ ಕಣ್ಣೂರಿನಲ್ಲಿ 1 ಎಂಎಲ್‌ಡಿ ದ್ರವತ್ಯಾಜ್ಯ ಸಂಸ್ಕರಣೆ ಘಟಕ ಸ್ಥಾಪನೆ	₹75
ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮಾರ್ಗಸೂಚಿಯಂತೆ ಭೂಭರ್ತಿ ತಾಣಗಳಲ್ಲಿ ಬಫರ್‌ಝೋನ್ ಸೃಷ್ಟಿ	₹3
ಬೆಲ್ಲಹಳ್ಳಿ ಭೂಭರ್ತಿ ಸ್ಥಳದ ಸುತ್ತಮುತ್ತ ನೀರುಗಾಲುವೆ ನಿರ್ಮಾಣ ಮತ್ತು ದ್ರವತ್ಯಾಜ್ಯ ನಿರ್ವಹಣೆ	₹21

ಬ್ಯಾಕ್‌ಲಾಗ್ ಪೂರ್ಣಕ್ಕೆ ಅವಕಾಶ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು (ಬಿಸಿಯು) ಪದವಿ ವಿದ್ಯಾರ್ಥಿಗಳಿಗೆ ಆಯ್ಕೆ ಆಧಾರಿತ ಕ್ರೆಡಿಟ್ ಸಿಸ್ಟಮ್ (ಸಿಬಿಸಿಎಸ್) ಅಡಿಯಲ್ಲಿ ಬ್ಯಾಕ್‌ಲಾಗ್ ವಿಷಯಗಳನ್ನು ಪೂರ್ಣಗೊಳಿಸಲು ಅವಕಾಶ ನೀಡಿದೆ.

ವಿದ್ಯಾರ್ಥಿಗಳ ಬೇಡಿಕೆಯನ್ನು ಪರಿಗಣಿಸಿ, ವಿಶ್ವವಿದ್ಯಾಲಯವು ಒಂದು ಬಾರಿ ಕ್ರಮದ ಅಡಿಯಲ್ಲಿ ನಿರ್ಧಾರವನ್ನು ತೆಗೆದುಕೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬ್ಯಾಚ್‌ಗೆ ಮುಂಚಿತವಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಬ್ಯಾಕ್‌ಲಾಗ್‌ಗಳನ್ನು ಪೂರ್ಣಗೊಳಿಸಲು ಅವಕಾಶ ನೀಡಿದೆ. ಇದು ಪದವಿ ತರಗತಿಗಳಿಗೆ ಮಾತ್ರ ಅನ್ವ-ಯವಾಗಲಿದೆ.

ಈ ಬಗ್ಗೆ ವಿವರ ನೀಡಿದ ಕುಲಸಚಿವ (ಮೌಲ್ಯಮಾಪನ) ಆನಂದ್ ಕುಮಾರ್ ಸಿ.ಎಸ್., '1ರಿಂದ 6 ಸೆಮಿಸ್ಟರ್‌ಗಳ ಎಲ್ಲ ವಿದ್ಯಾರ್ಥಿಗಳು ಈ ಪ್ರಯೋಜನವನ್ನು ಪಡೆಯಬಹುದು. ಎನ್‌ಇಪಿ ವ್ಯಾಪ್ತಿಗೆ ಬಾರದ ವಿದ್ಯಾರ್ಥಿಗಳು ಈಗಾಗಲೇ ಉತ್ತೀರ್ಣರಾಗಿದ್ದಾರೆ. ಆದರೂ ವಿದ್ಯಾರ್ಥಿಗಳ ಬೇಡಿಕೆಯನ್ನು ಪರಿಗಣಿಸಿ ಅವಕಾಶ ನೀಡಲು ನಿರ್ಧರಿಸಲಾಯಿತು' ಎಂದು ತಿಳಿಸಿದರು.

'ಈ ಮೊದಲು ಈ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಒಂದು ವರ್ಷ ಕಾಯಬೇಕಾಗಿತ್ತು. ಬೆಸ ಸೆಮಿಸ್ಟರ್‌ಗಳಲ್ಲಿ ಸಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಯಾವುದೇ ಅವಕಾಶ-ವಿರಲಿಲ್ಲ. ಈ ಸಿಬಿಸಿಎಸ್ ನಿಯಮ ಎಲ್ಲ ಸೆಮಿಸ್ಟರ್‌ಗಳಿಗೂ ಅನ್ವಯವಾಗಲಿದೆ' ಎಂದು ಆನಂದ್ ಹೇಳಿದರು.

ವಿಶ್ವವಿದ್ಯಾಲಯದ ಮಾಹಿತಿಯ ಪ್ರಕಾರ ಈ ನಿರ್ಧಾರವು ಕನಿಷ್ಠ 40,000 ವಿದ್ಯಾರ್ಥಿಗಳಿಗೆ ಪ್ರಯೋ-ಜನವಾಗಲಿದೆ. ಡಿಸೆಂಬರ್ ಅಂತ್ಯದಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆ ಇದೆ.

ಪ್ಲಾಸ್ಟಿಕ್ ಬಳಕೆ: ಮಳಿಗೆಗಳಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯದಲ್ಲಿ ಏಕ ಬಳಕೆ ನಿಷೇಧಿತ ಪ್ಲಾಸ್ಟಿಕ್ ಅನ್ನು ಬಳಸದಂತೆ ನೀಡಲಾಗಿದ್ದ ಸೂಚನೆಯನ್ನು ಉಲ್ಲಂಘಿಸಿದ್ದ ಮಳಿಗೆಗಳಿಗೆ ಬೀಗ ಹಾಕಿ, ಬಿಬಿಎಂಪಿ ಸಿಬ್ಬಂದಿ ಸೀಲ್ ಹಾಕಿದ್ದಾರೆ.

ಘನತ್ಯಾಜ್ಯ ನಿರ್ವಹಣೆ, ಕಾಮಗಾರಿ ವಿಭಾಗದ ಎಂಜಿನಿಯರ್‌ಗಳು, ಆರೋಗ್ಯ ವಿಭಾಗದ ಸಿಬ್ಬಂದಿ, ಮಾರ್ಷಲ್ ಗಳು ಹಾಗೂ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಆರು ಮಳಿಗೆಗಳ ಪ್ರವೇಶ ದ್ವಾರ ಮುಚ್ಚಲಾಗಿದೆ.

ಏಕ ಬಳಕೆ ನಿಷೇಧಿತ ಪ್ಲಾಸ್ಟಿಕ್ ಬಳಸದಂತೆ ಈ ಹಿಂದೆ ಹಲವಾರು ಬಾರಿ ಸೂಚನೆ ನೀಡಲಾಗಿತ್ತು. ಆದರೂ ಪ್ಲಾಸ್ಟಿಕ್ ಬಳಸುತ್ತಿರುವುದು ದೃಢಪ-ಟ್ಟಿರುವುದರಿಂದ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ನಿಯಮ ಹಾಗೂ ಹಸಿರು ನ್ಯಾಯಮಂಡಳಿಯ ರಾಜ್ಯಮಟ್ಟದ ಸಮಿತಿ ನಿರ್ದೇಶನದಂತೆ ಮಳಿಗೆಗಳನ್ನು ಮುಚ್ಚಲಾಗಿದೆ ಎಂದು ಅಧೀಕ್ಷಕ ಎಂಜಿನಿಯರ್ ತಿಳಿಸಿದ್ದಾರೆ.



ರಾಜರಾಜೇಶ್ವರಿ ನಗರ ವಲಯದಲ್ಲಿ ಏಕ ಬಳಕೆ ನಿಷೇಧಿತ ಪ್ಲಾಸ್ಟಿಕ್ ಬಳಸುತ್ತಿದ್ದ ಮಳಿಗೆಗಳಿಗೆ ಬಿಬಿಎಂಪಿ ಸಿಬ್ಬಂದಿ ಬೀಗ ಹಾಕಿದರು

₹44,400 ದಂಡ ವಸೂಲಿ: ಏಕ ಬಳಕೆ ಪ್ಲಾಸ್ಟಿಕ್ ಬಳಸುತ್ತಿದ್ದ ಬೀದಿ ಬದಿ ವ್ಯಾಪಾರಿಗಳು, ಅಂಗಡಿಗಳು ಹಾಗೂ ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡಿದ್ದ ಮೋರ್ ಸೇರಿದಂತೆ ಇತರೆ ಮಳಿಗೆಗಳಿಂದ ಒಟ್ಟಾರೆ ₹44,400 ವಸೂಲಿ ಮಾಡಲಾಗಿದೆ ಎಂದು ತಿಳಿಸಿದರು.

ಯಾವ ಮಳಿಗೆಗೆ ಬೀಗ?: ಜೆ.ಪಿ. ಉದ್ಯಾನ ವಾರ್ಡ್‌ನಲ್ಲಿ ಜಾಫರ್ ಫ್ರೂಟ್ ಶಾಪ್, ಗ್ರೀನ್ ವ್ಯಾಲಿ ಫಾರಂ, ಆರ್.ಎಸ್. ಫ್ರೂಟ್ಸ್ ಆ್ಯಂಡ್ ವೆಜಿಟೇಬಲ್ಸ್ ಶಾಪ್.

ರಾಜರಾಜೇಶ್ವರಿ ನಗರ ವಾರ್ಡ್‌ನಲ್ಲಿ ಜವಹರ್‌ಲಾಲ್ ನೆಹರೂ ಮುಖ್ಯರಸ್ತೆಯ ಮಾತಾಜಿ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್, ಸತೀಸ್ ಸ್ಟೋರ್ಸ್– ಸಮಸ್ತ ಪೂಜಾ ವಸ್ತುಗಳ ಭಂಡಾರ, ಕನಕಶ್ರೀ ಕ್ರಿಯೇಷನ್ಸ್.

ಸುದ್ದಿ 2 ನಿಮಿಷ

ಇಡೀ ಬೆಂಗಳೂರಿಗೆ ಸಿಸಿಟಿವಿ ಕಣ್ಗಾವಲು: ಡಿ.ಕೆ. ಶಿವಕುಮಾರ್

ವಿಧಾನ ಪರಿಷತ್: ಇಡೀ ಬೆಂಗಳೂರಿಗೆ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಮಾಡಲಾಗುತ್ತಿದೆ. ಪೊಲೀಸ್–ಬಿಬಿಎಂಪಿ ಸಹಯೋಗದಲ್ಲಿ ಇನ್ನಷ್ಟು ಕ್ಯಾಮೆರಾ ಅಳವಡಿಸಲಾ-ಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಬಿಜೆಪಿಯ ಭಾರತಿಶೆಟ್ಟಿ, ಎಚ್.ಎಸ್.ಗೋಪಿನಾಥ್ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಬೆಂಗಳೂರಿನ ಜನಸಂಖ್ಯೆ 1.40 ಕೋಟಿ ಮುಟ್ಟಿದೆ. ಸಂಚಾರ ನಿಯಮಗಳ ಉಲ್ಲಂಘನೆ, ಅಪರಾಧ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗಿದೆ. ಈಗಾಗಲೇ ಬೆಂಗಳೂರು ನಗರದಲ್ಲಿ 7,500 ಸಿಸಿಟಿವಿ ಕ್ಯಾಮೆರಾಗಳಿವೆ. ನಿರ್ಭಯ ಯೋಜನೆಯಡಿ ಸೂಕ್ಷ್ಮ ಪ್ರದೇಶಗಳಲ್ಲಿ 2,500 ಅಳವಡಿಸಲಾ-ಗುತ್ತಿದೆ. ನಗರದ ಪ್ರತಿ ವೃತ್ತ, ಬೀದಿಗಳಲ್ಲೂ ಅಳವಡಿಸುವ ಕಾರ್ಯ ಮುಂದುವರಿಯಲಿದೆ ಎಂದರು.

ವಾಹನ ದಟ್ಟಣೆ ನಿಯಂತ್ರಣಕ್ಕೆ 25 ವೃತ್ತಗಳಿಗೆ ₹27.09 ಕೋಟಿ ನೀಡಲಾಗಿದೆ. ಬೆಂಗಳೂರಿನ ರಸ್ತೆ, ಚರಂಡಿಗಳ ಅಭಿವೃದ್ಧಿಗೆ ಕಳೆದ ಸಾಲಿನಲ್ಲಿ ₹3,142 ಕೋಟಿ ನೀಡಲಾಗಿದೆ. ಪ್ರಸಕ್ತ ವರ್ಷ ₹800 ಕೋಟಿ ವಿನಿ-ಯೋಗಿಸಲಾಗಿದೆ. ವೈಟ್‌ಟ್ಯಾಪಿಂಗ್ ಕಾಮಗಾರಿಗಾಗಿ ₹1 ಸಾವಿರ ಕೋಟಿ ಮೀಸಲಿಡಲಾಗಿದೆ. ವಾರ್ಡ್ ವ್ಯಾಪ್ತಿಯ 1,705 ಕಿ.ಮೀ ರಸ್ತೆ ಅಭಿವೃದ್ಧಿಗೆ ₹2,501 ಕೋಟಿ ಬಳಸಲಾಗಿದೆ. ಘನತ್ಯಾಜ್ಯ ನಿರ್ವಹಣೆ, ಸ್ವಚ್ಛತೆಯೂ ಸವಾಲಾಗಿದೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಸುಧಾರಿತ ಸೇವೆ ಒದಗಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.



'ಬಿಬಿಎಂಪಿ ಆಸ್ತಿ ರಕ್ಷಣೆಗೆ ಕೋಶ'

ಬೆಂಗಳೂರು: ಕೋಟ್ಯಂತರ ಮೌಲ್ಯದ ಬಿಬಿಎಂಪಿ ಸ್ವತ್ತುಗಳನ್ನು ಉಳಿಸಿಕೊಳ್ಳಲು ವಕೀಲರು, ಅಧಿಕಾರಿಗಳನ್ನು ಒಳಗೊಂಡ ವಿಶೇಷ ಕೋಶ ರಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಸರ್ಕಾರ ನಿಯೋಜಿಸಿದ್ದ ವಕೀಲರ ಲೋಪದಿಂದಾಗಿ ಸಾಕಷ್ಟು ಪ್ರಕರಣಗಳಲ್ಲಿ ನ್ಯಾಯಾಲಯದ ತೀರ್ಪು ವ್ಯತಿರಿಕ್ತವಾಗಿದೆ. ಕೋರ್ಟ್ ಆದೇಶವಿದ್ದರೂ ಸಾವಿರಾರು ಕೋಟಿ ಮೌಲ್ಯದ ನಿವೇಶನಗಳು ಭೂಗಳ್ಳರ ಪಾಲಾಗಿವೆ. ಶೇ 90ರಷ್ಟು ಪ್ರಕರಣಗಳಲ್ಲಿ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಐದು ವರ್ಷಗಳಲ್ಲಿ 248 ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲೇರಿವೆ. 49 ಪ್ರಕರಣಗಳು ಇತ್ಯರ್ಥ-ವಾಗಿವೆ. ಇಂತಹ ಲೋಪ ತಡೆಯಲು ಶೀಘ್ರ ವಕೀಲರು–ಅಧಿಕಾರಿಗಳ ಸಭೆ ಕರೆಯಲಾಗುವುದು ಎಂದರು.

ಬಿಬಿಎಂಪಿ ಸ್ವತ್ತು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ ನಂತರವೂ ಅದನ್ನು ಅನುಷ್ಠಾನಗೊಳಿಸದ ಕಾರಣ ₹1 ಸಾವಿರ ಕೋಟಿ ಮೌಲ್ಯದ ಎರಡು ಜಾಗ ಬಿಬಿಎಂಪಿಯಿಂದ ಹೇಗೆ ಖಾಸಗಿ ಪಾಲಾಗಿದೆ ಎನ್ನುವ ಕುರಿತು ಮರಿತಿಬ್ಬೇಗೌಡ ಅವರು ದಾಖಲೆಗಳ ಸಮೇತ ಸದನದ ಮುಂದಿಟ್ಟರು.

ವಿಧಾನಪರಿಷತ್‌ನಲ್ಲಿ ವಾಗ್ವಾದ ● ಗದ್ದಲದ ಮಧ್ಯೆ ಧನವಿನಿಯೋಗ ಮಸೂದೆ ಅಂಗೀಕಾರ

ಗ್ಯಾರಂಟಿ: ಬಿಜೆಪಿ ಟೀಕೆಗೆ ಸಿಎಂ ತಿರುಗೇಟು

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ಪರಿಶಿಷ್ಟರ ಕಲ್ಯಾಣಕ್ಕಾಗಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯಡಿ ಮೀಸಲಿಟ್ಟಿರುವ ಅನುದಾನವನ್ನು 'ಗ್ಯಾರಂಟಿ' ಯೋಜನೆಗೆ ಬಳಕೆ ಮಾಡಿರುವ ವಿಚಾರ 2023-24ನೇ ಸಾಲಿನ ಪೂರಕ ಅಂದಾಜುಗಳ ಧನ ವಿನಿಯೋಗ ಮಸೂದೆಯ ಚರ್ಚೆಯ ವೇಳೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಮಧ್ಯೆ ವಾಗ್ವಾದ ನಡೆಯಿತು.

ಗದ್ದಲದ ನಡುವೆಯೇ ಸಭಾಪತಿ ಬಸವರಾಜ ಹೊರಟ್ಟಿ ಮಸೂದೆಗೆ ಧ್ವನಿಮತದ ಅಂಗೀಕಾರ ಪಡೆದರು.

ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಸೂದೆಯನ್ನು ಮಂಡಿಸಿ ಸುದೀರ್ಘವಾಗಿ ವಿವರಣೆ ನೀಡಿದರು.

'ಸರ್ಕಾರ ತನ್ನ ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಿಂದ ₹ 11 ಸಾವಿರ ಕೋಟಿ ಬಳಸಿಕೊಂಡಿದೆ. ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮಾಡಿದ ದ್ರೋಹ. ದಲಿತರಿಗೆ ಮಾಡಿದ ಅನ್ಯಾಯ' ಎಂದು ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ವೈ.ಎ. ನಾರಾಯಣಸ್ವಾಮಿ, ಛಲವಾದಿ ನಾರಾಯಣಸ್ವಾಮಿ, ಎನ್. ರವಿಕುಮಾರ್ ಕಿಡಿಕಾರಿದರು.

ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ನಾವು ನಮ್ಮ ಪಂಚ ಗ್ಯಾರಂಟಿ ಯೋಜನೆಗಳಿಗೆ ಈ ಹಣವನ್ನು ಬಳಸಿಲ್ಲ. ಬಿಜೆಪಿಯವರು ಈ ವಿಚಾರದಲ್ಲಿ ಸತ್ಯಕ್ಕೆ ದೂರವಾದ ಆರೋಪ ಮಾಡುತ್ತಿದ್ದಾರೆ. ನೀವು (ಬಿಜೆಪಿ) ಸಂವಿಧಾನ ವಿರೋಧಿಗಳು, ದಲಿತ ವಿರೋಧಿಗಳು. ನಿಮಗೆ ಈ ವಿಚಾರದಲ್ಲಿ ಮಾತನಾಡುವ ನೈತಿಕತೆ ಇಲ್ಲ' ಎಂದು ತಿರುಗೇಟು ನೀಡಿದರು.

'ಕಾಯ್ದೆ ತಂದವರೇ ನಾವು. ನೀವೂ ಕೇಂದ್ರದಲ್ಲಿ, ನಿಮ್ಮ ಸರ್ಕಾರ ಇರುವ ರಾಜ್ಯಗಳಲ್ಲಿ ಈ ಕಾಯ್ದೆ ತರುವಂತೆ ಆಗ್ರಹಿಸಿ' ಎಂದು ಮುಖ್ಯಮಂತ್ರಿ ಏರುಧ್ವನಿಯಲ್ಲಿ ಹೇಳಿದಾಗ, ಕಾಯ್ದೆಯಡಿ ಮೀಸಲಿಟ್ಟ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಿಸುವ ಸೆಕ್ಷನ್ 7 ಡಿ ತಂದವರು ಯಾರು?' ಎಂದು ಅಷ್ಟೇ ಜೋರಾಗಿ ಕೋಟ ಶ್ರೀನಿವಾಸ ಪೂಜಾರಿ ಕೇಳಿದರು.

'ಐದು ಗ್ಯಾರಂಟಿಗಳ ಪೈಕಿ ನಾವು ನಾಲ್ಕು ಯೋಜನೆಗಳನ್ನು ಅನುಷ್ಠಾನ ಮಾಡಿದ್ದೇವೆ. ರಾಜ್ಯ ಜನರು ಸಂತೋಷದಲ್ಲಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದಾಗ, ತಕ್ಷಣ ಎದ್ದುನಿಂತ ವೈ.ಎ ನಾರಾಯಣಸ್ವಾಮಿ, 'ನಿಮ್ಮ ಶಾಸಕರೆಲ್ಲ ಅಸಮಾಧಾನಗೊಂಡಿದ್ದಾರೆ' ಎಂದು ಕುಟುಕಿದರು.

ಜನವರಿಯಲ್ಲಿ ಸಮಾವೇಶ

ಬೆಳಗಾವಿ: 'ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಘೋಷಿಸಿದ 'ಗ್ಯಾರಂಟಿ' ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿವೆ. ಈ ಯೋಜನೆಗಳ ಬಗ್ಗೆ ಜನವರಿಯಲ್ಲಿ ಜಿಲ್ಲಾಮಟ್ಟದಲ್ಲಿ ಮತ್ತು ವಿಧಾನ ಸಭಾ ಕ್ಷೇತ್ರವಾರು ಫಲಾನುಭವಿಗಳ ಸಮಾವೇಶಗಳನ್ನು ಹಮ್ಮಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಸಕರಿಗೆ ಸಲಹೆ ನೀಡಿದ್ದಾರೆ. ಬುಧವಾರ ರಾತ್ರಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಸಲಹೆ ನೀಡಿದ ಅವರು, ಸಮಾವೇಶ ಆಯೋಜಿಸುವ ಮೂಲಕ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕು ಎಂದು ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ತಮಿಳುನಾಡಿಗೆ 57 ಟಿಎಂಸಿ ಅಡಿ ನೀರು

ವಿಧಾನಪರಿಷತ್: ನಾಲ್ಕು ತಿಂಗಳ ಅವಧಿಯಲ್ಲಿ (ಆಗಸ್ಟ್–ನವೆಂಬರ್) ತಮಿಳುನಾಡಿಗೆ 57.082 ಟಿಎಂಸಿ ಅಡಿ ನೀರು ಹರಿಸಲಾಗಿದೆ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ಬಿಜೆಪಿಯ ಎನ್.ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಸುಪ್ರೀಂಕೋರ್ಟ್ 2018ರಲ್ಲಿ ನೀಡಿದ ಆದೇಶದಂತೆ ಸಾಮಾನ್ಯ ಜಲವರ್ಷದಲ್ಲಿ 116.71 ಟಿಎಂಸಿ ಅಡಿ ನೀರು ಹರಿಸಬೇಕಿದೆ. ಸಂಕಷ್ಟ ಸಮಯದ ಸೂತ್ರ ರೂಪಿಸದ ಕಾರಣ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲನೆ ಅನಿವಾರ್ಯವಾಗಿದೆ ಎಂದರು.

ರಾಜ್ಯದ ಕೃಷಿ ಚಟುವಟಿಕೆಗಳಿಗಾಗಿ ಇದೇ ನಾಲ್ಕು ತಿಂಗಳ ಅವಧಿಯಲ್ಲಿ ಹಾರಂಗಿ, ಹೇಮಾಪತಿ, ಕೆ.ಆರ್. ಸಾಗರ, ಕಬಿನಿ ಜಲಾಶಯಗಳಿಂದ 48.083 ಟಿಎಂಸಿ ಅಡಿ ನೀರು ಹರಿಸಲಾಗಿದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆಗೆ 2023–24ನೇ ಸಾಲಿಗೆ ₹2,723 ಕೋಟಿ ಮೀಸಲಿಡಲಾಗಿದೆ. ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ ₹5,300 ಕೋಟಿ ಬಿಡುಗಡೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳಿದರು.

4 ವಿಮಾನ ನಿಲ್ದಾಣಕ್ಕೆ ಗಣ್ಯರ ಹೆಸರು

ಬೆಳಗಾವಿ: ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಬೆಳಗಾವಿ ವಿಮಾನ ನಿಲ್ದಾಣಕ್ಕೆ ವೀರರಾಣಿ ಚೆನ್ನಮ್ಮ, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕೆ.ವಿ.ಪುಟ್ಟಪ್ಪ (ಕುವೆಂಪು) ಮತ್ತು ವಿಜಯಪುರ ವಿಮಾನ ನಿಲ್ದಾಣಕ್ಕೆ ಜಗಜ್ಯೋತಿ ಬಸವೇಶ್ವರ ಹೆಸರಿಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಉಭಯ ಸದನಗಳಲ್ಲಿ ಸರ್ವಾನುಮತದ ನಿರ್ಣಯ ತೆಗೆದುಕೊಳ್ಳಲಾಯಿತು.

'ಬಿಜೆಪಿ ಅವಧಿಯಲ್ಲೇ ಹೆಚ್ಚು ಅಪರಾಧ ಪ್ರಕರಣ'

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲೇ ಹೆಚ್ಚಿನ ಕೊಲೆ, ಅತ್ಯಾಚಾರ ಪ್ರಕರಣಗಳು ನಡೆದಿವೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದರು.

ಬಿಜೆಪಿಯ ಮುನಿರಾಜುಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 2011–13ರಲ್ಲಿ ಆರ್.ಅಶೋಕ ಅವರು ಗೃಹ ಸಚಿವರಾಗಿದ್ದ ಅವಧಿಯಲ್ಲಿ 4,121 ಕೊಲೆ, 1,639 ಅತ್ಯಾಚಾರ, 234 ಪೋಕ್ಸೊ ಪ್ರಕರಣಗಳು ದಾಖಲಾಗಿದ್ದವು. ಬೊಮ್ಮಾಯಿ ಅವರು ಗೃಹ ಸಚಿವರಾಗಿದ್ದ ಅವಧಿಯಲ್ಲಿ 2,554 ಕೊಲೆ, 915 ಅತ್ಯಾಚಾರ, ಆರಗ ಜ್ಞಾನೇಂದ್ರ ಅವಧಿಯಲ್ಲಿ 2,412 ಕೊಲೆ, 949 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದವು ಎಂದು ವಿವರಿಸಿ, ಅಂಕಿ–ಅಂಶದ ದಾಖಲೆಯನ್ನು ಮಂಡಿಸಿದರು.

ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಕಾನೂನು ಸುವ್ಯವಸ್ಥೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕೋಮು ಹಿಂಸೆಯ ನಾಲ್ಕು ಪ್ರಕರಣಗಳನ್ನು ದಾಖಲಿಸಿ, ಸಮಾಜದ ಶಾಂತಿ ಕಾಪಾಡಲು ಶ್ರಮಿಸಲಾಗಿದೆ. ಆದರೂ, ವಿರೋಧ ಪಕ್ಷಗಳು ಅನಗತ್ಯವಾಗಿ ಆರೋಪ ಮಾಡುತ್ತಿವೆ ಎಂದರು.

ಹೆಚ್ಚಿದ ಮದ್ಯದಂಗಡಿಗಳ ಸಂಖ್ಯೆ: 25 ವರ್ಷಗಳಿಂದ ಮದ್ಯದಂಗಡಿಗಳನ್ನು ತೆರೆಯಲು ಹೊಸ ಪರವಾನಗಿ ನೀಡದೇ ಇದ್ದರೂ ಮದ್ಯದಂಗಡಿಗಳ ಸಂಖ್ಯೆ 3,700ರಿಂದ 11 ಸಾವಿರ ತಲುಪಿದೆ. ಕಾನೂನು ಬಾಹಿರವಾಗಿ ಪರವಾನಗಿ ನೀಡಲಾಗಿದೆ ಎಂದು ಜೆಡಿಎಸ್‌ನ ಸೂರಜ್ ರೇವಣ್ಣ ದೂರಿದರು. ಪರವಾನಗಿ ವಿತರಣೆಯಲ್ಲಿ ಲೋಪವಾಗಿದ್ದರೆ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.

ಅನುದಾನಿತ ಶಾಲಾ ಶಿಕ್ಷಕರಿಗೂ ಜ್ಯೋತಿ ಸಂಜೀವಿನಿ: ಚಿಂತನೆ

ಬೆಳಗಾವಿ: ಸರ್ಕಾರಿ ನೌಕರರಿಗೆ ಇರುವ ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆಯನ್ನು ಅನುದಾನಿತ ಶಾಲೆಗಳ 40 ಸಾವಿರ ಶಿಕ್ಷಕರು, ಸಿಬ್ಬಂದಿಗೆ ವಿಸ್ತರಿಸಲು ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್‌ನಲ್ಲಿ ಹೇಳಿದರು.

ಬಿಜೆಪಿಯ ಹೇಮಲತಾ ನಾಯಕ್ ಪ್ರಶ್ನೆಗೆ ಉತ್ತರಿಸಿದ ಅವರು, ಬೇರೆ ಯೋಜನೆಗಳ ಮೂಲಕ ಖಾಸಗಿ ಶಾಲಾ ಶಿಕ್ಷಕರನ್ನೂ ಆರೋಗ್ಯ ವಿಮೆ ವ್ಯಾಪ್ತಿಗೆ ತರಲಾಗುವುದು. ಅನುದಾನಿತ ಶಿಕ್ಷಕರನ್ನು ಜ್ಯೋತಿ ಸಂಜೀವಿನಿ ವ್ಯಾಪ್ತಿಗೆ ತರುವ ಕುರಿತು ಚರ್ಚಿಸಲಾಗುವುದು ಎಂದರು.

ಮೂಡುಬಿದಿರೆಯಲ್ಲಿ ಆಳ್ವಾಸ್ ವಿರಾಸತ್‌ಗೆ ಚಾಲನೆ

ಕಲೆಯ ಸೊಬಗಿಗೆ ರಥಾರತಿಯ ಮೆರುಗು

ಪ್ರಜಾವಾಣಿ ವಾರ್ತೆ



ಆಳ್ವಾಸ್ ವಿರಾಸತ್‌ನಲ್ಲಿ ಸಾಂಸ್ಕೃತಿಕ ರಥ ಸಂಚಲನ ಮತ್ತು ರಥಾರತಿಯ ವೈಭವ

ಮೂಡುಬಿದಿರೆ (ದಕ್ಷಿಣ ಕನ್ನಡ): ನೇಸರ ಬಾನಿನಿಂದ ಮರೆಯಾಗುತ್ತಿದ್ದಂತೆ ಬೆಳಕು, ಬೆರಗಿನ ಪ್ರಪಂಚ ತೆರೆದುಕೊಂಡಿತು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿರುವ ನಾಲ್ಕು ದಿನಗಳ 'ಆಳ್ವಾಸ್ ವಿರಾಸತ್–2023 ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ'ದ ವೈಭವವು ಗುರುವಾರ ಅನಾವರಣಗೊಂಡಿತು.

300ಕ್ಕೂ ಹೆಚ್ಚು ಕಲಾವಿದರು ಕಲೆಯ ರೋಮಾಂಚನವನ್ನುಂಟು ಮಾಡಿದರು. ಡೋಲು, ಕಹಳೆ ನಾದ ಅಷ್ಟ ದಿಕ್ಕುಗಳಲ್ಲಿ ಮಾರ್ದನಿಸಿತು. ಚೆಂಡೆಯ ಸದ್ದಿಗೆ ಮಾರೆತ್ತರದ ಬೊಂಬೆಗಳು ಬಳುಕುತ್ತ ಬಾಗುತ್ತ ಮಂದಹಾಸ ಬೀರಿದವು. ನಾದ ಸ್ವರದ ಇಂಪು, ಆಂಜನೇಯನ ವಿರಾಟ್ ರೂಪ, ಮರಕಾಲು ಕಟ್ಟಿದ ಹುಲಿವೇಷ ಕುಣಿತ, ಗೊರವರ ಕುಣಿತ, ಸುಗ್ಗಿ ಕುಣಿತ, ಈ ನಡುವೆ ನುಗ್ಗಿ ಬಂದ ಗೂಳಿ ಎದೆ ಝಲ್ಲೆನಿಸಿತು.

ಕೈಲಾಸದಿಂದ ಹೊರಟ ಶಿವ ಆಳ್ವಾಸ್ ಎದುರು ಪ್ರತ್ಯಕ್ಷನಾಗಿದ್ದ, ಕೀಲುಗೊಂಬೆಗಳು ಶಿವನಿಗೆ ಸನ್ನಿಧಾನದಲ್ಲಿ ನಮಿಸುತ್ತಿದ್ದವು. ಸಾಂಸ್ಕೃತಿಕ ಯಾತ್ರೆ ಕೊನೆಯಲ್ಲಿ ಹೊರಟ ದೇವಾನುದೇವತೆಗಳ ರಥವು ಕಿಕ್ಕಿರಿದು ಸೇರಿದ್ದ ಜನರನ್ನು ಭಾವಪರವಶರನ್ನಾಗಿಸಿತು.

'ವಕ್ರತುಂಡ ಮಾಹಾಕಾಯ ಸೂರ್ಯಕೋಟಿ ಸಮಪ್ರಭ...' ಶ್ಲೋಕ, ವೇದಘೋಷ ಮೊಳಗುತ್ತಿದ್ದರೆ ಪ್ರೇಕ್ಷಕ ಸಮೂಹ ಕೈಮುಗಿದು ನಮಸ್ಕರಿಸಿತು.

ಶ್ರೀರಾಮ, ಶ್ರೀಕೃಷ್ಣ, ವಿಘ್ನನಿವಾರಕ ವಿನಾಯಕ, ಸರಸ್ವತಿ, ಶ್ರೀಲಕ್ಷ್ಮಿ, ಹನುಮಂತ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದ ರಥವು ವೇದಿಕೆಯ ಬಲಭಾಗದಿಂದ ಎಡಭಾಗಕ್ಕೆ ಚಲಿಸಿತು. ಹರಿದ್ವಾರದಿಂದ ಬಂದ ವೈದಿಕರು ವೇದಿಕೆಯಲ್ಲಿ ನಿಂತು ಗಂಗಾರತಿ ಮಾದರಿಯಲ್ಲಿ ಮಂತ್ರ ಘೋಷದೊಂದಿಗೆ ರಥಾರತಿ ಬೆಳಗಿದರು.

ಯೋಧ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರಿಗೆ ಗೌರವ ಅರ್ಪಿಸಲಾಯಿತು.

'ವಿರಾಸತ್' ಅನ್ನು ಉದ್ಘಾಟಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ,- ಭಾರತ್ ಸ್ಕೌಟ್ಸ್ ಗೈಡ್ಸ್‌ನ ರಾಜ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಪಾಲ್ಗೊಂಡಿದ್ದರು.

> **28 ವರ್ಷಗಳ ಹಿಂದೆ ಆರಂಭಿಸಿದ ವಿರಾಸತ್ ಯಶಸ್ಸಿನ ಹಾದಿಯಲ್ಲಿ ಸಾಗುತ್ತಿದೆ. ಕಾರ್ಯಕ್ರಮ ಈಗ ಜಾಗತಿಕ ಮಟ್ಟಕ್ಕೆ ವಿಸ್ತರಿಸಿದೆ**
>
> **ಡಾ.ಎಂ.ಮೋಹನ್ ಆಳ್ವ,** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

'ಕಣ್ವ ಹಗರಣ: ಸಿಬಿಐ ತನಿಖೆಗೆ ಪರಿಶೀಲನೆ'

ವಿಧಾನಸಭೆ: ಬೆಂಗಳೂರಿನ ಕಣ್ವ ಸೌಹಾರ್ದ ಸಹಕಾರಿ ಸಂಸ್ಥೆ ಮತ್ತು ಕಣ್ವ ಸಮೂಹವು ಠೇವಣಿದಾರರಿಂದ ಹಣ ಸಂಗ್ರಹಿಸಿ ₹800 ಕೋಟಿ ವಂಚಿಸಿರುವ ಆರೋಪದ ಕುರಿತ ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕೆಂಬ ಬೇಡಿಕೆಯನ್ನು ಪರಿಶೀಲಿಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಹಕಾರಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ಬಿಜೆಪಿಯ ಎಲ್.ಎ. ರವಿಸುಬ್ರಮಣ್ಯ ಅವರ ಗಮನ ಸೆಳೆಯುವ ಸೂಚನೆಗೆ ಗುರುವಾರ ಉತ್ತರಿಸಿದ ಸಚಿವರು, 'ಕಣ್ವ ಸೌಹಾರ್ದ ಸಹಕಾರಿ ಸಂಸ್ಥೆ ಮತ್ತು ಕಣ್ವ ಸಮೂಹದ ಪ್ರಕರಣದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮುಂದಿನ ಕ್ರಮದ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದರು. ಗುರು ರಾಘವೇಂದ್ರ ಸೌಹಾರ್ದ ಸಹಕಾರ ಸಂಸ್ಥೆ ಹಾಗೂ ವಶಿಷ್ಠ ಸಹಕಾರ ಬ್ಯಾಂಕ್‌ಗಳಿಗೆ ಆಡಳಿತ ಮಂಡಳಿಗಳನ್ನು ನೇಮಿಸಬೇಕು ಎಂದು ರವಿಸುಬ್ರಮಣ್ಯ ಆಗ್ರಹಿಸಿದರು.

'ಈ ಎರಡೂ ಸಹಕಾರ ಸಂಸ್ಥೆಗಳ ಹಗರಣಗಳ ಕುರಿತು ಸಿಬಿಐ ತನಿಖೆ ನಡೆಯುತ್ತಿದೆ. ಎರಡೂ ಸಂಸ್ಥೆಗಳನ್ನು ರಿಸರ್ವ್ ಬ್ಯಾಂಕ್ ವಶಕ್ಕೆ ಪಡೆದಿದೆ. ಈ ಹಂತದಲ್ಲಿ ರಾಜ್ಯ ಸರ್ಕಾರ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ' ಎಂದು ಸಚಿವರು ಉತ್ತರಿಸಿದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯ ವಿದ್ಯುತ್ ನಿರ್ವಹಣಾ ಕೇಂದ್ರಗಳಲ್ಲಿ ನಿರ್ವಹಣೆ ಕಾಮಗಾರಿ ನಡೆಯುತ್ತಿರುವುದರಿಂದ 16ರಂದು ವಿವಿಧ ಸ್ಥಳಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಜಿ.ಎಸ್. ಪಾಳ್ಯ ಮುಖ್ಯ ರಸ್ತೆ, ಬಸವನಗರ, ಕೃಷ್ಣಾ ರೆಡ್ಡಿ ಲೇಔಟ್, ಬಯೋಕಾನ್, ಸೆಮಿಕಾನ್ ಪಾರ್ಕ್, ಸತ್ಯಂ ಕಂಪ್ಯೂಟರ್, ಕೆಐಎಡಿಬಿ ಲೇಔಟ್, ಫಿಡೆಲಿಟಿ ಫೈನಾನ್ಸ್ (ಬಿಪಿಒ), ಡಿ–ಲಿಂಕ್, ಎಚ್‌.ಪಿ. ಇಂದೂ, ಟಾಟಾ ಕನ್ಸಲ್ಟೆನ್ಸಿ ಸೇವೆಗಳು, ಆನಂದ ರೆಡ್ಡಿ ಲೇಔಟ್, ಜಿಇ–ಇಂಡಿಯಾ, ಮೂಗಾ ಕಂಟ್ರೋಲ್, ಪಿಕ್ಸೆಲ್ ಸಾಫ್ಟವೇರ್, ಗ್ಲೋಬಲ್ ಟೆಕ್ ಪಾರ್ಕ್, ಎಲೆಕ್ಟ್ರಾನಿಕ್ ಸಿಟಿ ಹಂತ–2, ವೀರಸಂದ್ರ, ದೊಡ್ಡ ನಾಗಮಂಗಲ, ಅನಂತನಗರ, ಶಾಂತಿಪುರ, ಇಎಚ್‌ಟಿ ಟೆಕ್ ಮಹೇಂದ್ರ, ಇಎಚ್‌ಟಿ ಟಾಟಾ ಬಿಪಿ ಸೋಲಾರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಾಳೆ 'ಕಾಟೇರ' ಟ್ರೈಲರ್



ಕಾಟೇರ
ದರ್ಶನ್, ಆರಾಧನಾ


ನಟ ದರ್ಶನ್ ಅಭಿನಯದ, ತರುಣ್ ಸುಧೀರ್ ನಿರ್ದೇಶಿಸಿರುವ 'ಕಾಟೇರ' ಸಿನಿಮಾ ಡಿ.29ರಂದು ತೆರೆಕಾಣುತ್ತಿದ್ದು, ಚಿತ್ರದ ಟ್ರೈಲರ್ ಡಿ.16ರಂದು ಬಿಡುಗಡೆಯಾಗಲಿದೆ.

ಈಗಾಗಲೇ ಚಿತ್ರದ 'ಪಸಂದಾಗವ್ನೆ' ಹಾಗೂ 'ಯಾವ ಜನುಮದ ಗೆಳತಿ' ಎಂಬ ಎರಡು ಹಾಡುಗಳು ಬಿಡುಗಡೆಯಾಗಿವೆ. ರಾಕ್‌ಲೈನ್ ಎಂಟರ್‌ಟೈನ್ಮೆಂಟ್ಸ್ ಈ ಚಿತ್ರವನ್ನು ನಿರ್ಮಾಣ ಮಾಡಿದೆ. 'ಗುರು ಶಿಷ್ಯರು' ಚಿತ್ರದ ನಂತರ ನಿರ್ದೇಶಕರಾದ ತರುಣ್ ಹಾಗೂ ಜಡೇಶ್ ಸೇರಿ 'ಕಾಟೇರ' ಕಥೆ ಹೆಣೆದಿದ್ದು, ದರ್ಶನ್ ಅವರಿಗಾಗಿಯೇ ಈ ಸಿನಿಮಾದ ಕಥೆ ಮಾಡಿದ್ದಾರೆ. ಮಾಲಾಶ್ರೀ ಪುತ್ರಿ ಆರಾಧನಾ ಈ ಚಿತ್ರದ ನಾಯಕಿ. ಇದು ತರುಣ್ ಅವರ ನಿರ್ದೇಶನದ ಮೂರನೇ ಚಿತ್ರವಾಗಿದ್ದು, 1970ರ ಕಾಲಘಟ್ಟದಲ್ಲಿ ನಡೆಯುವ ಕಥೆ ಹೊಂದಿದೆ.



ಡಿ.17ಕ್ಕೆ 'ಬಘೀರ' ಟೀಸರ್

2021ರಲ್ಲಿ ತೆರೆಕಂಡ 'ಮದಗಜ' ಸಿನಿಮಾ ಬಳಿಕ ರೋರಿಂಗ್ ಸ್ಟಾರ್ ಶ್ರೀಮುರಳಿ ಅವರ ಯಾವುದೇ ಸಿನಿಮಾ ತೆರೆಕಂಡಿಲ್ಲ. ಇದೀಗ 'ಬಘೀರ'ನಾಗಿ ತೆರೆ ಮೇಲೆ ಬರಲು ಶ್ರೀಮುರಳಿ ಸಜ್ಜಾಗಿದ್ದಾರೆ. ಚಿತ್ರದ ಟೀಸರ್ ಡಿ.17ರಂದು ಬಿಡುಗಡೆಗೊಳ್ಳಲಿದೆ. 'ಉಗ್ರಂ' ಸಿನಿಮಾ ಬಳಿಕ ಪ್ರಶಾಂತ್ ನೀಲ್ ಹಾಗೂ ಶ್ರೀಮುರಳಿ ಕಾಂಬಿನೇಷನ್‌ನಲ್ಲಿ ಈ ಸಿನಿಮಾ ಮೂಡಿಬಂದಿದೆ. 'ಬಘೀರ'ನಿಗೆ ನಟಿ ರುಕ್ಮಿಣಿ ವಸಂತ್ ಜೋಡಿಯಾಗಿದ್ದಾರೆ. ಡಾ. ಸೂರಿ ಆ್ಯಕ್ಷನ್ ಕಟ್ ಹೇಳಿರುವ 'ಬಘೀರ' ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡಿದ್ದು, ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಶ್ರೀಮುರಳಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಪ್ರಶಾಂತ್ ನೀಲ್ ಈ ಚಿತ್ರಕ್ಕೆ ಕಥೆ ಬರೆದಿದ್ದು, ಡಾ. ಸೂರಿ ಅವರ ಚಿತ್ರಕಥೆ ಈ ಸಿನಿಮಾಗಿದೆ.



ಬಘೀರ ಚಿತ್ರದ ಪೋಸ್ಟರ್



ನಟ ಅನೀಶ್ ತೇಜೇಶ್ವರ್-ಶ್ರಾವ್ಯ ಜೋಡಿಯಾಗಿ ನಟಿಸಿರುವ 'ಮಾಯಾನಗರಿ' ಚಿತ್ರ ಇಂದು(ಡಿ.15) ತೆರೆ ಕಾಣುತ್ತಿದೆ. ಚಿತ್ರ ಹಾಗೂ ತಮ್ಮ ವೃತ್ತಿ ಬದುಕಿನ ಏರಿಳಿತಗಳ ಕುರಿತು ಅವರು ಅನುಭವ ಹಂಚಿಕೊಂಡಿದ್ದಾರೆ.

ಮಾಯಾನಗರಿ
ಅನೀಶ್, ಶ್ರಾವ್ಯ

ಗೆಲುವಿನ ಹಂಬಲದಲ್ಲಿ ಅನೀಶ್

ವಿನಾಯಕ ಕೆ.ಎಸ್.

● ಈ ಚಿತ್ರದಲ್ಲಿ ನಿಮ್ಮ ಪಾತ್ರವೇನು?

ನನ್ನದು ಸಹಾಯಕ ನಿರ್ದೇಶಕನ ಪಾತ್ರ. ಜೊತೆಗೆ ಶಂಕರ್‌ನಾಗ್ ಅವರ ದೊಡ್ಡ ಅಭಿಮಾನಿಯಾಗಿರುತ್ತೇನೆ. ಸಿನಿಮಾ ಮಾಡಬೇಕೆಂದು ಕನಸು ಕಟ್ಟಿಕೊಂಡು ಬರುವ ಅನೇಕರನ್ನು ಆಕರ್ಷಿಸುವ 'ಮಾಯಾನಗರಿ' ಇದು. ಹೀಗಾಗಿ ಈ ಚಿತ್ರ ಶಂಕರ್‌ನಾಗ್ ಅಭಿಮಾನಿಗಳೂ ಸೇರಿದಂತೆ ಹೊಸದನ್ನು ಬಯಸುವ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ. ಜೊತೆಗೆ ಒಳ್ಳೆಯ ಆ್ಯಕ್ಷನ್ ಕೂಡ ಇದೆ. ನಾಯಕಿ ಶ್ರಾವ್ಯ ರಾವ್ ಅವರೂ ಒಂದು ಫೈಟ್ ಮಾಡಿದ್ದಾರೆ. ಜೋಗ್‌ಫಾಲ್ಸ್‌ನಂತಹ ಜಾಗದಲ್ಲಿ ಎರಡು ವಾರಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಈ ಸಿನಿಮಾ ಒಂದು ದೃಶ್ಯವೈಭವ. ಒಟ್ಟಿನಲ್ಲಿ ಇಡೀ ಕುಟುಂಬ ಕುಳಿತು ನೋಡಲು ಅಗತ್ಯವಾದ ಎಲ್ಲ ಅಂಶಗಳು ಇವೆ. ನಿರ್ದೇಶಕ ಶಂಕರ್ ಬಹಳ ಶ್ರಮಪಟ್ಟು ಚಿತ್ರ ಮಾಡಿದ್ದಾರೆ. ಅವರಿಗೆ ನಾವೆಲ್ಲ ಸಾಥ್ ನೀಡಿದ್ದೇವೆ.

● 'ಮಾಯಾನಗರಿ' ಬಹಳ ಹಿಂದೆಯೇ ಪ್ರಾರಂಭವಾಗಿದ್ದ ಚಿತ್ರವಲ್ಲವೇ?

ಹೌದು, ಬರೋಬ್ಬರಿ ಒಂಬತ್ತು ವರ್ಷಗಳ ಹಿಂದೆ ಶುರುವಾದ ಪಯಣವಿದು. ನಾನು 'ಅಕಿರಾ' ಚಿತ್ರ ಮಾಡುತ್ತಿದ್ದ ಸಮಯದಲ್ಲಿ ಕಥೆ ಕೇಳಿ ಒಪ್ಪಿಕೊಂಡ ಸಿನಿಮಾ. ಕೋವಿಡ್ ಬಂದಿದ್ದರಿಂದ ಹಾಗೂ ಇತರೆ ಕಾರಣಗಳಿಂದ ಚಿತ್ರ ಮುಗಿಸುವುದು ತಡವಾಯಿತು. ಎಲ್ಲ ಸಂಕಷ್ಟಗಳನ್ನು ದಾಟಿ ಅಂತಿಮವಾಗಿ ಚಿತ್ರ ತೆರೆಗೆ ಬರುತ್ತಿದೆ ಎಂಬುದೇ ಖುಷಿ. ನಿರ್ದೇಶಕರೂ ಆಗಿರುವ ನಿರ್ಮಾಪಕ ಶಂಕರ್ ಆರಾಧ್ಯ ಎಲ್ಲಿಯೂ ರಾಜಿ ಮಾಡಿಕೊಳ್ಳದೆ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ.

● ಇಲ್ಲಿಯವರೆಗಿನ ಸಿನಿಪಯಣ ಹೇಗಿತ್ತು?

ಸಿನಿಮಾ ಎಂಬುದೇ ಬದುಕು. ಹೀಗಾಗಿ ಬದುಕಿನಂತೆಯೇ ಇಲ್ಲಿಯೂ ಏರಿಳಿತಗಳು ಸಹಜ. ದಶಕಗಳಿಂದ ಸಿಕ್ಕ ಪ್ರತಿ ಪಾತ್ರಕ್ಕೂ ಸಾಮರ್ಥ್ಯಕ್ಕಿಂತ ಹೆಚ್ಚಿನ ಶ್ರಮ ಹಾಕುತ್ತೇನೆ. ವಿಭಿನ್ನ ಜಾನರ್‌ನ ಕಥೆಗಳನ್ನು ತೆರೆಗೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ಪ್ರತಿ ಸಿನಿಮಾದಲ್ಲಿಯೂ ಕಲಿತು, ಹೊಸ ಸಿನಿಮಾದಲ್ಲಿ ಹೊಸ ತಪ್ಪು ಮಾಡುತ್ತೇವೆ ಅನ್ನಿಸುತ್ತಿದೆ. ಪ್ರೇಕ್ಷಕರ ಮನರಂಜಿಸುವಲ್ಲಿ ಎಲ್ಲಿ ಎಡವುತ್ತಿದ್ದೇವೆ ಎಂದು ಬಹಳ ಯೋಚಿಸುತ್ತಿದ್ದೆ. ಮಾಡುವ ಕೆಲಸವನ್ನು ಅತ್ಯಂತ ಪ್ರೀತಿಯಿಂದ ಮಾಡಬೇಕೆಂದು ಕೊನೆಗೆ ಅನ್ನಿಸಿತು. ಆದಾಗ್ಯೂ ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲ. ಜನರಿಂದ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಬೇಕೆಂದು ಕಾಯುತ್ತಿರುವೆ.

● ಭಿನ್ನಪಾತ್ರಗಳನ್ನು ಮಾಡಿದರೂ ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲ ಅನ್ನಿಸುತ್ತಿದೆಯಾ?

ನನ್ನ ಮೊದಲ ಸಿನಿಮಾದಿಂದಲೂ ವಿಭಿನ್ನವಾಗಿದ್ದನ್ನು ಪ್ರಯತ್ನಿಸುತ್ತಾ ಬಂದಿರುವೆ. ಪ್ರತಿ ಹಂತದಲ್ಲಿಯೂ ತಂಡದ ಜೊತೆ ನಿಂತು ಸಿನಿಮಾವನ್ನು ದಡ ಮುಟ್ಟಿಸಲು ಯತ್ನಿಸುವೆ. ಆದರೂ ಅದೃಷ್ಟ ಇನ್ನೂ ಸ್ವಲ್ಪ ದಿನ ತಡಿ ಎಂದು ಕಾಯಿಸಿಕೊಂಡೇ ಬರುತ್ತಿದೆ. ಕೆಲವರಿಗೆ ಅದೃಷ್ಟ ಬೇಗ ಕೈ ಹಿಡಿಯುತ್ತದೆ. ಇನ್ನು ಕೆಲವರಿಗೆ ತಡವಾಗಿ ಬರುತ್ತದೆ. ತಡವಾಗಿ ಬರುವವರಲ್ಲಿ ನಾನೂ ಒಬ್ಬ ಇರಬಹುದು. ದೊಡ್ಡ ಮಟ್ಟದಲ್ಲಿ ಯಶಸ್ಸು ಸಿಗಬಹುದು. ಅದಕ್ಕಾಗಿ ತಡವಾಗುತ್ತಿದೆಯೆಂದು ನನಗೆ ನಾನೇ ಸಮಾಧಾನ ಮಾಡಿಕೊಂಡು ತಾಳ್ಮೆ ಬೆಳೆಸಿಕೊಂಡಿರುವೆ. ನನಗಾಗಿ ಕಥೆ ಬರೆಯುವ ಮಂದಿ ಇನ್ನೂ ಇದ್ದಾರೆ ಎನ್ನುವುದೇ ಖುಷಿ. ಮಾಡುವ ಕೆಲಸವನ್ನು ಪ್ರೀತಿಯಿಂದ ಮಾಡುತ್ತ ಹೋಗಬೇಕಷ್ಟೆ…

● ನಿಮ್ಮ ಮುಂದಿನ ಯೋಜನೆಗಳ ಕುರಿತು…

ಅಭಿಷೇಕ್ ನಿರ್ದೇಶನದ 'ಆರಾಮ್ ಅರವಿಂದ ಸ್ವಾಮಿ' ಚಿತ್ರವೂ ಬಿಡುಗಡೆಗೆ ತಯಾರಿದೆ. 'ಮಾಯಾನಗರಿ' ತೆರೆಗೆ ಬರದಿದ್ದರೆ ಆ ಸಿನಿಮಾ ಬಿಡುಗಡೆ ಮಾಡಬೇಕಿತ್ತು. ಈ ಸಿನಿಮಾದ ನಂತರ ಅದನ್ನು ತೆರೆಗೆ ತರುತ್ತೇವೆ. ಇವೆರಡೂ ಬಹಳ ಭರವಸೆ ಇಟ್ಟುಕೊಂಡಿರುವ ಚಿತ್ರಗಳು. ಚಂದ್ರಮೋಹನ್ ನಿರ್ದೇಶನ ಮಾಡುತ್ತಿರುವ ಸಿನಿಮಾ ಕೂಡ ಸದ್ದಿಲ್ಲದೆ ಪೂರ್ಣಗೊಂಡಿದೆ. ಅದರ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡುವೆ.

ಪ್ರಜಾವಾಣಿ ನೋಡಿಯೂ
ಸಿನಿಮಾತು
ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಚಿನ್ ವಾಲಿ ಜೊತೆ ಕೈಜೋಡಿಸಿದ ನಿರೂಪ್

'ರಂಗಿತರಂಗ' ಸಿನಿಮಾ ಮೂಲಕ ಚಂದನವನದಲ್ಲಿ ಸದ್ದು ಮಾಡಿದ ನಟ ನಿರೂಪ್ ಭಂಡಾರಿ ಅವರ ಹೊಸ ಪ್ರಾಜೆಕ್ಟ್ ಘೋಷಣೆಯಾಗಿದೆ.

'ರಾಜರಥ', 'ವಿಕ್ರಾಂತ್ ರೋಣ', 'ಆದಿ ಲಕ್ಷ್ಮಿ ಪುರಾಣ' ಮತ್ತು 'ವಿಂಡೋ ಸೀಟ್' ಚಿತ್ರಗಳ ಬಳಿಕ ನಿರೂಪ್, ಸಚಿನ್ ವಾಲಿ ಎಂಬುವವರ ನಿರ್ದೇಶನದ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಸಚಿನ್‌ಗೆ ಇದು ಚೊಚ್ಚಲ ಸಿನಿಮಾ. ಕೆಲವೊಂದಷ್ಟು ಸಿನಿಮಾಗಳಲ್ಲಿ ಸಹಾಯಕ ಹಾಗೂ ಸಹ ನಿರ್ದೇಶಕನಾಗಿ ಸಚಿನ್ ಕಾರ್ಯನಿರ್ವಹಿಸಿದ್ದಾರೆ. 'ಸತ್ಯ ಮತ್ತು ಸುಳ್ಳಿನ ನಡುವೆ ಇರುವ ಸಾಮಾಜಿಕ ಬದ್ಧತೆ ಸುತ್ತ ಸಾಗುವ ಕಾಮಿಡಿ ಮತ್ತು ಫ್ಯಾಮಿಲಿ ಎಂಟರ್‌ಟೈನರ್ ಕಥಾಹಂದರದ ಸಿನಿಮಾ ಇದಾಗಿದೆ ಎಂದಿದ್ದಾರೆ' ಸಚಿನ್. ಸ್ಕ್ರಿಪ್ಟ್ ಪೂಜೆ ಮುಗಿಸಿಕೊಂಡಿರುವ ಈ ಸಿನಿಮಾಗೆ ಅಂಕಿತ್ ಸಿನಿಮಾಸ್ ಅಡಿಯಲ್ಲಿ ಅಂಕಿತ್ ಸೋನಿಗಾರ ಹಣ ಹೂಡಿದ್ದಾರೆ. ಪ್ರಶಾಂತ್ ಮುಲಗೆ ಸಹ ನಿರ್ಮಾಪಕರಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ, ಸಂದೀಪ್ ವಲ್ಲೂರಿ ಛಾಯಾಚಿತ್ರಗ್ರಹಣ, ಉಜ್ವಲ್ ಚಂದ್ರ ಸಂಕಲನ, ಉಲ್ಲಾಸ್ ಹೈದೂರು ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಜನವರಿಯಿಂದ ಚಿತ್ರೀಕರಣಕ್ಕೆ ಹೊರಡಲು ಸಜ್ಜಾಗಿರುವ ಚಿತ್ರತಂಡ, ಬೆಂಗಳೂರು, ಶಿವಮೊಗ್ಗ, ತೀರ್ಥಹಳ್ಳಿ, ತುಮಕೂರು ಹಾಗೂ ಮೈಸೂರು ಸುತ್ತಮುತ್ತ ಶೂಟಿಂಗ್ ನಡೆಸಲು ನಿರ್ಧರಿಸಿದೆ.



ನಿರೂಪ್ ಭಂಡಾರಿ

'ರಿಚ್ಚಿ'ಯಲ್ಲಿ ಟಗರು ಪುಟ್ಟಿ ಮಾನ್ವಿತ ಹೆಜ್ಜೆ

ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ನಟನೆಯ 'ಟಗರು' ಸಿನಿಮಾದಲ್ಲಿನ ನಟನೆ ಬಳಿಕ ಸ್ಯಾಂಡಲ್‌ವುಡ್‌ನ 'ಟಗರು ಪುಟ್ಟಿ'ಯಾದ ನಟಿ ಮಾನ್ವಿತ ಕಾಮತ್, ಕೊಂಚ ಗ್ಯಾಪ್ ಬಳಿಕ ಮತ್ತೆ ತೆರೆ ಮೇಲೆ ಸಕ್ರಿಯರಾಗುತ್ತಿದ್ದಾರೆ. ಹೇಮಂತ್ ಕುಮಾರ್ ನಾಯಕನಾಗಿ ನಟಿಸಿ, ನಿರ್ದೇಶಿಸುತ್ತಿರುವ 'ರಿಚ್ಚಿ' ಚಿತ್ರದಲ್ಲಿ ನಟಿ ಮಾನ್ವಿತ ಕಾಮತ್ ನಟಿಸುತ್ತಿದ್ದಾರೆ.

ಗಾಯಕ ಸೋನು ನಿಗಮ್ ಹಾಡಿರುವ, ಅಗಸ್ತ್ಯ ಅವರು ಸಂಗೀತ ಸಂಯೋಜಿಸಿರುವ 'ಸನಿಹ ನೀ ಇರುವಾಗ' ಎಂಬ ಹಾಡಿಗೆ ಮಾನ್ವಿತ ಹೆಜ್ಜೆ ಹಾಕಲಿದ್ದಾರೆ. ಜೊತೆಗೆ ಸಿನಿಮಾದ ಕೆಲ ಸನ್ನಿವೇಶಗಳಲ್ಲೂ ಅವರು ಅಭಿನಯಿಸಲಿದ್ದಾರೆ ಎಂದು ಹೇಮಂತ್ ತಿಳಿಸಿದ್ದಾರೆ. ಅಗಸ್ತ್ಯ ಕ್ರಿಯೇಷನ್ಸ್ ಲಾಂಛನದಲ್ಲಿ ವೆಂಕಟಾಚಲಯ್ಯ ಅವರು ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ ರಾಕೇಶ್ ರಾವ್ ಅವರ ಸಹ ನಿರ್ಮಾಣವಿದೆ. 'ರಿಚ್ಚಿ' ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದೆ. ಒಂದು ಹಾಡು ಹಾಗೂ ಕೆಲವು ಮಾತಿನ ಭಾಗದ ಚಿತ್ರೀಕರಣ ಬಾಕಿಯಿದೆ ಎಂದಿದೆ ಚಿತ್ರತಂಡ. ಅಜಿತ್ ಕುಮಾರ್ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.




ಇಳಿವಯಸ್ಸಿನಲ್ಲಿ ಖಳನ ಖದರು

ಮಾಡುವ ಕೆಲಸದಲ್ಲಿ ಪ್ರೀತಿಯಿದ್ದರೆ, ಯಾವ ಕೆಲಸಕ್ಕೂ ವಯಸ್ಸು ಅಡ್ಡಿಯಾಗಲಾದರು ಎನ್ನುವುದಕ್ಕೆ ಸಾಕ್ಷಿಯಂತಿದೆ ಖಳನಾಯಕ ಮೋಹನ್ ಅವರ ಕಥೆ. 'ರಾಬರ್ಟ್' ಸಿನಿಮಾದಲ್ಲಿ 'ಕಟ್ಟಪ್ಪ'ನಾಗಿ ತಮ್ಮ 59ನೇ ವಯಸ್ಸಿನಲ್ಲಿ ಚಿತ್ರರಂಗ ಪ್ರವೇಶಿಸಿದ್ದ ಮೋಹನ್‌ಗೆ ಖಳನಾಯಕನಾಗಿ ಸಾಕಷ್ಟು ಅವಕಾಶಗಳು ಬರುತ್ತಿವೆ.

'ಖಾಸಗಿ ಕಂಪನಿಯಲ್ಲಿ ವ್ಯವಸ್ಥಾಪಕನಾಗಿ ನಿವೃತ್ತಿಯಾಗಿದ್ದೆ. ಜಿಮ್‌ವೊಂದರಲ್ಲಿ ನಿರ್ದೇಶಕ ತರುಣ್ ಸುಧೀರ್, ನಟ 'ನೆನಪಿರಲಿ ಪ್ರೇಮ್' ಸೇರಿದಂತೆ ಚಿತ್ರರಂಗದ ಹಲವರ ಪರಿಚಯವಾಯ್ತು. ನನ್ನ ಆರಡಿ ಎತ್ತರದ ದೇಹ ನೋಡಿ ನಿರ್ದೇಶಕ ತರುಣ್ 'ರಾಬರ್ಟ್' ಸಿನಿಮಾದಲ್ಲಿ ಅವಕಾಶ ಕೊಟ್ಟರು. ಅಲ್ಲಿಂದ ನಂತರ ಚಿತ್ರರಂಗದಲ್ಲಿ ಉತ್ತಮ ಅವಕಾಶಗಳು ಸಿಗುತ್ತಿವೆ' ಎನ್ನುತ್ತಾರೆ ಮೋಹನ್.

'ರಾಬರ್ಟ್'ನಲ್ಲಿ ಖಳನಟ ರವಿಶಂಕರ್ ಅವರ ಬಲಗೈ ಬಂಟನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಮೋಹನ್, ದರ್ಶನ್ ಅವರ 'ಕಾಟೇರ' ಚಿತ್ರದಲ್ಲಿಯೂ ಒಂದೊಳ್ಳೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಿಡುಗಡೆಗೆ ಸಿದ್ಧವಿರುವ 'ಫಾರಾ', 'ಅಥರ್ವ' ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಿಖಿಲ್ ಕುಮಾರಸ್ವಾಮಿ ಅವರ ಹೊಸ ಚಿತ್ರದಲ್ಲಿಯೂ ನಟಿಸುತ್ತಿದ್ದಾರೆ. 'ಮನಸ್ಸಿದ್ದರೆ ಮಾರ್ಗ. ಯಾವ ಕೆಲಸಕ್ಕೂ ವಯಸ್ಸು ಅಡ್ಡಿ ಬರುವುದಿಲ್ಲ. ನಟನೆ ನಿರಂತರ ಕಲಿಕೆ. ಜೊತೆಗೆ ಪ್ರತಿನಿತ್ಯ ಎರಡು ಗಂಟೆ ವರ್ಕೌಟ್ ಮಾಡಿ ಫಿಟ್‌ನೆಸ್ ಕಾಪಾಡಿಕೊಳ್ಳುತ್ತಿರುವೆ. ಇನ್ನಷ್ಟು ಅವಕಾಶಗಳಿಗೆ ಎದುರು ನೋಡುತ್ತಿದ್ದೇನೆ' ಎನ್ನುತ್ತಾರೆ ಮೋಹನ್.



ಮೋಹನ್

ಶುರುವಾಗಿದೆ 'ಆಸೆ'

ನಟ ರಮೇಶ್ ಅರವಿಂದ್ ಅವರು ನಿರ್ಮಿಸುತ್ತಿರುವ ಹೊಸ ಧಾರಾವಾಹಿ 'ಆಸೆ'. ಸ್ಟಾರ್ ಸುವರ್ಣ ವಾಹಿನಿಯಲ್ಲಿ ಸಂಜೆ 7.30ಕ್ಕೆ ಇದು ಪ್ರಸಾರವಾಗುತ್ತಿದೆ. ಸಾಮಾನ್ಯ ಜನರ ಅಸಾಮಾನ್ಯ ಕಥೆ ಇದಾಗಿದೆ.

ಚಿಕ್ಕವನಿದ್ದಾಗ ಗೊತ್ತಿಲ್ಲದೇ ನಡೆದ ಘಟನೆಯಿಂದಾಗಿ ತಾಯಿಯಿಂದ ಪ್ರತಿಕ್ಷಣ ದೂಷಿಸಲ್ಪಡುತ್ತಿರುವ 'ಸೂರ್ಯ', ಕಥಾನಾಯಕ. ಈತನ ಮಾತು ಕೊಂಚ ಒರಟು. ಆದರೆ ಮೃದುವಾದ ಮನಸು. ಮತ್ತೊಂದು ಕಡೆ ಬಡತನದಲ್ಲಿದ್ದರೂ ಸದಾ ಮಂದಹಾಸವನ್ನು ಹೊಂದಿರುವ 'ಮೀನಾ' ಈ ಕತೆಯ ನಾಯಕಿ. ತಮ್ಮ-ತಂಗಿಯರ ವಿದ್ಯಾಭ್ಯಾಸಕ್ಕಾಗಿ ಶ್ರಮಿಸುತ್ತಿರುವ ತಾಯಿಯ ಎರಡನೇ ರೂಪ ಈ ಮೀನಾ. ಇವರಿಬ್ಬರ ಬದುಕು ಎದುರು ಬದುರಾದಾಗ ಮುಂದೇನಾಗುತ್ತದೆ ಎನ್ನುವುದೇ ಕಥೆ. ಧಾರಾವಾಹಿಯಲ್ಲಿ ನಟ, ರಂಗಭೂಮಿ ಕಲಾವಿದ ಮಂಡ್ಯ ರಮೇಶ್ ಅವರು ಮುಖ್ಯ ಪಾತ್ರವೊಂದನ್ನು ನಿರ್ವಹಿಸುತ್ತಿದ್ದಾರೆ. ಜೊತೆಗೆ ನಿನಾದ್, ಪ್ರಿಯಾಂಕಾ, ಸ್ನೇಹಾ, ನಾಗೇಂದ್ರ ಶಾ, ಪ್ರಗತಿ, ನಂದೀಶ್, ಲಕ್ಷ್ಮಿ ಚಂದ್ರಶೇಖರ್ ಸೇರಿದಂತೆ ಹಲವು ಕಲಾವಿದರಿದ್ದಾರೆ.



ರಮೇಶ್ ಅರವಿಂದ್

ಆ್ಯಕ್ಷನ್ ಕಟ್ ಹೇಳಿದ ಅಪೂರ್ವ



ಅಪೂರ್ವ

'ಅಪೂರ್ವ' ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟು 'ವಿಕ್ಟರಿ-2', 'ಕೃಷ್ಣ ಟಾಕೀಸ್' ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿರುವ ಅಪೂರ್ವ ಇದೀಗ ನಿರ್ದೇಶಕಿಯಾಗಿ ಬೆಳ್ಳಿತೆರೆಯಲ್ಲಿ ಹೊಸ ಪಯಣ ಆರಂಭಿಸಿದ್ದಾರೆ.

ಅವರ ನಿರ್ದೇಶನದ ಚೊಚ್ಚಲ ಸಿನಿಮಾ 'ಓ ನನ್ನ ಚೇತನ' ಇಂದು(ಡಿ.15) ತೆರೆಕಂಡಿದೆ. ಮಕ್ಕಳ ಮೇಲೆ ಮೊಬೈಲ್‌ನಿಂದ ಆಗುವ ಪರಿಣಾಮವನ್ನು ಕಥಾವಸ್ತುವನ್ನಾಗಿಟ್ಟುಕೊಂಡು ಈ ಸಿನಿಮಾ ಕಥೆ ಹೆಣೆಯಲಾಗಿದೆ. ಸಿನಿಮಾದಲ್ಲಿ ದೊಡ್ಡ ತಾರಾಬಳಗವಿಲ್ಲ. ಇದು ಇಂದಿನ ಪೀಳಿಗೆಯನ್ನು ಎಚ್ಚರಿಸುವ ಸಿನಿಮಾ ಎಂದಿದೆ ಚಿತ್ರತಂಡ. ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದ್ದ ಈ ಸಿನಿಮಾವನ್ನು, ಬಿ.ಜಿ. ಮಲ್ಲಿಕಾರ್ಜುನ ಸ್ವಾಮಿ ಅವರು ಮೂನಿಪ್ಲಿಕ್ಸ್ ಸ್ಟುಡಿಯೋಸ್ ಮೂಲಕ ಬಿಡುಗಡೆ ಮಾಡುತ್ತಿದ್ದಾರೆ.

'ಅಲೆಮಾರಿ' ಖ್ಯಾತಿಯ ಹರಿ ಸಂತು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ಪ್ರದೀಪ್ ವರ್ಮಾ ಸಂಗೀತ ಸಂಯೋಜಿಸಿದ್ದಾರೆ. ಗುರುಪ್ರಶಾಂತ್ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಚಿತ್ರಕ್ಕಿದೆ. ಚಿತ್ರದ ಮುಖ್ಯಭೂಮಿಕೆಯಲ್ಲಿ ಮಾಸ್ಟರ್ ಪ್ರತೀಕ್, ಮಾಸ್ಟರ್ ಪ್ರೀತಮ್, ಬೇಬಿ ದಾನೇಶ್ವರಿ, ಬೇಬಿ ಡಿಂಪನಾ, ಬೇಬಿ ಮೋನಿಕಾ ನಟಿಸಿದ್ದಾರೆ.

ಇಂದು ತೆರೆಗೆ

'ಯೂಸ್‌ಲೆಸ್ ಫೆಲೋ'

ಈ ಸಿನಿಮಾ ಮನು ಯು.ಬಿ. ಎಂಬುವವರ ನಿರ್ದೇಶನದ ಚೊಚ್ಚಲ ಸಿನಿಮಾ. ನಟನಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ಮನು ಅವರೇ ಈ ಚಿತ್ರದ ನಾಯಕ. ನಿರ್ದೇಶನದ ಜೊತೆ ಚಿತ್ರಕಥೆ, ಸಂಭಾಷಣೆಯನ್ನೂ ಅವರು ಬರೆದಿದ್ದಾರೆ. ಲವ್ ಕಂ ಆ್ಯಕ್ಷನ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ಮನುಗೆ ಜೋಡಿಯಾಗಿ ದಿವ್ಯಾ ಗೌಡ ನಟಿಸಿದ್ದು, ವಿಜಯ್ ಸೂರ್ಯ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಶ್ಯಾಮ್ ಸಿಂಧನೂರು ಛಾಯಾಚಿತ್ರಗ್ರಹಣ, ವಿಜಯ್ ಸಿಂದಿಗಿ ಸಂಕಲನ, ಶಿವಪ್ರಸಾದ್ ಸಂಗೀತ ಚಿತ್ರಕ್ಕಿದೆ.



ಮನು ಯು.ಬಿ

ಬರ್ತಿದ್ದಾರೆ 'ಬ್ಯಾಕ್ ಬೆಂಚರ್ಸ್'



'ಬ್ಯಾಕ್ ಬೆಂಚರ್ಸ್' ಚಿತ್ರತಂಡ

ಪ್ರೇಕ್ಷಕರಿಗೆ ಮನರಂಜನೆಯ ರಸದೌತಣವನ್ನು ಬಡಿಸುತ್ತೇವೆ ಎನ್ನುತ್ತಾ ಹೊಸಬರ ತಂಡವೊಂದು ತೆರೆಗೆ ಬರುತ್ತಿದೆ. ಪಿ.ಪಿ.ಪ್ರೊಡಕ್ಷನ್ಸ್ ಲಾಂಛನದಲ್ಲಿ ರಮ್ಯ ಅವರು ನಿರ್ಮಿಸಿರುವ, ಬಿ.ಆರ್ ರಾಜಶೇಖರ್ ನಿರ್ದೇಶನದ 'ಬ್ಯಾಕ್ ಬೆಂಚರ್ಸ್' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ.

ಇತ್ತೀಚೆಗೆ ಈ ಚಿತ್ರದ ಹಾಡೊಂದು ಆನಂದ್ ಆಡಿಯೊ ಮೂಲಕ ಬಿಡುಗಡೆಯಾಗಿದೆ. ನಕುಲ್ ಅಭಯಂಕರ್ ಸಂಗೀತ ನೀಡಿರುವ ಈ ಹಾಡನ್ನು ವಿಜಯ್ ಪ್ರಕಾಶ್ ಹಾಡಿದ್ದಾರೆ. 'ಒಂದು ವರ್ಷ ವರ್ಕ್‌ಶಾಪ್ ನಡೆಸಿ ಈ ಚಿತ್ರದ ಚಿತ್ರೀಕರಣ ಮಾಡಿದ್ದೇವೆ' ಎಂದು ಮಾತು ಆರಂಭಿಸಿದ ನಿರ್ದೇಶಕ ಬಿ.ಆರ್ ರಾಜಶೇಖರ್, 'ಈ ಚಿತ್ರದಲ್ಲಿ ಮನರಂಜನೆಗೇ ಆದ್ಯತೆ. ಎಲ್ಲರಿಗೂ ಕಾಲೇಜು ದಿನಗಳನ್ನು ನೆನಪಿಸುವ ಚಿತ್ರವಿದು. ಹೊಸ ಪ್ರತಿಭೆಗಳೇ ಹೆಚ್ಚಾಗಿ ಅಭಿನಯಿಸಿದ್ದಾರೆ' ಎಂದರು.

''ಲವ್ ಮಾಕ್ಟೇಲ್-2' ಚಿತ್ರದ ನಂತರ ನಾನು ಸಂಗೀತ ನೀಡುತ್ತಿರುವ ಚಿತ್ರವಿದು' ಎಂದಿದ್ದಾರೆ ನಕುಲ್. ಚಿತ್ರದಲ್ಲಿ ಅರವಿಂದ್ ಕುಪ್ಳಿಕರ್, ರಂಜನ್ ನರಸಿಂಹಮೂರ್ತಿ, ಜತಿನ್ ಆರ್ಯನ್, ಆಕಾಶ್, ಶಶಾಂಕ್ ಸಿಂಹ, ಮಾನ್ಯ ಗೌಡ, ಕುಂಕುಮ್, ಅನುಶಾ ಸುರೇಶ್, ಮನೋಜ್ ಶೆಟ್ಟಿ, ನಮಿತಾ ಗೌಡ ಮುಂತಾದವರು ನಟಿಸಿದ್ದಾರೆ.

ಹೊಸ ವಂಟಮೂರಿ ಘಟನೆ: 'ನಾವೇನು 17ನೇ ಶತಮಾನಕ್ಕೆ ತೆರಳುತ್ತಿದ್ದೇವೆಯೇ' ಎಂದು ಪ್ರಶ್ನಿಸಿದ ನ್ಯಾಯಪೀಠ

ಮಹಿಳೆ ಬೆತ್ತಲು ಕೃತ್ಯ: ಮರುಗಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದ ಮಹಿಳೆಯನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ ಥಳಿಸಿರುವ ಘಟನೆ ಬಗ್ಗೆ ಮತ್ತೊಮ್ಮೆ ಗಂಭೀರ ಆಕ್ಷೇಪ ವ್ಯಕ್ತಪಡಿಸಿರುವ ಹೈಕೋರ್ಟ್, 'ನಾವೆಲ್ಲಾ 21ನೇ ಶತಮಾನದಲ್ಲಿದ್ದೇವೆಯೊ ಅಥವಾ 17–18ನೇ ಶತಮಾನಕ್ಕೆ ವಾಪಸು ಹೋಗುತ್ತಿದ್ದೇವೆಯೊ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಪೊಲೀಸರ ಕೆಲಸ ತನಿಖೆ ಮಾಡುವುದಷ್ಟೇ ಅಲ್ಲ, ಘಟನೆಯನ್ನು ತಡೆಯುವುದೂ ಅವರ ಜವಾಬ್ದಾರಿಯಾಗಿರುತ್ತದೆ. ತಪ್ಪಿತಸ್ಥ ಪೊಲೀಸ್ ಇನ್‌ಸ್ಪೆಕ್ಟರ್ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

'ರಾಜ್ಯದಲ್ಲಿ ಮಹಿಳಾ ಆಯೋಗ ಹಾಗೂ ಮಾನವ ಹಕ್ಕುಗಳ ಆಯೋಗಗಳು ಏನು ಮಾಡುತ್ತಿವೆ?' ಎಂದು ಕಿಡಿಕಾರಿರುವ ನ್ಯಾಯಪೀಠ, 'ಇಂತಹ ಘಟನೆಗಳು ನಡೆಯಬಾರದು' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. 'ಮುಂದಿನ ವಿಚಾರಣೆಯಲ್ಲಿ ಬೆಳಗಾವಿ ಪೊಲೀಸ್ ಆಯುಕ್ತರು ಮತ್ತು ಬೆಳಗಾವಿ ಗ್ರಾಮಾಂತರ ಎಸಿಪಿ ತನಿಖಾ ವರದಿಯೊಂದಿಗೆ ಕೋರ್ಟ್‌ನಲ್ಲಿ ಖುದ್ದು ಹಾಜರಿರಬೇಕು' ಎಂದು ಆದೇಶಿಸಿದೆ.

ಬೇಸರ: ಘಟನೆಯ ಬಗ್ಗೆ ಅತ್ಯಂತ ನೋವಿನಿಂದ ನುಡಿದ ನ್ಯಾಯಪೀಠ, 'ಘಟನೆಯ ಬಗ್ಗೆ ನಮಗೆ ಮಾತೇ ಹೊರಡದಂತಾಗಿದೆ. ಇದೊಂದು ನಾಚಿಕೆಗೇಡಿನ ವಿಚಾರ. ಇದನ್ನೆಲ್ಲಾ ನೋಡಿದರೆ ನಮ್ಮ ತಾಂತ್ರಿಕ ಮುನ್ನಡೆ, ಆರ್ಥಿಕ ಗಳಿಕೆಗೆ ಅರ್ಥವೇ ಇಲ್ಲ ಅನ್ನಿಸುತ್ತದೆ. ನಮ್ಮನ್ನು ನಾವು ಮನುಷ್ಯರು ಎಂದು ಕರೆದುಕೊಳ್ಳಲಾಗದೇ ಹೋದರೆ ಎಲ್ಲವೂ ನಿಷ್ಫಲ' ಎಂದು ಹೇಳಿತು.

'ಸಂತ್ರಸ್ತ ಮಹಿಳೆಯನ್ನು ಮಧ್ಯರಾತ್ರಿ 1 ಗಂಟೆಯಲ್ಲಿ ಮನೆಯಿಂದ ಹೊರಗೆ ಎಳೆತಂದು ಕಂಬಕ್ಕೆ ಕಟ್ಟಿಹಾಕಿ ಎರಡು ಗಂಟೆಗಳ ಕಾಲ ಅಮಾನವೀಯ ವರ್ತನೆ ಮೆರೆಯಲಾಗಿದೆ. ಪ್ರಾಣಿಗಳಂತೆ ಆಕೆಯ ಮೇಲೆ ದಾಳಿ ನಡೆಸಲಾಗಿದೆ. ಇದು ಮನುಷ್ಯರು ನಡೆದುಕೊಳ್ಳುವ ರೀತಿಯೇ? ಮನುಷ್ಯ ಇಷ್ಟೊಂದು ಕ್ರೂರಿಯಾಗಲು ಹೇಗೆ ತಾನೆ ಸಾಧ್ಯ? ಇಂಥವರನ್ನು ಮನುಷ್ಯರು ಎನ್ನಲಿಕ್ಕೇ ನಾಚಿಕೆಯಾಗುತ್ತದೆ. ಇದೊಂದು ಅಮಾನವೀಯ ಮತ್ತು ಹೇಯ ಘಟನೆ' ಎಂದು ಮಮ್ಮಲ ಮರುಗಿತು.

'ಯುವಕ-ಯುವತಿಯೊಂದಿಗೆ ಅಥವಾ ಯುವತಿ-ಯುವಕನೊಂದಿಗೆ ಮನೆಬಿಟ್ಟು ಹೋಗುವ ವಿಚಾರ ಹಳ್ಳಿಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬುತ್ತದೆ. ಇಂತಹ ಘಟನೆಗಳನ್ನು ಪೊಲೀಸರು ತಪ್ಪಿಸಬೇಕು. ಬೆಳಗಾವಿ ಜಿಲ್ಲೆಯ ಪೊಲೀಸರು ಪರಿಸ್ಥಿತಿ ಕೈಮೀರದಂತೆ ಎಚ್ಚರಿಕೆ ವಹಿಸಬೇಕಿತ್ತು' ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.



ಪೀಠ ಹೇಳಿದ್ದೇನು?

- ಪೊಲೀಸರು ಸಂತ್ರಸ್ತೆಯ ನೆರವಿಗೆ ತಕ್ಷಣವೇ ಏಕೆ ಧಾವಿಸಲಿಲ್ಲ?
- ದುರುಳರಿಗೆ ಕಾನೂನಿನ ಭಯವಿಲ್ಲವೇ?
- ಪ್ರಗತಿಪರ ಕರ್ನಾಟಕದ ಪಾಲಿಗೆ ಇದು ದುರದೃಷ್ಟಕರ

ಸರ್ಕಾರದ ವರದಿಗೆ ಅತೃಪ್ತಿ

ಘಟನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಸಲ್ಲಿಸಿದ ಸ್ಥಿತಿಗತಿ ವರದಿಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, 'ಸಂತ್ರಸ್ತ ಮಹಿಳೆ ಮತ್ತು ಆಕೆಯ ಕುಟುಂಬದ ಸದಸ್ಯರಿಗೆ ಮನೋವೈಜ್ಞಾನಿಕ ಕೌನ್ಸೆಲಿಂಗ್ ನೀಡಿರುವ ಮತ್ತು ಸಂತ್ರಸ್ತೆಗೆ ಆಗಿರುವ ಗಾಯಗಳ ಬಗ್ಗೆ ಚಿಕಿತ್ಸೆ ನೀಡಿದ ಮಾಹಿತಿ ಇಲ್ಲವಲ್ಲಾ' ಎಂದು ಕೇಳಿತು. ಇದಕ್ಕೆ ಪ್ರತಿಕ್ರಿಯಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಈ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲಾಗುವುದು' ಎಂದರು.



ಪುರುಷ ಪ್ರಧಾನ ವ್ಯವಸ್ಥೆ ಎಷ್ಟು ಆಳವಾಗಿದೆ ಎಂಬುದಕ್ಕೆ ಇದು ಸಾಕ್ಷಿ. ಮಹಿಳೆ ಜೊತೆ ಹೀಗೆ ನಡೆದುಕೊಳ್ಳುವ ಸನ್ನದು ನೀಡಿದವರು ಯಾರು? ಇದು ಮಾನಸಿಕ ಸಮಸ್ಯೆ ಇರಬಹುದೇ?

ಪಿ.ಬಿ.ವರಾಳೆ ಮುಖ್ಯ ನ್ಯಾಯಮೂರ್ತಿ



ದ್ರೌಪದಿ ಸೀರೆಯ ಅಪಹರಣಕ್ಕಿಂತಲೂ ಇದು ಕ್ರೂರ. ಸೂಕ್ಷ್ಮಮತಿ ಮಹಿಳೆಯರಲ್ಲಿ ಇದು ಭಯ ಹುಟ್ಟಿಸಲಿದೆ. ಅವರು ಮುಂದೆ ಸುತ್ತಲ ಸಮಾಜವನ್ನೇ ದ್ವೇಷಿಸಲಾರಂಭಿಸಬಹುದು.

ಕೃಷ್ಣ ಎಸ್.ದೀಕ್ಷಿತ್ ನ್ಯಾಯಮೂರ್ತಿ

ಪ್ಯಾಕೇಜ್ ಟೆಂಡರ್ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಪ್ಯಾಕೇಜ್ ಟೆಂಡರ್ ವ್ಯವಸ್ಥೆ ರದ್ದುಪಡಿಸಬೇಕು. ಈ ವ್ಯವಸ್ಥೆಯಿಂದ ಬೇರೆ ರಾಜ್ಯಗಳ ದೊಡ್ಡ ಕಂಪನಿಗಳಿಗೆ ಅನುಕೂಲ. ಸ್ಥಳೀಯ ಗುತ್ತಿಗೆದಾರರಿಗೆ ಕೆಲಸ ಸಿಗುತ್ತಿಲ್ಲ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಹೇಳಿದರು.

ತಾಲ್ಲೂಕಿನ ಹಲಗಾದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪ್ಯಾಕೇಜ್ ಟೆಂಡರ್ ವ್ಯವಸ್ಥೆ ಸ್ಥಳೀಯ ಗುತ್ತಿಗೆದಾರರ ಹಿತಾಸಕ್ತಿಗೆ ವಿರುದ್ಧವಾಗಿದೆ. ಕೆಲವೇ ಸಚಿವರು, ಅಧಿಕಾರಿಗಳು, ಏಜೆಂಟರಿಗೆ ಲಾಭದಾಯಕವಾಗಿದೆ' ಎಂದರು.

'ಈ ವ್ಯವಸ್ಥೆಯ ಸಮಸ್ಯೆಗಳನ್ನು ಕೆಲ ಗುತ್ತಿಗೆದಾರರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಗಮನಕ್ಕೆ ತಂದಿದ್ದು, ಅವರು ಬೆಳಗಾವಿ ಜಿಲ್ಲೆಯಲ್ಲಿ ಪ್ಯಾಕೇಜ್ ವ್ಯವಸ್ಥೆಯಡಿ ಕಾಮಗಾರಿ ಕೈಗೆತ್ತಿಕೊಳ್ಳದಂತೆ ನೋಡಿಕೊಂಡಿದ್ದಾರೆ. ಆದರೆ, ಬೇರೆ ಜಿಲ್ಲೆಗಳಲ್ಲಿ ಪ್ಯಾಕೇಜ್ ವ್ಯವಸ್ಥೆಯಡಿ ಕಾಮಗಾರಿ ಮುಂದುವರಿದಿದೆ. ಇದು ಸರಿಯಲ್ಲ' ಎಂದು ಹೇಳಿದರು.



ಡಿ.ಕೆಂಪಣ್ಣ

'ಬಾಕಿ ಪಾವತಿಗೆ ಆಗ್ರಹಿಸಿ ರಾಜ್ಯದ ವಿವಿಧೆಡೆ ನಿರಂತರ ಹೋರಾಟ ನಡೆಸಲಾಗುವುದು' ಎಂದರು

₹20 ಸಾವಿರ ಕೋಟಿಗೂ ಅಧಿಕ ಬಿಲ್ ಬಾಕಿ: 'ಬಾಕಿ ಬಿಲ್ ತೆರವುಗೊಳಿಸುವವರೆಗೆ ರಾಜ್ಯದಲ್ಲಿ ಹೊಸ ಕಾಮಗಾರಿ ಆರಂಭಿಸಲು ಆಗುತ್ತಿಲ್ಲ. ಗುತ್ತಿಗೆದಾರರ ₹20 ಸಾವಿರ ಕೋಟಿಗೂ ಅಧಿಕ ಮೊತ್ತದ ಬಿಲ್ ಮೂರು ವರ್ಷಗಳಿಂದ ಬಾಕಿ ಉಳಿದಿದೆ' ಎಂದು ಹೇಳಿದರು.

'ಬಿಜೆಪಿ ಸರ್ಕಾರದ ವಿರುದ್ಧ ಮಾಡಿದ್ದ ಶೇ 40ರಷ್ಟು ಕಮಿಷನ್ ಆರೋಪ ಕುರಿತು ಪ್ರತಿಕ್ರಿಯಿಸಿದ ಅವರು, 'ಪ್ರಕರಣ ವಿಚಾರಣೆ ಹಂತದಲ್ಲಿದೆ. ದಾಖಲೆ ಸಲ್ಲಿಸಿದ್ದೇವೆ. ಡಿ.30ರಂದು ಮತ್ತೆ ವಿಚಾರಣೆಗೆ ಬರಲಿದ್ದು, ಇನ್ನಷ್ಟು ದಾಖಲೆ ಸಲ್ಲಿಸುತ್ತೇವೆ' ಎಂದರು.



ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ಗುರುವಾರ 'ಪ್ರಜಾವಾಣಿ' ಪತ್ರಿಕಾ ಬಳಗದಿಂದ ಪರಿಶ್ರಮ ಪಿಯು ಕಾಲೇಜು ಮತ್ತು ಭೀಮಾ ಗೋಲ್ಡ್ ಸಹಯೋಗದಲ್ಲಿ ಪ್ರೌಢಶಾಲಾ ಮಕ್ಕಳಿಗೆ ಆಯೋಜಿಸಿದ್ದ ದಾವಣಗೆರೆ ವಲಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾದ ಶ್ರೀ ತರಳಬಾಳು ಜಗದ್ಗುರು ಕಾಂಪೊಸಿಟ್ ಕಾಲೇಜು, ಪ್ರೌಢಶಾಲಾ ವಿಭಾಗ (ಎಸ್‌ಟಿಜೆ) ಅನುಭವಮಂಟಪದ ವಿದ್ಯಾರ್ಥಿನಿಯರಾದ ಸಿಂಚನಾ ವೈ.ಜಿ., ಮಾನಸಿ ಶ್ಯಾಮ್ ಅವರಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಜಿ. ಕೊಟ್ರೇಶ್ ಬಹುಮಾನ ವಿತರಿಸಿದರು

6 ದಿನ ಪ್ರವಾಸ ನಿರ್ಬಂಧ

ಚಿಕ್ಕಮಗಳೂರು: ದತ್ತ ಜಯಂತಿ ಹಿನ್ನೆಲೆಯಲ್ಲಿ ಮುಳ್ಳಯ್ಯನಗಿರಿ ಸುತ್ತಮುತ್ತಲ ಪ್ರದೇಶಗಳಿಗೆ ಡಿ.22ರಿಂದ 27ರವರೆಗೆ ಆರು ದಿನ ಬೇರೆ ಪ್ರವಾಸಿಗರ ಭೇಟಿಯನ್ನು ಜಿಲ್ಲಾಡಳಿತ ನಿರ್ಬಂಧಿಸಿದೆ.

ಡಿ.24ರಿಂದ 26ರವರೆಗೆ ದತ್ತ ಜಯಂತಿ ನಡೆಯಲಿವೆ. ಜಿಲ್ಲೆಯ ವಿವಿಧೆಡೆಯಿಂದ ಸಾವಿರಾರು ಮಾಲಧಾರಿ ಭಕ್ತರು ಬರುವುದರಿಂದ ಇನಾಂ ದತ್ತಾತ್ರೇಯ ಬಾಬಾಬುಡನಗಿರಿಸ್ವಾಮಿ ದರ್ಗಾ, ಸೀತಾಳಯ್ಯನಗಿರಿ, ಮುಳ್ಳಯ್ಯನಗಿರಿ, ಹೊನ್ನಮ್ಮನಹಳ್ಳ, ಝರಿ ಜಲಪಾತ, ಮಾಣಿಕ್ಯಧಾರಾ ಜಲಪಾತ, ಗಾಳಿಕೆರೆಗೆ ಬೇರೆ ಪ್ರವಾಸಿಗರು ಬರುವುದನ್ನು ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್‌ಗೆ ಸುಪ್ರೀಂ ಕೋರ್ಟ್ ಸೂಚನೆ

ಸಿಂಧೂರಿ ವಿರುದ್ಧದ ಪೋಸ್ಟ್ ತೆಗೆಯಿರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ವಿರುದ್ಧದ ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ಪೋಸ್ಟ್‌ಗಳನ್ನು ಶುಕ್ರವಾರದೊಳಗೆ ತೆಗೆದು ಹಾಕಬೇಕು ಎಂದು ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ. ಒಂದು ವೇಳೆ ಅವುಗಳನ್ನು ತೆಗೆಯಲು ಸಾಧ್ಯವಾಗದಿದ್ದರೆ ಕನಿಷ್ಠ ಪಕ್ಷ ರೋಹಿಣಿ ವಿರುದ್ಧದ ಎಲ್ಲ ಹೇಳಿಕೆಗಳನ್ನು ವಾಪಸ್ ಪಡೆದಿದ್ದೇನೆ ಎಂದೂ ಪೋಸ್ಟ್ ಮಾಡಬೇಕು ಎಂದು ಕೋರ್ಟ್ ಹೇಳಿದೆ.

'ನನ್ನ ವಿರುದ್ಧ ರೋಹಿಣಿ ಸಿಂಧೂರಿ ಹೂಡಿರುವ ಕ್ರಿಮಿನಲ್ ಮಾನನಷ್ಟ ಆರೋಪದ ಖಾಸಗಿ ದೂರನ್ನು ರದ್ದುಪಡಿಸಬೇಕು' ಎಂದು ಕೋರಿ ಡಿ.ರೂಪಾ ಮೌದ್ಗಿಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠವು ಮೌಖಿಕ ನಿರ್ದೇಶನ ನೀಡಿತು.



ರೋಹಿಣಿ



ಡಿ. ರೂಪಾ

ಇಬ್ಬರು ಅಧಿಕಾರಿಗಳು ಮಧ್ಯಸ್ಥಿಕೆ ಮೂಲಕ ತಮ್ಮ ವಿವಾದ ಬಗೆಹರಿಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ಸಲಹೆ ನೀಡಿತ್ತು. ಮಧ್ಯಸ್ಥಿಕೆ ವಿಫಲವಾಗಿದೆ ಎಂದು ನ್ಯಾಯಾಲಯಕ್ಕೆ ಗುರುವಾರ ತಿಳಿಸಲಾಯಿತು. ಇಬ್ಬರೂ ಅಧಿಕಾರಿಗಳು ನ್ಯಾಯಾಲಯದಲ್ಲಿ ಹಾಜರಾಗಿದ್ದರು. ಕ್ರಿಮಿನಲ್ ಪ್ರಕರಣವನ್ನು ಹಿಂಪಡೆಯಲು ಸಿಂಧೂರಿ ಒಪ್ಪಲಿಲ್ಲ.

ಅಧಿಕಾರಿಗಳಿಬ್ಬರು ಸೌಹಾರ್ದಯುತವಾಗಿ ವಿವಾದ ಬಗೆಹರಿಸಿಕೊಳ್ಳದಿರುವುದಕ್ಕೆ ಪೀಠ ಅಸಮಾಧಾನ ವ್ಯಕ್ತಪಡಿಸಿತು. 'ಐಎಎಸ್–ಐಪಿಎಸ್ ಅಧಿಕಾರಿಗಳು ಈ ರೀತಿ ಕಚ್ಚಾಟ ನಡೆಸಿದರೆ ಆಡಳಿತ ಹೇಗೆ ನಡೆಯುತ್ತದೆ' ಎಂದು ಓಕಾ ಪ್ರಶ್ನಿಸಿದರು.

ಸಾಮಾಜಿಕ ಜಾಲತಾಣಗಳ ಮೂಲಕ ರೂಪಾ ಅವರು ತಮ್ಮ ಮಾನಹಾನಿ ಮಾಡಿದ್ದಾರೆ ಎಂದು ರೋಹಿಣಿ ಅವರು ಪೀಠಕ್ಕೆ ತಿಳಿಸಿದರು. 'ನನ್ನ ಕುಟುಂಬದವರನ್ನು ಎಳೆದು ತಂದಿದ್ದು ಏಕೆ? ರಾಜ್ಯದಲ್ಲಿ ನಾನು ಹೇಗೆ ಕೆಲಸ ಮಾಡಲು ಸಾಧ್ಯ?' ಎಂದು ಅವರು ಪ್ರಶ್ನಿಸಿದರು. 'ಸಿಂಧೂರಿ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳನ್ನು ನೀವು ತನಿಖೆ ನಡೆಸುತ್ತಾ ಇದ್ದೀರಾ' ಎಂದು ರೂಪಾ ಅವರನ್ನು ಪೀಠ ಪ್ರಶ್ನಿಸಿತು. ಆಗ ರೂಪಾ, 'ಇಲ್ಲ' ಎಂದು ಉತ್ತರಿಸಿದರು. 'ಯಾರೋ ಮಾಡಿದ ಆರೋಪದ ಬಗ್ಗೆ ಮತ್ಯಾರೋ ವಿಚಾರಣೆ ನಡೆಸುತ್ತಿದ್ದಾರೆ. ಈ ಪ್ರಕರಣದಲ್ಲಿ ನಿಮಗಿರುವ ಹಿತಾಸಕ್ತಿ ಏನು' ಎಂದು ಪೀಠ ಪ್ರಶ್ನಿಸಿತು. 24 ಗಂಟೆಗಳಲ್ಲಿ ಸಾಮಾಜಿಕ ಜಾಲತಾಣದ ಪೋಸ್ಟ್‌ಗಳನ್ನು ತೆಗೆದು ಹಾಕುವಂತೆ ಸೂಚಿಸಿತು. 'ಈ ವಿವಾದಕ್ಕೆ ಕೊನೆ ಹಾಕಲು ಬಯಸಿದ್ದೇವೆ. ಆ ಕಾರಣಕ್ಕೆ ಈ ಪ್ರಕರಣದ ವಿಚಾರಣೆ ನಡೆಸುತ್ತಿದ್ದೇವೆ' ಎಂದು ಪೀಠ ಹೇಳಿತು.

ಪ್ರಕರಣವೇನು?: 'ನನ್ನ ವಿರುದ್ಧ ಡಿ.ರೂಪಾ ಮೌದ್ಗಿಲ್ 2023ರ ಫೆಬ್ರುವರಿ 18 ಮತ್ತು 19ರಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಆರೋಪಗಳು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವಂತಿವೆ. ನನ್ನ ತೇಜೋವಧೆ ಮಾಡುವ ದುರದ್ದೇಶದಿಂದಲೇ ಈ ಕೃತ್ಯ ಎಸಗಲಾಗಿದೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಮಾನಸಿಕ ಯಾತನೆ ಉಂಟು ಮಾಡಿದೆ' ಎಂದು ಆರೋಪಿಸಿ ರೋಹಿಣಿ ಸಿಂಧೂರಿ ಮಾರ್ಚ್ 3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

'ಮಾನಹಾನಿ ಮತ್ತು ಮಾನಸಿಕ ಯಾತನೆ ಉಂಟು ಮಾಡಿರುವುದಕ್ಕಾಗಿ ಡಿ.ರೂಪಾ ಅವರಿಂದ ₹ 1 ಕೋಟಿ ಮೊತ್ತವನ್ನು ಪರಿಹಾರ ರೂಪವಾಗಿ ಕೊಡಿಸಿಕೊಡಬೇಕು. ಅವರ ವಿರುದ್ಧ ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದರು. ದೂರು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ಮಾರ್ಚ್ 24ರಂದು ಆದೇಶಿಸಿತ್ತು. ಈ ಆದೇಶ ಮತ್ತು ಖಾಸಗಿ ದೂರನ್ನು ರದ್ದುಪಡಿಸಬೇಕು ಎಂದು ಕೋರಿ ರೂಪಾ 2023ರ ಮೇ 31ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು.

ಸಂಕ್ಷಿಪ್ತ ಸುದ್ದಿ

ಪಿಡಿಒ ಅಮಾನತು

ಕಮಲಾಪುರ: ನಕಲಿ ಬಿಲ್ ಸೃಷ್ಟಿಸಿ ಹಣಕಾಸು ಅಕ್ರಮ ಎಸಗಿದ್ದ ಆರೋಪದಡಿ ತಾಲ್ಲೂಕಿನ ಓಕಳಿ ಗ್ರಾಮ ಪಂಚಾಯಿತಿ ಪಿಡಿಒ ಪ್ರವೀಣಕುಮಾರ ಅವರನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರಸಿಂಗ್ ಮೀನಾ ಅಮಾನತುಪಡಿಸಿದ್ದಾರೆ. 'ಪಿಡಿಒ ಹಾಗೂ ಅಧ್ಯಕ್ಷೆ ಅಲ್ಕಾ ಅನಿಲಕುಮಾರ ನರೋಣೆ ಅವರ ವಿರುದ್ಧ ಹಣ ದುರ್ಬಳಕೆ ಕುರಿತು' ಗ್ರಾ. ಪಂ ಮಾಜಿ ಅಧ್ಯಕ್ಷ ವಿಜಯಕುಮಾರ ಶೆಟ್ಟಿ ಹಾಗೂ ಸ್ಥಳೀಯ ಅಂಬೇಡ್ಕರ್ ಯುವಸೇನೆ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ತಳಕೇರಿ ದೂರು ನೀಡಿದ್ದರು.

ಬ್ಯಾಂಕ್, ಎಟಿಎಂಗೆ ಕನ್ನ: ಹಣ ಲೂಟಿ

ಬೀದರ್: ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆ ಮತ್ತು ಎಟಿಎಂಗೆ ಕನ್ನ ಹಾಕಿದ ಕಳ್ಳರು ₹25.97 ಲಕ್ಷ ಕದ್ದೊಯ್ದಿದ್ದಾರೆ.

ಕಮಲನಗರ ತಾಲ್ಲೂಕಿನ ತೋರಣಾ ಗ್ರಾಮದ ಎಸ್‌ಬಿಐ ಶಾಖೆಯ ತಿಜೋರಿ ಕತ್ತರಿಸಿ ₹18.36 ಲಕ್ಷ ಕಳ್ಳತನ ಮಾಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. ಚಿಟಗುಪ್ಪ ಪಟ್ಟಣದ ಎಸ್‌ಬಿಐನ ಎಟಿಎಂನಿಂದ ₹7.61 ಲಕ್ಷ ಕಳ್ಳತನ ಮಾಡಿದ್ದಾರೆ ಎಂದು ತಿಳಿಸಿದರು.

ಗಂಡು ಚಿರತೆ ಸಾವು

ಹುಣಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಲ್ಲಹಳ್ಳ ವಲಯದಲ್ಲಿ ಬುಧವಾರ ಗಂಡು ಚಿರತೆ ಕಳೇಬರ ಪತ್ತೆಯಾಗಿದೆ. 10 ವರ್ಷದ ಚಿರತೆ ಮೃತಪಟ್ಟು 2–3 ದಿನಗಳಾಗಿವೆ. 'ಹುಲಿ ಜೊತೆಗಿನ ಕಾದಾಟದಲ್ಲಿ ಗಾಯಗೊಂಡು ಚಿರತೆ ಸತ್ತಿದೆ ಎಂದು ಪಶುವೈದ್ಯರು ತಿಳಿಸಿದ್ದಾರೆ' ಎಂದು ನಾಗರಹೊಳೆ ಹುಲಿ ಯೋಜನಾ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ್ ತಿಳಿಸಿದರು.

ರಾಜಪ್ಪ ದಳವಾಯಿಗೆ ಸಾಹಿತ್ಯ, ಜವರಾಯಿಗೌಡರಿಗೆ ಕೃಷಿ ಪ್ರಶಸ್ತಿ

ಮಂಡ್ಯ: ಇಲ್ಲಿನ ಕರ್ನಾಟಕ ಸಂಘವು, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಬಿ.ರಾಮಕೃಷ್ಣ ಹೆಸರಿನಲ್ಲಿ ಸ್ಥಾಪಿಸಿರುವ ಸಾಹಿತ್ಯ ಹಾಗೂ ಕೃಷಿ ಪ್ರಶಸ್ತಿಗೆ ಚಿಕ್ಕಮಗಳೂರು ಜಿಲ್ಲೆಯ ರಾಜಪ್ಪ ದಳವಾಯಿ, ಮಂಡ್ಯ ಜಿಲ್ಲೆಯ ಗೂಡೆಹೊಸಳ್ಳಿ ಜವರಾಯಿಗೌಡ ಆಯ್ಕೆಯಾಗಿದ್ದಾರೆ.

'ಪ್ರಶಸ್ತಿ ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿದೆ. ಡಿ.21ರಂದು ಬೆಳಿಗ್ಗೆ 11ಕ್ಕೆ ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ' ಎಂದು ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ ಗೌಡ ತಿಳಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕಿನ ಅನುವನಹಳ್ಳಿಯ ರಾಜಪ್ಪ ದಳವಾಯಿ ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.



ರಾಜಪ್ಪ



ಜವರಾಯಿಗೌಡ

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕು ಗೂಡೆಹೊಸಳ್ಳಿಯವರಾದ ಜವರಾಯಿಗೌಡ, ಬ್ಯಾಂಕ್ ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದು 8 ಎಕರೆ ಜಮೀನಿನಲ್ಲಿ ಫುಕುವೋಕಾ ಮಾದರಿ ಕೃಷಿಯಲ್ಲಿ ತೊಡಗಿದ್ದು, ರೇಷ್ಮೆ ಕೃಷಿಯಲ್ಲೂ ಪರಿಣತಿ ಹೊಂದಿದ್ದಾರೆ.

'ನಿತ್ಯ ದುಡಿ, ಸತ್ಯ ನುಡಿ, ಸ್ವಲ್ಪ ಕುಡಿ, ಮನೆಗೆ ನಡಿ' ಘೋಷವಾಕ್ಯದಡಿ ಧರಣಿ

'ಕುಡುಕರಲ್ಲ, ನಾವು ಮದ್ಯಪ್ರಿಯರು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಸರ್ಕಾರದ ಮೇಲೆ ಒತ್ತಡ ಹೇರುವ ಹಕ್ಕು ನಮಗೂ ಇದೆ' ಎಂದು ಕರ್ನಾಟಕ ಮದ್ಯಪಾನ ಪ್ರಿಯರ ಹೋರಾಟ ಸಂಘದ ಸದಸ್ಯರು ಗುರುವಾರ ಸುವರ್ಣ ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಿದರು.

'ಮದ್ಯ ಕುಡಿದು ನಾವು ಸರ್ಕಾರಕ್ಕೆ ಎಷ್ಟೊಂದು ಆದಾಯ ಕೊಡುತ್ತೇವೆ. ನಮಗಾಗಿ ಸರ್ಕಾರವೂ ಒಂದಿಷ್ಟು ಯೋಜನೆ ರೂಪಿಸಬೇಕಲ್ಲವೇ' ಎಂದು ಸಂಘದ ಪ್ರಮುಖರು ಪ್ರಶ್ನಿಸಿದರು.

ಮನವಿ ಸ್ವೀಕರಿಸಲು ಬಂದ ಸಚಿವ ಸಂತೋಷ್ ಲಾಡ್ ಅವರ ಎದುರು ಅಳಲು ತೋಡಿಕೊಂಡ ಅವರು, 'ಕುಡುಕ' ಎಂಬ ಪದಬಳಕೆಯನ್ನು ಸರ್ಕಾರ ನಿಷೇಧಿಸಬೇಕು. ನಮ್ಮನ್ನು ಮದ್ಯಪ್ರಿಯರು ಎಂದು ಕರೆದರೆ ತಪ್ಪೇನಿಲ್ಲ' ಎಂದರು.

'ನಿತ್ಯ ದುಡಿ. ಸತ್ಯ ನುಡಿ. ಸ್ವಲ್ಪ ಕುಡಿ. ಮನೆಗೆ ನಡಿ' ಎಂಬ ಘೋಷವಾಕ್ಯದಂತೆ ನಾವು ಬಾಳ್ವೆ ನಡೆಸಿದ್ದೇವೆ. ಒಂದು ಸಾವಿರ ರೂಪಾಯಿ ದುಡಿದರೆ, ₹ 100 ಮದ್ಯಕ್ಕೆ ಖರ್ಚು ಮಾಡ್ತೀವಿ. ಉಳಿದ ₹ 900 ಕುಟುಂಬಕ್ಕೆ ಕೊಡ್ತೀವಿ' ಎಂದು ಸಮರ್ಥಿಸಿಕೊಂಡರು.



ಬೆಳಗಾವಿಯ ಸುವರ್ಣಸೌಧದ ಬಳಿ ಗುರುವಾರ ಪ್ರತಿಭಟಿಸಿದ ಕರ್ನಾಟಕ ಮದ್ಯಪಾನ ಪ್ರಿಯರ ಹೋರಾಟ ಸಂಘದ ಪದಾಧಿಕಾರಿಗಳ ಬೇಡಿಕೆಗಳನ್ನು ಆಲಿಸಿ ಸಚಿವ ಸಂತೋಷ ಲಾಡ್ ನಗೆಬೀರಿದರು

'ಒಂದೆಡೆ ಮದ್ಯ ಮಾರಾಟಕ್ಕೆ ಮಳಿಗೆಗಳಿಗೆ ಸರ್ಕಾರ ಪರವಾನಗಿ ನೀಡುತ್ತದೆ. ಮತ್ತೊಂದೆಡೆ, ಮದ್ಯ ಸೇವಿಸಿ ವಾಹನ ಚಲಾಯಿಸುವವರಿಗೆ ದಂಡ ವಿಧಿಸುವುದು ಎಷ್ಟು ಸರಿ?' ಎಂದು ಅವರು ವಾದಿಸಿದರು. 'ಈಗ ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಬೆಳೆದಿದೆ. ಮದ್ಯ ಸೇವಿಸಿದವರು ವಾಹನವೇರಿದರೆ, ಸ್ಟಾರ್ಟ್ ಆಗದಂತೆ ಸೆನ್ಸರ್‌ಅ ಳವಡಿಸಿ' ಎಂದು ಸಲಹೆಯನ್ನೂ ಕೊಟ್ಟರು.

ಪ್ರತಿಯೊಂದು ಬೇಡಿಕೆಗಳನ್ನು ಆಲಿಸಿದ ಸಚಿವರು ಕೆಲ ಕ್ಷಣ ತಬ್ಬಿಬ್ಬಾದರು. ನಂತರ ನಗೆ ಬೀರುತ್ತ, 'ನಿಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವೆ' ಎಂದು ಭರವಸೆ ನೀಡಿದರು.

ಸಂಘದ ಅಧ್ಯಕ್ಷ ವೆಂಕಟೇಶಗೌಡ ಬೋರೆಹಳ್ಳಿ, ಪ್ರಧಾನ ಕಾರ್ಯದರ್ಶಿ ರಾಮಸ್ವಾಮಿ ಇತರರಿದ್ದರು.

ಬೇಡಿಕೆಗಳು

- 'ಮದ್ಯಪ್ರಿಯರ ಕಲ್ಯಾಣ ನಿಧಿ ಸ್ಥಾಪಿಸಿ, ಮದ್ಯ ಮಾರಾಟದ ಆದಾಯದ ಶೇ 10ರಷ್ಟನ್ನು ಆ ನಿಧಿಗೆ ಮೀಸಲಿಡಿ.
- ಲಿವರ್ ಸಮಸ್ಯೆಯಿಂದ ಬಳಲುವವರ ಚಿಕಿತ್ಸಾವೆಚ್ಚವನ್ನು ಸರ್ಕಾರವೇ ಭರಿಸಬೇಕು.
- ರಕ್ಷಣೆ ಮತ್ತು ಸುರಕ್ಷಿತ ಪ್ರಯಾಣಕ್ಕೆ ಬಾರ್‌ಗಳ ಬಳಿ ಆಂಬುಲೆನ್ಸ್ ವ್ಯವಸ್ಥೆ ಮಾಡಬೇಕು.
- ಮದ್ಯಪ್ರಿಯರ ನಿಗಮ–ಮಂಡಳಿ ಸ್ಥಾಪಿಸಿ, ಸಾಲ, ವಸತಿ ಸೌಕರ್ಯ ಒದಗಿಸಬೇಕು.
- ಮದ್ಯಪ್ರಿಯರ ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು ಕೊಡಬೇಕು.
- ಮದ್ಯ ಸೇವಿಸಿ ಮೃತಪಟ್ಟ ವ್ಯಕ್ತಿಗೆ ₹ 10 ಲಕ್ಷ ಪರಿಹಾರ ಕೊಡಬೇಕು

ರಾಜ್ಯದಲ್ಲಿ ಎಂಟು ಇಎಸ್‌ಐ ಆಸ್ಪತ್ರೆಗೆ ತಾತ್ವಿಕ ಒಪ್ಪಿಗೆ

ನವದೆಹಲಿ: ಕರ್ನಾಟಕದ ಎಂಟು ಕಡೆಗಳಲ್ಲಿ ಇಎಸ್‌ಐ ಆಸ್ಪತ್ರೆಗಳನ್ನು ಆರಂಭಿಸಲು ಉದ್ಯೋಗಿಗಳ ರಾಜ್ಯ ವಿಮಾ ನಿಗಮ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಖಾತೆಯ ರಾಜ್ಯ ಸಚಿವ ರಾಮೇಶ್ವರ ತೇಲಿ ತಿಳಿಸಿದರು. ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಗುರುವಾರ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೆಂಗಳೂರಿನ ಬೊಮ್ಮಸಂದ್ರದಲ್ಲಿ 200 ಬೆಡ್, ದೊಡ್ಡಬಳ್ಳಾಪುರ, ಶಿವಮೊಗ್ಗ, ನರಸಾಪುರ, ಹಾರೋಹಳ್ಳಿ, ಬಳ್ಳಾರಿ, ತುಮಕೂರು ಹಾಗೂ ಉಡುಪಿಯಲ್ಲಿ ತಲಾ 100 ಬೆಡ್ ಸಾಮರ್ಥ್ಯದ ಆಸ್ಪತ್ರೆಗಳ ನಿರ್ಮಾಣಕ್ಕೆ ಒಪ್ಪಿಗೆ ಸಿಕ್ಕಿದೆ ಎಂದು ತಿಳಿಸಿದರು.

ಗಂಜಲದ ಗುಂಡಿಗೆ ಬಿದ್ದು ತಂದೆ–ಮಗ ಸಾವು

ಹಿರಿಯೂರು: ಸಗಣಿ ಗಂಜಲದ ಗುಂಡಿಗೆ ಬಿದ್ದು ತಂದೆ–ಮಗ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಗೌಡನಹಳ್ಳಿಯಲ್ಲಿ ಗುರುವಾರ ನಡೆದಿದೆ. ಮಹಲಿಂಗಪ್ಪ (45),ಅವರ ಮಗ ಪೃಥ್ವಿರಾಜ್ (22) ಮೃತಪಟ್ಟವರು. 7 ಅಡಿ ಆಳದ ಸಂಪ್‌ನಲ್ಲಿದ್ದ ಗಂಜಲವನ್ನು ಬಕೆಟ್‌ನಿಂದ ಟ್ರಾಕ್ಟರ್‌ನ ಟ್ಯಾಂಕ್‌ಗೆ ತುಂಬಿಸಿ ಅಡಿಕೆ ತೋಟಕ್ಕೆ ಕೊಂಡೊಯ್ಯುವ ವೇಳೆ ಮಹಲಿಂಗಪ್ಪ ಕಾಲು ಜಾರಿ ಗುಂಡಿಯಲ್ಲಿ ಬಿದ್ದಿದ್ದಾರೆ. ರಕ್ಷಿಸಲು ಬಂದ ಮಗನನ್ನು ಅವರು ಬಿಗಿಯಾಗಿ ಅಪ್ಪಿ ಹಿಡಿದಿದ್ದರಿಂದ ಇಬ್ಬರೂ ಗುಂಡಿಯಲ್ಲಿ ಮುಳುಗಿ ಮೃತಪಟ್ಟರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಅಹಂ ಎಂಬುದು ಆಲದ ಮರದ ಬೇರಿದ್ದಂತೆ. ಅದನ್ನು ತೆಗೆದುಹಾಕಿದ್ದೇನೆ ಎಂದುಕೊಂಡಿರುತ್ತೀರಿ. ಆದರೆ, ಒಂದು ಮುಂಜಾನೆ ದಿಢೀರನೆ ಅದು ಮತ್ತೆ ಮೊಳೆತಿರುವುದನ್ನು ಕಾಣುತ್ತೀರಿ.

–ರಾಮಕೃಷ್ಣ ಪರಮಹಂಸ

ಸಂಸತ್ತಿನಲ್ಲಿ ಭದ್ರತಾ ಲೋಪ ಕಳವಳಕ್ಕೆ ಸ್ಪಂದಿಸುವ ಕೆಲಸ ಆಗಬೇಕು

ದೇಶದ ಸಂಸತ್ತು ಭಾರಿ ಪ್ರಮಾಣದ ಭದ್ರತಾ ವೈಫಲ್ಯಕ್ಕೆ ಬುಧವಾರ ಸಾಕ್ಷಿಯಾಯಿತು. ಇಬ್ಬರು ವ್ಯಕ್ತಿಗಳು ವೀಕ್ಷಕರ ಗ್ಯಾಲರಿಯಿಂದ ಲೋಕಸಭೆಯೊಳಕ್ಕೆ ಜಿಗಿದರು, ಅಲ್ಲಿ ಡಬ್ಬಿಯೊಂದರ ಬಾಯಿ ತೆರೆದು ಅನಿಲ ಹೊರಸೂಸುವ ಕಿಡಿಗೇಡಿತನದ ಕೃತ್ಯ ಎಸಗಿದರು. ಆ ಅನಿಲ ಯಾವುದು ಎಂಬುದು ಗೊತ್ತಾಗಿಲ್ಲ. ಇನ್ನಿಬ್ಬರು ವ್ಯಕ್ತಿಗಳು ಸಂಸತ್ತಿನ ಹೊರಗಡೆ ಪ್ರತಿಭಟನೆ ನಡೆಸಿದರು. ಲೋಕಸಭೆಯೊಳಕ್ಕೆ ಅಕ್ರಮವಾಗಿ ಪ್ರವೇಶಿಸಿದವರು, ಸಂಸತ್ ಭವನದ ಹೊರಗಡೆ ಪ್ರತಿಭಟನೆ ನಡೆಸಿದವರನ್ನು ಬಂಧಿಸಲಾಗಿದೆ, ಅವರ ಜೊತೆಗಾರನನ್ನು ವಶಕ್ಕೆ ಪಡೆಯಲಾಗಿದೆ. ಆದರೆ ಇಡೀ ಘಟನೆಯನ್ನು ಹಗುರವಾಗಿ ಪರಿಗಣಿಸಬಾರದು. ಲೋಕಸಭೆಯೊಳಕ್ಕೆ ಜಿಗಿದವರು ವಿಷಕಾರಿ ಅನಿಲವನ್ನು ಅಲ್ಲಿ ಪ್ರಯೋಗಿಸಿದ್ದಿದ್ದರೆ ಲೋಕಸಭಾ ಸದಸ್ಯರ ಜೀವಕ್ಕೆ ಕುತ್ತು ಬಂದಿರುತ್ತಿತ್ತು. ಅವರು ಲೋಕಸಭಾ ಸದಸ್ಯರಿಗೆ ಯಾವುದಾದರೂ ಬಗೆಯಲ್ಲಿ ಹಾನಿ ಉಂಟುಮಾಡುವ ಸಾಧ್ಯತೆಯೂ ಇತ್ತು. ಸಂಸತ್ ಭವನದಲ್ಲಿನ ಭದ್ರತಾ ವ್ಯವಸ್ಥೆಯು ತೃಪ್ತಿಕರವಾಗಿ ಇಲ್ಲ ಎಂಬುದನ್ನು ಈ ಪ್ರಸಂಗವು ಸ್ಪಷ್ಟಪಡಿಸಿದೆ. ಅನಗತ್ಯ ವಸ್ತುಗಳನ್ನು ತರುವವರನ್ನು ಒಳಗಡೆ ಬಿಡಲೇಬಾರದಿತ್ತು. ಸಂಸತ್ತಿಗೆ ಭೇಟಿ ನೀಡುವವರ ತಪಾಸಣೆ ನಡೆಸುವ ವ್ಯವಸ್ಥೆಯು ತೃಪ್ತಿಕರ ಮಟ್ಟದಲ್ಲಿ ಇಲ್ಲ ಎಂಬುದನ್ನು ಘಟನೆಯು ಸ್ಪಷ್ಟವಾಗಿ ಎತ್ತಿತೋರಿಸಿದೆ. ಹೊಸ ಸಂಸತ್ ಭವನದಲ್ಲಿನ ಭದ್ರತಾ ವ್ಯವಸ್ಥೆಯ ಬಗ್ಗೆ ದೂರುಗಳು ಇದ್ದವು. ಅವು ಹೊಸ ಕಟ್ಟಡದ ಉದ್ಘಾಟನೆ ಆದ ವಾರಗಳಲ್ಲೇ ಎಲ್ಲರ ಅರಿವಿಗೆ ಬಂದಿವೆ.



ಸಂದರ್ಶಕರಿಗೆ ಪಾಸ್ ನೀಡುವುದು ಸೇರಿದಂತೆ ಸಂಸತ್ತಿನ ಭದ್ರತೆಗೆ ಸಂಬಂಧಿಸಿದ ಎಲ್ಲ ಆಯಾಮಗಳ ಬಗ್ಗೆಯೂ ಪರಿಶೀಲನೆ ಆಗಬೇಕಿದೆ

2001ರ ಡಿಸೆಂಬರ್ 13ರಂದು ದೇಶದ ಸಂಸತ್ ಭವನದ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಈ ದಾಳಿಯಲ್ಲಿ ಹುತಾತ್ಮರಾದವರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಗೌರವ ಸಲ್ಲಿಸಿದ ಕೆಲವೇ ಗಂಟೆಗಳ ನಂತರದಲ್ಲಿ ಈ ಘಟನೆ ಲೋಕಸಭೆಯಲ್ಲಿ ಹಾಗೂ ಸಂಸತ್ ಭವನದ ಹೊರಗಡೆ ನಡೆದಿದೆ. ಸಂಸತ್ತಿನ ಮೇಲೆ ದಾಳಿ ನಡೆಸಲಾಗುವುದು ಎಂದು ಅಮೆರಿಕದಲ್ಲಿ ಇರುವ ಖಾಲಿಸ್ತಾನಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಎಚ್ಚರಿಕೆ ನೀಡಿದ್ದ ಎಂಬುದು ಇಲ್ಲಿ ಗಮನಾರ್ಹ. ಸಂಸತ್ ಭವನದಲ್ಲಿ ಹಾಗೂ ಅದರ ಸುತ್ತ ಭದ್ರತಾ ಸಿಬ್ಬಂದಿಯು ರೂಪಿಸಿದ್ದ ಭದ್ರತಾ ವ್ಯವಸ್ಥೆಯನ್ನು ಈ ದುಷ್ಕರ್ಮಿಗಳು ಭೇದಿಸಿದ್ದಾರೆ ಎಂಬ ಸಂಗತಿಯು ಸಂಸತ್ತಿನ ಭದ್ರತೆಯ ಹೊಣೆ ಹೊತ್ತಿರುವ ಪೊಲೀಸರು, ಭದ್ರತೆ ಹಾಗೂ ಗುಪ್ತದಳ ಸಿಬ್ಬಂದಿಯಿಂದ ತಪ್ಪಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದಂತಿದೆ. 2001ರಲ್ಲಿ ನಡೆದ ದಾಳಿಯ ನಂತರ ರೂಪುತಳೆದ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಯು ದುರ್ಬಲವಾಗಿದೆ ಎಂಬುದನ್ನು ಇದು ಬಹಿರಂಗಪಡಿಸಿದೆ. ಸಂಸತ್ತಿನ ಕಲಾಪಗಳ ವರದಿಗಾರಿಕೆಗೆ ತೆರಳುವ ಪತ್ರಕರ್ತರ ಮೇಲೆ ಕೇಂದ್ರ ಸರ್ಕಾರವು ಅನಗತ್ಯವಾಗಿ ತೀವ್ರ ನಿರ್ಬಂಧಗಳನ್ನು ವಿಧಿಸಿದೆ. ಆದರೆ, ಭದ್ರತಾ ವ್ಯವಸ್ಥೆಯಲ್ಲಿನ ನಿಜವಾದ ಹುಳುಕುಗಳನ್ನು ಹಾಗೆಯೇ ಬಿಡಲಾಗಿದೆ. ಸಂದರ್ಶಕರಿಗೆ ಪಾಸ್ ನೀಡುವುದು ಸೇರಿದಂತೆ ಸಂಸತ್ತಿನ ಭದ್ರತೆಗೆ ಸಂಬಂಧಿಸಿದ ಎಲ್ಲ ಆಯಾಮಗಳ ಬಗ್ಗೆಯೂ ಪರಿಶೀಲನೆ ಆಗಬೇಕಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ಸಂಸ್ಥೆಯಾಗಿರುವ ಸಂಸತ್ತಿನ ಕಟ್ಟಡದಲ್ಲಿ ಭದ್ರತೆಯು ಇಷ್ಟೊಂದು ದುರ್ಬಲವಾಗಿದೆ ಎನ್ನುವುದು ಶೋಭೆ ತರುವ ಸಂಗತಿ ಅಲ್ಲವೇ ಅಲ್ಲ. ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು ತಮ್ಮ ಸಂಸತ್ ಪೋರ್ಟಲ್‌ನ ಲಾಗಿನ್ ವಿವರಗಳನ್ನು ಹೊರಗಿನವರ ಜೊತೆ ಹಂಚಿಕೊಂಡಿದ್ದು ಭದ್ರತೆಗೆ ಧಕ್ಕೆ ತರುವಂಥದ್ದು ಎಂದು ಹೇಳಲಾಗಿದೆ. ಆದರೆ, ಈಗ ಪಾಸ್ ನೀಡುವುದಕ್ಕೆ ಸಂಬಂಧಿಸಿದ ಸಂಗತಿಯು ಭದ್ರತೆಗೆ ನಿಜವಾಗಿಯೂ ಧಕ್ಕೆ ತಂದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಬಂಧಿಸಿರುವ ವ್ಯಕ್ತಿಗಳು ಯಾವುದೇ ಭಯೋತ್ಪಾದಕ ಸಂಘಟನೆಯ ಜೊತೆ ನಂಟು ಹೊಂದಿರುವುದು ಇದುವರೆಗೆ ಗೊತ್ತಾಗಿಲ್ಲ. ಆದರೆ ಭಯೋತ್ಪಾದಕರು ಕೂಡ ಇದೇ ಬಗೆಯಲ್ಲಿ ಒಳಗೆ ನುಸುಳಬಹುದು, ಅದರ ಪರಿಣಾಮಗಳು ತೀರಾ ಕೆಟ್ಟದ್ದಾಗಿರಬಹುದು. ಭದ್ರತೆಗೆ ಸಂಬಂಧಿಸಿದ ಕಳವಳಗಳಿಗೆ ಸ್ಪಂದಿಸುವ ಕೆಲಸ ಆಗಬೇಕು. ದುಷ್ಕೃತ್ಯ ನಡೆಸಿದವರು ನಿರುದ್ಯೋಗ, ಸರ್ಕಾರದ ಕಡೆಯಿಂದ ಸ್ಪಂದನ ಇಲ್ಲದಿರುವಿಕೆ, ತಮ್ಮ ಸಾಂವಿಧಾನಿಕ ಹಕ್ಕುಗಳ ನಿರಾಕರಣೆ ಬಗ್ಗೆ ದೂರು ಹೊಂದಿದ್ದರು ಎಂದು ಹೇಳಲಾಗಿದೆ. ಆದರೆ ಅವರು ಅದನ್ನು ವ್ಯಕ್ತಪಡಿಸಲು ಬಹಳ ಕೆಟ್ಟ ಮಾರ್ಗವೊಂದನ್ನು ಅನುಸರಿಸಿದರು. ಹೀಗಿದ್ದರೂ ಈ ಕಳವಳಗಳನ್ನು ಇತರ ಅನೇಕರು ಅವರಂತೆಯೇ ಹೊಂದಿರಬಹುದು.

ದಿನದ ಟ್ವೀಟ್

ಗುಟ್ಟಿನ ಸಂಗತಿಯಲ್ಲ



ಮಾನಸಿಕ ಆರೋಗ್ಯವು ಆರೋಗ್ಯ ಕಾಯ್ದುಕೊಳ್ಳುವಿಕೆಯ ಒಂದು ಭಾಗ. ಆದರೂ ಕಳಂಕದ ಭೀತಿ ಮತ್ತು ಅರಿವಿನ ಕೊರತೆಯಿಂದ ಬಹುತೇಕ ಬಾರಿ ಅದನ್ನು ಖಾಸಗಿ ವಿಚಾರ ಅಥವಾ ನಾಚಿಕೆಗೇಡಿನ ಸಂಗತಿ ಎಂಬಂತೆಯೇ ನೋಡಲಾಗುತ್ತದೆ. ಮಾನಸಿಕ ಆರೋಗ್ಯವು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದ್ದು, ಅದನ್ನು ಹಾಗೇ ನೋಡಬೇಕಾದ ಅಗತ್ಯವಿದೆ. ಮುಕ್ತವಾದ ಮನಸ್ಸಿನಿಂದ ನೋಡಬೇಕೇ ವಿನಾ ಕಳಂಕದ ಕತ್ತಲಲ್ಲಿ ಅಡಗಿಸಿಡುವ ರೀತಿಯಲ್ಲಿ ಅಲ್ಲ.

ಶುಭ್ರತಾ ಪ್ರಕಾಶ್, ಐಆರ್‌ಎಸ್ ಅಧಿಕಾರಿ, ಲೇಖಕಿ

ಕಿಡಿನುಡಿ



ಭದ್ರತೆಗೆ ಸಂಬಂಧಿಸಿದ ಸದನ ಸಮಿತಿಯನ್ನು ಪುನರ್‌ರಚಿಸಿಲ್ಲ! ಜಂಟಿ ಕಾರ್ಯದರ್ಶಿ, ಭದ್ರತಾ ವಿಭಾಗದ ಮುಖ್ಯಸ್ಥರ ನೇಮಕವಾಗಿಲ್ಲ. ಪ್ರವೇಶಕ್ಕೆ ಶಿಫಾರಸು ನೀಡಿದ ಬಿಜೆಪಿ ಸಂಸದರನ್ನು ಪ್ರಶ್ನಿಸಿಲ್ಲ. ಆದರೆ, ಪ್ರಧಾನಿ ಮತ್ತು ಗೃಹ ಸಚಿವರಿಂದ ಉತ್ತರ ಬಯಸಿದ ವಿರೋಧ ಪಕ್ಷಗಳ 14 ಸಂಸದರನ್ನು ಅಮಾನತು ಮಾಡಲಾಗಿದೆ! ಪ್ರಜಾಪ್ರಭುತ್ವದ ಕಗ್ಗೊಲೆ.

ಸೀತಾರಾಂ ಯಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 15-12-1998

- **ಮಹಿಳಾ ಮೀಸಲಾತಿ ಮಸೂದೆ ಮಂಡನೆ**

ನವದೆಹಲಿ, ಡಿ. 14– ನಿರೀಕ್ಷೆಯಂತೆ ಬೆಳಗಿನಿಂದಲೇ ಕಲಾಪಕ್ಕೆ ಅಡ್ಡಿ. ಎರಡು ಬಾರಿ ಅಧಿವೇಶನ ಮುಂದೂಡಿಕೆ. ಕೊನೆಗೂ ಬಿಜೆಪಿ ನೇತೃತ್ವದ ಸರ್ಕಾರವು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು ಸ್ಥಾನ ಕಲ್ಪಿಸುವ ಸಂವಿಧಾನದ 84ನೇ ತಿದ್ದುಪಡಿ ಮಸೂದೆಯನ್ನು ರಾಷ್ಟ್ರೀಯ ಲೋಕತಾಂತ್ರಿಕ ಮೋರ್ಚಾ ಮತ್ತು ಇತರ ಕೆಲವು ಹಿಂದುಳಿದ ವರ್ಗಗಳ ಸದಸ್ಯರ ತೀವ್ರ ಪ್ರತಿಭಟನೆ ನಡುವೆ ಮಂಡಿಸಿತು.

ಲೋಕಸಭೆಯು ಎರಡು ಬಾರಿ ಸದನದ ಮುಂದೂಡಿಕೆಯ ನಂತರ ಮೂರನೇ ಬಾರಿಗೆ ಸೇರಿದಾಗ, ಸಭಾಧ್ಯಕ್ಷ ಗಂಟಿ ಮೋಹನ್ ಚಂದ್ರ ಬಾಲಯೋಗಿ ಕಳೆದ ಶುಕ್ರವಾರ ಸದನದಲ್ಲಿ ನಡೆದ ಅಹಿತಕರ ಘಟನೆಯನ್ನು ತೀವ್ರವಾಗಿ ಖಂಡಿಸಿದರು. ಅಂದಿನ ಘಟನೆಯ ಬಗೆಗೆ ಬಂದಿರುವ ದೂರುಗಳನ್ನು ಸದನದ ಹಕ್ಕುಚ್ಯುತಿಗೆ ಕಳುಹಿಸಿರುವುದಾಗಿ ಪ್ರಕಟಿಸಿದ ಮೇಲೆ, ಕಲಾಪವನ್ನು ಕೈಗೆತ್ತಿಕೊಂಡರು.

- **ಆಲಮಟ್ಟಿ: ಗೇಟ್‌ಗೆ ಅಸ್ತು ಎತ್ತರಕ್ಕೆ ತಡೆ**

ನವದೆಹಲಿ, ಡಿ. 14 (ಪಿಟಿಐ)– ಆಲಮಟ್ಟಿ ಅಣೆಕಟ್ಟಿನ 26 ಕ್ರೆಸ್ಟ್ ಗೇಟ್‌ಗಳ ನಿರ್ಮಾಣ ಮಾಡಲು ಕರ್ನಾಟಕ ರಾಜ್ಯಕ್ಕೆ ಇಂದು ಅನುಮತಿ ನೀಡಿದ ಸುಪ್ರೀಂ ಕೋರ್ಟ್, ಅಣೆಕಟ್ಟೆಯ ಎತ್ತರವನ್ನು ಸದ್ಯದ 509 ಮೀಟರ್‌ಗಿಂತ ಹೆಚ್ಚಿಸಬಾರದು ಎಂದು ನಿರ್ದೇಶನ ನೀಡಿದೆ.

ಆದರೆ ಕರ್ನಾಟಕವು ಈ ಕಾಮಗಾರಿಯನ್ನು 'ಮುಂದೆ ಬರಬಹುದಾದ ಸನ್ನಿವೇಶವನ್ನು ತಾನೇ ಎದುರಿಸುವ ಹೊಣೆಗಾರಿಕೆ ಹಾಗೂ ವೆಚ್ಚದಿಂದ' ನಿರ್ವಹಿಸಬಹುದು ಎಂದು ಎಚ್ಚರಿಕೆಯನ್ನೂ ನೀಡಿದೆ.

50 ವರ್ಷಗಳ ಹಿಂದೆ

ಶನಿವಾರ, 15-12-1973

- **ಸಂಪುಟಕ್ಕೆ ರಂಗನಾಥ್ ಸೇರ್ಪಡೆ ಚಿಕ್ಕೇಗೌಡರಿಗೆ ಬಡ್ತಿ**

ಬೆಂಗಳೂರು, ಡಿ. 14 – ಸಚಿವರಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ರಂಗನಾಥ್, ನಿರೀಕ್ಷಿಸಿದ್ದಂತೆ ನಾಲ್ಕು ಮಂದಿ ಸಚಿವರ ನಿರ್ಗಮನ ಹಾಗೂ ರಾಜ್ಯ ಸಚಿವ ಎಚ್.ಎನ್.ನಂಜೇಗೌಡ ಅವರ ರಾಜೀನಾಮೆಯ ಅನಿರೀಕ್ಷಿತ ಒಪ್ಪಿಗೆಯೊಡನೆ ಮುಖ್ಯಮಂತ್ರಿ ದೇವರಾಜ ಅರಸು ಅವರು ತಮ್ಮ ಮಂತ್ರಿಮಂಡಲದ ಮೊದಲ ಹಂತದ ಪುನರ್‌ರಚನೆಯನ್ನು ಕೈಗೊಂಡಿದ್ದಾರೆ.

ರಾಜ್ಯ ಸಚಿವರಾಗಿರುವ ಎನ್.ಚಿಕ್ಕೇಗೌಡ ಅವರಿಗೆ ಸಚಿವ ಸಂಪುಟದ ಸಚಿವರಾಗಿ ಬಡ್ತಿ ದೊರಕಿರುವುದೇ ಅಲ್ಲದೆ, ರಾಜ್ಯ ಸಚಿವರಾಗಿ ಆರ್.ಡಿ.ಕಿತ್ತೂರು ಅವರು ವಾಪಸು ಬಂದಿದ್ದಾರೆ.

ಮುಖ್ಯಮಂತ್ರಿ ಅರಸು ಅವರು ಸಂಜೆ 6.15ರ ನಂತರ ರಾಜ್ಯಪಾಲ ಸುಖಾಡಿಯಾ ಅವರನ್ನು ಭೇಟಿ ಮಾಡಿ ಅವರ ಒಪ್ಪಿಗೆಯನ್ನು ಪಡೆದ ಪುನರ್‌ರಚಿತ ಪಟ್ಟಿಯನ್ನು ಸಂಜೆ 7.30ರ ಸಮಯದಲ್ಲಿ ಅವರ ಅಧಿಕೃತ ನಿವಾಸದಲ್ಲಿ ಕಾದಿದ್ದ ವರದಿಗಾರರಿಗೆ ತಿಳಿಸಿದರು.

ಮುಖ್ಯಮಂತ್ರಿಗಳ ಶಿಫಾರಸಿನ ಮೇಲೆ ರಾಜ್ಯಪಾಲರು, ಕೆಳಕಂಡ ಪ್ರಮುಖ ಸಚಿವರಾಗಿದ್ದ ಬದರೀನಾರಾಯಣ್, ಅಜೀಜ್ ಸೇಠ್, ಶಂಕರ ಆಳ್ವ, ಬಿ.ಬಸವಲಿಂಗಪ್ಪ ಅವರ ರಾಜೀನಾಮೆ ಅಂಗೀಕರಿಸಿದ್ದಾರೆ.

ನಮ್ಮ ಜ್ಯೋತಿಷಿಗಳು ಹಾಗೂ ಚುನಾವಣಾ ತಜ್ಞರ ವಿಶ್ವಾಸಾರ್ಹತೆಯು ಈಗ ಒಂದೇ ಮಟ್ಟದಲ್ಲಿ ಇದೆ

ಅರಿತವರು ಯಾರು ಮತದಾರನ ಮನವ?



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಭಾರತದ ಚುನಾವಣೆಗಳು ಹಾಗೂ ವೃದ್ಧಿಯಾಗುತ್ತಿರುವ ಚುನಾವಣಾ ತಜ್ಞರ ಸಂಖ್ಯೆಯು ಭಾರತದ ಜ್ಯೋತಿಷಿಗಳನ್ನು ನೆನಪಿಸುತ್ತದೆ. ಚುನಾವಣಾ ತಜ್ಞರ ಪೈಕಿ ಹೆಚ್ಚಿನವರು ಮಾಡುವುದು ಭವಿಷ್ಯ ಹೇಳುವ ಕೆಲಸವನ್ನೇ. ಭಾರತದ ಜ್ಯೋತಿಷಿಗಳ ಚಿತ್ರಣವನ್ನು ಮಾಂತ್ರಿಕ ಬರಹಗಾರ ಆರ್.ಕೆ. ನಾರಾಯಣ್ ಅವರು 'ಆ್ಯನ್ ಅಸ್ಟ್ರಾಲಜರ್ಸ್ ಡೇ' (An astrologer's day) ಕಥೆಯಲ್ಲಿ ಸುಂದರವಾಗಿ ನೀಡಿದ್ದಾರೆ. ಠಕ್ಕನೊಬ್ಬ ಜ್ಯೋತಿಷಿಯಾಗಿದ್ದು ಹೇಗೆ ಎಂಬುದನ್ನು ವಿವರಿಸುತ್ತಾರೆ.


ರಾಜಸ್ಥಾನ, ಛತ್ತೀಸಗಢ, ಮಧ್ಯಪ್ರದೇಶ, ತೆಲಂಗಾಣ ಮತ್ತು ಮಿಜೋರಾಂ ವಿಧಾನಸಭೆಗಳಿಗೆ ಚುನಾವಣೆ ಪೂರ್ಣಗೊಂಡಿದೆ. ಇಲ್ಲಿ ಒಂದು ಸಂಗತಿ ಸ್ಪಷ್ಟವಾಗಿದೆ. ರಾಜಕಾರಣಿಗಳ ಭವಿಷ್ಯವನ್ನು ಹೇಳುವ, ಚುನಾವಣೆಗಳನ್ನು ಗೆಲ್ಲಬೇಕು ಎಂದಾದರೆ ಯಾವ ದೇವರಿಗೆ ಇಷ್ಟವಾಗುವಂತೆ ನಡೆದುಕೊಳ್ಳಬೇಕು ಎಂದು ಹೇಳುವ ನಮ್ಮ ಜ್ಯೋತಿಷಿಗಳು ಎಷ್ಟರಮಟ್ಟಿಗೆ ವಿಶ್ವಾಸಾರ್ಹರೋ, ನಮ್ಮ ಚುನಾವಣಾ ತಜ್ಞರು ಕೂಡ ಅಷ್ಟೇ ವಿಶ್ವಾಸಾರ್ಹರು. ನಾರಾಯಣ್ ಅವರ ಕಥೆಯಲ್ಲಿನ ಜ್ಯೋತಿಷಿಯಂತೆಯೇ, ಈ ತಜ್ಞರು ಕೂಡ ಚುನಾವಣೆಯ ಫಲಿತಾಂಶ ಯಾವ ರೀತಿ ಇರುತ್ತದೆ ಎಂಬುದನ್ನು ಊಹಿಸುವಲ್ಲಿ ಯಾವ ಸುಳಿವನ್ನೂ ಹೊಂದಿರುವುದಿಲ್ಲ. ಅಥವಾ ಯಾವುದೇ ರಾಜಕಾರಣಿಯ ಭವಿಷ್ಯ ಏನಾಗುತ್ತದೆ ಎಂಬುದನ್ನು ಹೇಳುವ ವಿಚಾರದಲ್ಲಿಯೂ ಅವರಿಗೆ ಯಾವುದೇ ಸುಳಿವು ಇರುವುದಿಲ್ಲ. ಈ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರದಲ್ಲಿ ಈ ತಜ್ಞರು, ತಾವು ಮೂರ್ಖರಾದೆವು ಅಂದುಕೊಂಡಿರಬಹುದು.

ಆದರೆ, ಊಹೆಯನ್ನು ಆಧರಿಸಿ ಕೆಲವು ತಜ್ಞರು ಮಾಡಿದ ಲೆಕ್ಕಾಚಾರ ಸರಿಯಾಗಿದ್ದರಿಂದ ಅವರು ಮಾತ್ರ ಜಯ ಗಳಿಸಿದೆವು ಎಂದು ವಿಜೃಂಭಿಸಿರಬಹುದು. ದತ್ತಾಂಶ ಮತ್ತು ಜಾತಿ ಲೆಕ್ಕಾಚಾರ ಆಧರಿಸಿ ವಿಶ್ಲೇಷಣೆ ಹಾಗೂ ಉಚಿತ ಕೊಡುಗೆಗಳ ಪರಿಣಾಮವು ಮತದಾರರ ಮೇಲೆ ಯಾವ ರೀತಿಯಲ್ಲಿ ಇರಬಹುದು ಎಂಬುದನ್ನು ತಾವು ಸರಿಯಾಗಿ ಅಂದಾಜಿಸಿದ್ದೆವು ಅಂದುಕೊಂಡಿರಬಹುದು. ಚುನಾವಣಾ ರಾಜಕಾರಣಕ್ಕೆ ಧುಮುಕಿದ್ದ ಕೆಲವು ಚುನಾವಣಾ ತಜ್ಞರು, ತಮಗೆ ಸೋಲು ಎದುರಾದಾಗ ತಮ್ಮ ಲೆಕ್ಕಾಚಾರಗಳು ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಏನನ್ನೋ ಅರಸುವ ಆಟದಂತೆ ಇದ್ದವು ಎಂಬುದನ್ನು ಅರ್ಥ ಮಾಡಿಕೊಂಡಿರಬಹುದು. ಒಂದು ಕೈಯಲ್ಲಿ ಬಿಸಿಯಾದ ಕಬ್ಬಿಣದ ಕಂಬಿ ಹಾಗೂ ಇನ್ನೊಂದು ಕೈಯಲ್ಲಿ ಮಂಜುಗಡ್ಡೆಯನ್ನು ಹಿಡಿದರೆ ಸಂಖ್ಯಾಶಾಸ್ತ್ರಜ್ಞರು, ಅವುಗಳನ್ನು ಹಿಡಿದಿರುವ ವ್ಯಕ್ತಿಯ ದೇಹದ ಸರಾಸರಿ ಉಷ್ಣಾಂಶ ಸಹಜವಾಗಿಯೇ ಇದೆ ಎಂದು ಹೇಳಬಹುದು. ಆದರೆ, ಒಂದು ಕೈ ಸುಟ್ಟುಹೋಗಿರುತ್ತದೆ, ಇನ್ನೊಂದು ಕೈ ಹೆಪ್ಪುಗಟ್ಟಿರುತ್ತದೆ.

ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಮೋದಿ ಅಲೆಯು ಗೆಲುವು ತಂದುಕೊಡಲಿದೆ ಎಂದು ತಜ್ಞರು ಆರು ತಿಂಗಳ ಹಿಂದೆ ಅಂದಾಜು ಮಾಡಿದ್ದರು. ಅವರು ನರೇಂದ್ರ ಮೋದಿ ಹೆಸರು, ಮೋದಿ ಅವರಿಗೆ ಇರುವ ಒಳನೋಟಗಳು, ಮತಯಂತ್ರದ ಗುಂಡಿ ಒತ್ತುವ ಸಂದರ್ಭದಲ್ಲಿ ಹನುಮಂತನನ್ನು ನೆನಪಿಸಿಕೊಳ್ಳಿ ಎಂದು ಅವರು ಹೇಳಿದ್ದು ಹಾಗೂ ಅಮಿತ್ ಶಾ ಅವರ ಅದ್ಭುತ ಕಾರ್ಯತಂತ್ರವನ್ನು ನೆಚ್ಚಿಕೊಂಡಿದ್ದರು. ರಾಹುಲ್ ಗಾಂಧಿ ಅವರ ಬಗ್ಗೆ ಈ ತಜ್ಞರು ಹಾಸ್ಯ ಮಾಡಿದ್ದರು. ಹೀಗಿದ್ದರೂ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಭಾರಿ ಜಯ ಸಾಧಿಸಿತು. ಜನಸಾಮಾನ್ಯರ ಹೃದಯದಲ್ಲಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಲ್ಲರೂ ಸೋತಿದ್ದರು.

ಕರ್ನಾಟಕದಲ್ಲಿ ಬಿಜೆಪಿ ಆರು ತಿಂಗಳ ಹಿಂದೆ ಸೋಲು ಕಂಡಾಗ, ಎಡಪಂಥೀಯ ಒಲವುಳ್ಳ ಹಲವು ಬುದ್ಧಿಜೀವಿಗಳು 'ಮೋದಿ ಅವರ ಹೆಸರು ಆಕರ್ಷಣೆಯನ್ನು ಕಳೆದುಕೊಂಡಿದೆ' ಎಂದು ಪುಟಗಟ್ಟಲೆ ಬರೆದಿದ್ದರು. ಶೇಕಡ 70ರಷ್ಟು ರಾಜ್ಯಗಳು ಬಿಜೆಪಿ ಜೊತೆ ಇಲ್ಲ, ಭಾರತ್ ಜೋಡೊ ಯಾತ್ರೆಗೆ ಸಿಕ್ಕ ಯಶಸ್ಸಿನ ನಂತರದಲ್ಲಿ, ರಾಹುಲ್ ಗಾಂಧಿ ಅವರು ಪುಟಿದೆದ್ದು ಬಂದ ನಂತರದಲ್ಲಿ ಹಾಗೂ 'ಇಂಡಿಯಾ' ಮೈತ್ರಿಕೂಟದ ರಚನೆಯ ನಂತರದಲ್ಲಿ ಬಿಜೆಪಿಯ ಮುನ್ನಡೆಗೆ ವಿರುದ್ಧವಾಗಿ ರಾಜಕೀಯ ಅಲೆಗಳು ಏಳುತ್ತಿವೆ ಎಂದು ಅವರು ಹೇಳಿದ್ದರು. ಆದರೆ ಮೋದಿ ಅವರು ಅನಿರೀಕ್ಷಿತವಾದುದನ್ನು ತೋರಿಸಿಕೊಟ್ಟರು. ಐದು ರಾಜ್ಯಗಳ ಪೈಕಿ ಹಿಂದಿ ಭಾಷಿಕ ಮೂರು ರಾಜ್ಯಗಳಲ್ಲಿ ಹಿಂದಿನ ಬಾರಿಗಿಂತ ಹೆಚ್ಚು ದೊಡ್ಡದಾದ ಜಯ ಸಾಧಿಸಿದರು. ಎರಡು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಲಿದೆ, ಒಂದು ರಾಜ್ಯದಲ್ಲಿ ಕಾಂಗ್ರೆಸ್ ಗೆಲ್ಲುವ ಸಾಧ್ಯತೆ ಹೆಚ್ಚಿದೆ ಎಂದು ಬಹುತೇಕ ಮತದಾನೋತ್ತರ ಸಮೀಕ್ಷೆಗಳು ಹೇಳಿದ್ದವು. ಅಲ್ಲದೆ, ತೆಲಂಗಾಣದಲ್ಲಿ ಬಿಆರ್‌ಎಸ್ ಪಕ್ಷವು ಗೆಲ್ಲುವ ಕುದುರೆ ಎಂದಿದ್ದವು. ಅಲ್ಲಿ ಕಾಂಗ್ರೆಸ್ ಪಕ್ಷವು ಎರಡನೆಯ ಸ್ಥಾನಕ್ಕೆ ಬರಬಹುದು ಎಂದಿದ್ದವು.

2024ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರು ಗೆಲುವು ಸಾಧಿಸುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ಬಲಪಂಥದ ಕಡೆ ಒಲವು ಇರುವವರು ಹೇಳುತ್ತಿದ್ದಾರೆ. ಆದರೆ, 2018ರಲ್ಲಿ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಮತದಾರರು ಕಾಂಗ್ರೆಸ್ಸನ್ನು ಗೆಲ್ಲಿಸಿದ್ದರು. ಹೀಗಿದ್ದರೂ 2019ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಮತ್ತು ಬಿಜೆಪಿಗೆ ಮತ ಚಲಾಯಿಸಿದರು ಎಂಬುದನ್ನು ಅವರು ಮರೆಯುತ್ತಿದ್ದಾರೆ. ಮೋದಿ ಮತ್ತು ಶಾ ಅವರಿಗೆ ಸರಿಸಾಟಿಯಾಗುವ ಸಾಮರ್ಥ್ಯವು ರಾಹುಲ್ ಅವರಿಗೆ ಇಲ್ಲ, ಹಿಂದಿ ಭಾಷಿಕ ನಾಡಿನಲ್ಲಿ ಗೆಲುವು ಸಾಧಿಸಲು ಅವರಿಂದ ಆಗುವುದಿಲ್ಲ ಎಂದು ಈಗ ಕೆಲವರು ಹೇಳುತ್ತಿದ್ದಾರೆ. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಕಾಂಗ್ರೆಸ್ಸಿನ ಜೊತೆ ಇವೆಯಾದ ಕಾರಣ ಅವು ಭ್ರಮನಿರಸನಗೊಳ್ಳಲಿವೆ, ಈ ಪಕ್ಷಗಳು ಕೂಡ ಕುಸಿಯುತ್ತವೆ ಎಂದು ಕೆಲವರು ಈಗ ಹೇಳುತ್ತಿದ್ದಾರೆ. ಆದರೆ ರಾಹುಲ್ ಅವರ ನಾಯಕತ್ವವು ಇದೇ ಮೂರು ರಾಜ್ಯಗಳನ್ನು 2018ರಲ್ಲಿ ಗೆದ್ದುಕೊಂಡಿತ್ತು, ಮಹಾರಾಷ್ಟ್ರದಲ್ಲಿ ಅವರ ಪಕ್ಷವು ಒಳ್ಳೆಯ ಸಾಧನೆ ತೋರಿತ್ತು, ಹಿಮಾಚಲ ಪ್ರದೇಶದಲ್ಲಿ ಗೆಲುವು ಕಂಡಿತು. ಈಗ ಪಕ್ಷವು ತೆಲಂಗಾಣದಲ್ಲಿ ಬಿಆರ್‌ಎಸ್ ಪಕ್ಷವನ್ನು ಸೋಲಿಸಿದೆ. ಹೀಗಿರುವಾಗ ರಾಹುಲ್ ಇದ್ದಕ್ಕಿದ್ದಂತೆ ಅಸಮರ್ಥ ಹೇಗಾಗುತ್ತಾರೆ?



ಉದಾರವಾದಿ ನಿಲುವಿನ ಕೆಲವು ರಾಜಕೀಯ ವಿಶ್ಲೇಷಕರು ವಿಚಿತ್ರವಾದ ವಾದವೊಂದನ್ನು ಜನರ ಮುಂದಿರಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಈಚೆಗೆ ಸೋಲು ಕಂಡಿರುವ ಮೂರು ರಾಜ್ಯಗಳಲ್ಲಿ, ಆ ಪಕ್ಷದ ಮತಗಳಿಕೆ ಪ್ರಮಾಣದಲ್ಲಿ ಆಗಿರುವುದು ಬಹಳ ಸಣ್ಣ ಪ್ರಮಾಣದ ಇಳಿಕೆ; ಇದನ್ನು ಸಂಸತ್ತಿನ ಕ್ಷೇತ್ರಗಳಿಗೆ ಅನ್ವಯಿಸಿ ನೋಡುವುದಾದರೆ, ಕಾಂಗ್ರೆಸ್ ಪಕ್ಷವು ಲೋಕಸಭೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲಿದೆ ಎಂದು ಅವರು ಹೇಳುತ್ತಿದ್ದಾರೆ. ಜಟ್ಟಿ ನೆಲದ ಮೇಲೆ ಬಿದ್ದ ನಂತರವೂ ತನ್ನ ಮೀಸೆ ಮಣ್ಣಾಗಲಿಲ್ಲ ಎಂದು ಹೇಳಿದಂತೆ ಇದೆ ಇದು.

ಎರಡು ದಶಕಗಳ ಹಿಂದೆ ನಾನು ಹಾಸನದ ಗ್ರಾಮಾಂತರ ಪ್ರದೇಶದ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ. ನಾನು ಬಹಳ ಶಕ್ತಿಶಾಲಿಯಾದ ದೇವಿಯ ದೇವಸ್ಥಾನಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆಯಬೇಕು, ಕುರಿಯನ್ನು ಬಲಿ ಕೊಡಬೇಕು, ಆಗ ಗೆಲುವು ಖಚಿತ ಎಂದು ನನ್ನ ಪಕ್ಷದ ಸಹವರ್ತಿಗಳು ನನ್ನನ್ನು ನಂಬಿಸಿದ್ದರು. ಚುನಾವಣಾ ಪ್ರಚಾರ ಅಭಿಯಾನ ಆರಂಭಿಸುವ ಮೊದಲು ಇವೆಲ್ಲ ಆಗಿರಬೇಕು ಎಂದು ಹೇಳಿದ್ದರು.

ದೇವರನ್ನು ನಂಬುವ ವಿಚಾರದಲ್ಲಿ ಆಸ್ತಿಕನೂ ಅಲ್ಲದ, ನಾಸ್ತಿಕನೂ ಅಲ್ಲದ ನಾನು ದೇವರ ಆಶೀರ್ವಾದ ಪಡೆಯುವ ಯಾವುದೇ ಸಂದರ್ಭವನ್ನು ಬಿಟ್ಟುಕೊಡಲಿಲ್ಲ. ದೇವರಿಂದ ಸಿಗುತ್ತಿದ್ದ ಶಕುನ, ದೇವಮಾನವರು ಹಾಗೂ ಸ್ಥಳೀಯ ಸ್ವಯಂಘೋಷಿತ ಚುನಾವಣಾ ತಜ್ಞರಿಂದ ಸಿಗುತ್ತಿದ್ದ ಸಂದೇಶದ ಆಧಾರದಲ್ಲಿ ನನಗೆ ಗೆಲುವು ಖಚಿತ ಎಂದು ಭಾವಿಸಿದ್ದೆ. ನಾನು ಶಾಸಕನಾಗಿ ಕುಳಿತ ಕ್ಷಣಗಳು ಕನಸಿನಂತೆ ಮನಸ್ಸಿಗೆ ಬರುತ್ತಿದ್ದವು. ಆದರೆ ದಯನೀಯ ರೀತಿಯಲ್ಲಿ ನಾನು ಸೋಲು ಕಂಡೆ. ಕಾಂಗ್ರೆಸ್ ಹಾಗೂ ಜನತಾದಳದಿಂದ ನನ್ನ ಎದುರಾಳಿಗಳಾಗಿ ಕಣದಲ್ಲಿ ಇದ್ದವರು ಕೂಡ ಅದೇ ದೇವತೆಯಿಂದ ಆಶೀರ್ವಾದ ಬೇಡಿದ್ದರು ಎಂಬುದು ನಂತರ ಗೊತ್ತಾಯಿತು.

ಇಲ್ಲಿ ಒಂದು ವಿಚಾರ ಮಾತ್ರ ಸ್ಪಷ್ಟ. ದೇಶದ ಸಾಮಾನ್ಯ ಮತದಾರನ ಮನಸ್ಸನ್ನು ಭೇದಿಸುವುದು ನಮ್ಮಿಂದ ಆಗದ ಕೆಲಸ. ದೇವಮಾನವರು ಹಾಗೂ ಜ್ಯೋತಿಷಿಗಳು ಮೋಸ ಮಾಡುವುದನ್ನು ಮುಂದುವರಿಸುತ್ತಾರೆ. ಆದರೆ ಚುನಾವಣಾ ತಜ್ಞರು ತಮ್ಮ ಅಂಕಿ–ಅಂಶಗಳನ್ನು ಮಾತ್ರ ಜನರ ಮುಂದೆ ಇರಿಸಿ, ಭವಿಷ್ಯ ಏನಿರಬೇಕು ಎಂಬುದರ ತೀರ್ಮಾನವನ್ನು ಜನರಿಗೇ ಬಿಟ್ಟುಬಿಡಬೇಕು. ಜನರ ತೀರ್ಮಾನ ಆದ ನಂತರ ತಮ್ಮ ವಿಶ್ಲೇಷಣೆಯನ್ನು ಅವರು ಪ್ರಾಮಾಣಿಕವಾಗಿ ನಡೆಸಬೇಕು. ಸ್ಯಾಮ್ಯುಯೆಲ್ ಗೋಲ್ಡ್‌ವಿನ್ ಅವರು ಹೇಳಿರುವಂತೆ, 'ಭವಿಷ್ಯದ ಬಗ್ಗೆ ಅಂದಾಜು ಮಾಡುವ ಕೆಲಸ ಬೇಡ'.

ಚುರುಮುರಿ



ಕಲರ್ ಬಾಂಬ್!

• ಬಿ.ಎನ್. ಮಲ್ಲೇಶ್

ಕಮಲಕ್ಕ, ತೆನೆಯಕ್ಕ ಬಾಯಿಗೆ ಅಡಿಕೆ ಹಾಕ್ಕಂಡು ಎಲೆಗೆ ಸುಣ್ಣ ಹಚ್ತಾ ಕೂತಿದ್ದರು. ಅಲ್ಲಿಗೆ ಬಂದ ಕೈಯಪ್ಪ 'ಓ... ಇಬ್ರೂ ಏನೋ ಮಸಲತ್ ನಡೆಸಿದಂಗೈತಿ?' ಎಂದ.

'ಇಬ್ರಲ್ಲಿ ಯಾರ ಬಾಯಿ ಜಾಸ್ತಿ ಕೆಂಪಾಗ್ತತಿ ನೋಡ್ತಿದೀವಿ' ಎಂದಳು ಕಮಲಕ್ಕ.

'ಅಲ್ಲ, ಈಗ ತೆನೆಯಕ್ಕನ ಬಣ್ಣ ಕೇಸರಿ ಆಗ್ಬೇಕಿತ್ತು ಅಲ್ವ?' ಕೈಯಪ್ಪ ಕಾಲೆಳೆದ.

'ನನ್ ಬಣ್ಣ ಏನರೆ ಇರ್ಲಿ, ನಿಮ್ ಗ್ಯಾರಂಟಿ ಬಣ್ಣ ಕಿತ್ಕಂಡ್ ಹೋಗದಂಗೆ ನೋಡ್ಕಳಿ ಸಾಕು' ತೆನೆಯಕ್ಕ ತಿರುಗೇಟು ನೀಡಿದಳು.

'ಅಲ್ಲ, ನಿಮ್ ಪಕ್ಷದ ದೊಡ್ಡೆತ್ತು ಗೂಟ ಕಿತ್ಕಂಡ್ ಹೋತಂತೆ?'

'ಅದ್ನ ನಾವೇ ಹಗ್ಗ ಬಿಚ್ಚಿ ಓಡ್ಸಿದೀವಿ. ನಮಿಗೇನು ವರ್ಷಕ್ಕೊಂದು ಹೊಸ ಎತ್ತು ತರ್ತೀವಿ' ತೆನೆಯಕ್ಕ ಸಮರ್ಥಿಸಿಕೊಂಡಳು.

'ಪಾಪ, ಕಮಲಕ್ಕುಂದು ಹೇಳಂಗಿಲ್ಲ ಬಿಡು... ಮನಿಯೊಂದು ಆರು ಬಾಗಿಲು...' ಕೈಯಪ್ಪ ನಕ್ಕ.

ಕಮಲಕ್ಕಂಗೆ ಸಿಟ್ಟು ಬಂತು 'ನೋಡು, ನನ್ ತಂಟೆಗೆ ಬರ್ಬೇಡ, ನಿಮ್ಮನಿ ದೋಸೆಗೆ ಎಷ್ಟು ತೂತು ಅದ್ನ ನೋಡ್ಕಾ ಸಾಕು' ಎಂದಳು.

ಅಷ್ಟರಲ್ಲಿ ಎಲ್ಲಿಗೋ ಹೊಂಟಿದ್ದ ಪತ್ರಕರ್ತ ತೆಪರೇಸಿಯನ್ನು ಕಂಡು ತೆನೆಯಕ್ಕ ಕೂಗಿ ಕರೆದಳು, 'ಬ್ರದರ್, ಎಲ್ಲಿಗೆ ಹೊಂಟಿದಿ? ಏನ್ ಸುದ್ದಿ?'

'ಅಲ್ಲಿ ಡೆಲ್ಲೀಲಿ ಕಲರ್ ಬಾಂಬ್ ಹಾಕ್ಯಾರಂತೆ' ತೆಪರೇಸಿಗೆ ಗಾಬರಿ.

'ನಿನ್ತೆಲ್ಲಿ, ಇಲ್ಲೇ ನಮ್ಮೇಲೆ ನಮ್ಮೋರೇ ದಿನಕ್ಕೊಂದು ಕಲ್ ಕಲರ್ ಬಾಂಬ್ ಹಾಕ್ತದಾರೆ, ಕಾಣ್ಣಂಗಿಲ್ಲೇನು?' ಕಮಲಕ್ಕ ಕೇಳಿದಳು.

'ನಿಮ್ಮವು ಬರ್ದೂ ಬರ್ದೂ ಸಾಕಾಗೇತಿ, ಅದೇನು ಆಪ್ತಮಿತ್ರರ ತರ ಪರಮ ಶತ್ರುಗಳು ಒಟ್ಟಿಗೇ ಕುಂತೀರಿ?' ತೆಪರೇಸಿ ಕೇಳಿದ.

'ಯಾರ ಮನಿ ದೋಸೆಗೆ ಎಷ್ಟು ತೂತದಾವು ಅಂತ ಎಣಿಸ್ತಾ ಕುಂತೀವಿ' ತೆನೆಯಕ್ಕ ನಕ್ಕಳು.

'ಭಲೋ ಆತು, ತೂತು ಎರಡು ಹೆಚ್ಚು ಕಮ್ಮಿ ಇದ್ದೇ ಇರ್ತಾವು. ಅವನ್ನೇನ್ ಇನ್‌ಕಂ ಟ್ಯಾಕ್ಸಿಗೆ ಕೊಡ್ಬೇಕಾ?' ಎಂದ ತೆಪರೇಸಿ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ವೇದಿಕೆ ಸಿದ್ಧವಾಗಲಿ, ಸಭಾಂಗಣ ಅಣಿಯಾಗಲಿ

ಕಾರ್ಯಕ್ರಮ ನಿಗದಿತ ಕಾರ್ಯಸೂಚಿಯಂತೆ ನಡೆಯದೆ ವಿಳಂಬವಾದರೆ, ಕಾಟಾಚಾರದಿಂದ ಕೂಡಿದ್ದರೆ, ಸಹೃದಯರು ಭಾಗವಹಿಸುವಿಕೆಯಿಂದ ದೂರ ಉಳಿಯುತ್ತಾರೆ

• ಡಾ. ಮುರಳೀಧರ ಕಿರಣಕೆರೆ

ಅದು ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮ. ನೆನಪಿಸಲು ಹಿಂದಿನ ದಿನ ಕರೆ ಮಾಡಿದ ಸಂಘಟಕರು, 'ಬೆಳಿಗ್ಗೆ ಒಂಬತ್ತೂವರೆಗೇ ಬನ್ನಿ' ಎಂದಾಗ ಆಶ್ಚರ್ಯ ಆಗಿತ್ತು. ಆಹ್ವಾನ ಪತ್ರಿಕೆಯಲ್ಲಿ ಹತ್ತು ಗಂಟೆ ಎಂದಿದೆ. ಅನುಮಾನ ಮುಂದಿಟ್ಟಾಗ 'ಹೌದು ಸರ್, ಹತ್ತಕ್ಕೆ ಸರಿಯಾಗಿ ಆರಂಭಿಸುತ್ತೇವೆ. ನೇರವಾಗಿ ವೇದಿಕೆ ಹತ್ತುವುದಕ್ಕಿಂತ ಸ್ವಲ್ಪ ಮುಂಚೆ ಬಂದರೆ ಎಲ್ಲರ ಪರಿಚಯವಾಗುತ್ತೆ. ಕಾಫಿ ಮುಗಿಸಿ ಕಾರ್ಯಕ್ರಮ ಸಕಾಲಕ್ಕೆ ಆರಂಭಿಸಲು ಅನುಕೂಲ' ಎಂದಾಗ ಆ ನೇರ ನುಡಿಗೆ ಮೆಚ್ಚುಗೆಯಾಗಿತ್ತು.

ಕಾರ್ಯಕ್ರಮಗಳಿಗೆ ಸಮಯಕ್ಕೆ ಸರಿಯಾಗಿ ಹೋಗಿ ಕಾಯುವ ಹಿಂಸೆಯಿಂದ ತಪ್ಪಿಸಿಕೊಳ್ಳಲು 'ಎಷ್ಟೊತ್ತಿಗೆ ಬರಬೇಕು' ಎಂದು ಅತಿಥಿಗಳು ಕೇಳುವುದು ಮಾಮೂಲು. 'ಅರ್ಧ ಗಂಟೆನೋ ಒಂದು ಗಂಟೆನೋ ಲೇಟಾಗಿ ಬನ್ನಿ. ಜನ ಬಂದು ಕಾರ್ಯಕ್ರಮ ಶುರುವಾಗೋದು ಅಷ್ಟೊತ್ತಾಗುತ್ತೆ' ಎನ್ನುವವರೇ ಅಧಿಕ. ಅತಿಥಿಗಳು ಸಕಾಲಕ್ಕೆ ಬಂದರೆ ತಮಗಾಗುವ ಮುಜುಗರದಿಂದ ತಪ್ಪಿಸಿಕೊಳ್ಳಲು, ಘೋಷಿತ ಸಮಯವನ್ನು ಬಿಟ್ಟು ಮತ್ತೊಂದು ಸಮಯ ಕೊಡುವುದು ಎಲ್ಲೆಡೆ ಸಾಮಾನ್ಯ. ಅಂತಹುದರಲ್ಲಿ 'ಮೊದಲೇ ಬನ್ನಿ' ಎಂದು ಕರೆಯುವವರೂ ಇದ್ದಾರಲ್ಲ ಎಂಬುದು ವಿಶೇಷವೆನಿಸಿತ್ತು!

'ಸುಮ್ಮನೆ ಹೇಳ್ತಾರೆ, ಸಕಾಲಕ್ಕೆ ಶುರುಮಾಡುವ ಶಿಸ್ತಾದರೂ ಎಲ್ಲಿದೆ?' ಎಂಬ ಅಭಿಪ್ರಾಯವನ್ನು ಬದಲಾಯಿಸುವಂತೆ, ನಿಗದಿತ ವೇಳೆಗೆ ಕಾರ್ಯಕ್ರಮ ಆರಂಭವಾಗಿತ್ತು. ಸಭಿಕರ ಸಂಖ್ಯೆಯೂ ಉತ್ತಮವಾಗಿತ್ತು. ಉದ್ದನೆಯ ಕಾರ್ಯಸೂಚಿ ಗಮನಿಸಿದಾಗ, ಸಂಜೆಯೊಳಗೆ ಮುಗಿಸುವುದಂತೂ ಅಸಾಧ್ಯ ಎಂದು ಬಲವಾಗಿ ಅನಿಸಿತ್ತು. ಉದ್ಘಾಟನೆ, ಉಪನ್ಯಾಸ, ಪುಸ್ತಕ ಬಿಡುಗಡೆ, ಕೃತಿ ವಿಮರ್ಶೆ, ಗೀತ ಗಾಯನ, ಕವಿಗೋಷ್ಠಿ, ರಸಪ್ರಶ್ನೆ, ಆಟೋಟ, ಸಮಾರೋಪ ಎಂದೆಲ್ಲಾ ಹತ್ತಾರು ಬಗೆಗಳು. ಪ್ರತಿಯೊಂದಕ್ಕೂ ಕಾಲ ನಿಗದಿ. ನಿರ್ದಿಷ್ಟಪಡಿಸಿದ ಸಮಯವನ್ನು ಪ್ರಸ್ತುತಪಡಿಸುವವರ ಗಮನಕ್ಕೆ ತಂದು ಸಹಕರಿಸಲು ಮನವಿ. ಪರಿಣಾಮ ಅದ್ಭುತವಾಗಿತ್ತು. ಸೂರ್ಯಾಸ್ತದೊಳಗೆ ಕಾರ್ಯಕ್ರಮ ಯಶಸ್ವಿಯಾಗಿ ಸಂಪನ್ನಗೊಂಡಿತು! ಕಾರ್ಯದಕ್ಷತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ ಸಂಘಟಕರ ಕೌಶಲ, ಬದ್ಧತೆ ಪ್ರಶಂಸೆಗೆ ಪಾತ್ರವಾಗಿದ್ದವು.

ಹೌದು, ಇಂತಹ ಶಿಸ್ತುಬದ್ಧ ಕಾರ್ಯಕ್ರಮಗಳು ಕಾಣಸಿಗುವುದೇ ಅಪರೂಪವಾಗಿದೆ. ಸಭಿಕರಿಗಾಗಿ ಕಾಯುತ್ತಾ ತಡವಾಗಿ ಆರಂಭಿಸುವುದು ಈಗಂತೂ ಸಾಮಾನ್ಯ ವಿದ್ಯಮಾನ. ಜನ ಬರುವುದಿಲ್ಲ ಎಂಬ ಸಾರಾಸಗಟು ಆಪಾದನೆ. ಇಲ್ಲಿ ಸಂಘಟಕರ ಲೋಪವೇ ಪ್ರಧಾನವಾದದ್ದು. ವಾಸ್ತವದಲ್ಲಿ ನಿಗದಿತ ಸಮಯಕ್ಕೆ ಬಂದು ಕಾದು ಕಾದು ಹೈರಾಣಾಗುವ ಸಭಿಕರು ಮತ್ತೊಮ್ಮೆ ಅಂತಹ ಕಾರ್ಯಕ್ರಮಗಳಿಗೆ ಹೋಗುವಾಗ ಯೋಚಿಸುತ್ತಾರೆ. ಕಾರ್ಯಕ್ರಮವೊಂದರ ಯಶಸ್ಸನ್ನು ನಿರ್ಧರಿಸುವ ಮೊದಲ ಹೆಜ್ಜೆಯೇ ಸಮಯಪಾಲನೆ. ಆಗಮಾತ್ರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಒತ್ತಡವಿಲ್ಲದೆ ಮುಗಿಸಲು ಸಾಧ್ಯ. ಜನರಿಗೆ ಕಾಯುತ್ತಾ ಕಾರ್ಯಕ್ರಮ ಆರಂಭಿಸುವುದನ್ನು ತಡ ಮಾಡುವುದು ಒಂದೆಡೆಯಾದರೆ, ಇನ್ನೂ ಬಾರದ ಮುಖ್ಯ ಅತಿಥಿಗಳಿಗಾಗಿ ಎದುರು ನೋಡುತ್ತಾ ಸಭಿಕರ ಸಹನೆ ಪರೀಕ್ಷಿಸುವುದೂ ಸಾಮಾನ್ಯವಾಗಿದೆ. ಬಹುತೇಕ ಜನಪ್ರತಿನಿಧಿಗಳು ತಮ್ಮ ಕಾರ್ಯಬಾಹುಳ್ಯದ ಕಾರಣ ನಿಗದಿತ ವೇಳೆಗೆ ಹಾಜರಾಗುವುದು ಅಪರೂಪ. ಅವರಿಗಾಗಿ ಕಾಯುತ್ತಾ ಸಭೆಯನ್ನು ಒಂದೆರಡು ಗಂಟೆ ತಡವಾಗಿ ಶುರುಮಾಡುವುದೂ ಉಂಟು. ಹಾಗಾದಾಗ ಕಾರ್ಯಸೂಚಿಯಂತೆ ಸಭೆ ನಡೆಯುವುದಾದರೂ ಹೇಗೆ?

ಇಂಥದ್ದೇ ಹತ್ತಾರು ಕೆಟ್ಟ ಅನುಭವಗಳ ಕಾರಣದಿಂದ ಸಹೃದಯರು ಭಾಗವಹಿಸುವಿಕೆಯಿಂದ ದೂರ ಉಳಿಯುತ್ತಾರೆ. ಗುಣಮಟ್ಟದ ಸಭಿಕರ ಕೊರತೆಯಿಂದ ಕಾರ್ಯಕ್ರಮಗಳು, ವಿಚಾರಗೋಷ್ಠಿಗಳು ತಮ್ಮ ಮಹತ್ವ, ಗಾಂಭೀರ್ಯವನ್ನು ಕಳೆದುಕೊಳ್ಳುತ್ತಿವೆ. ಎಲ್ಲೋ ಸೆಲೆಬ್ರಿಟಿಗಳ, ಭಾರಿ ಮನರಂಜನೆಯ, ಅತಿ ವಿಶೇಷ ಕಾರ್ಯಕ್ರಮಗಳನ್ನು ಹೊರತುಪಡಿಸಿದರೆ ಬಹುತೇಕ ಸಭೆ, ಸಮಾರಂಭಗಳು ನಿರೀಕ್ಷಿಸಿದಷ್ಟು ಪ್ರೇಕ್ಷಕರಿಲ್ಲದೆ ಭಣಗುಟ್ಟುವ ವಿದ್ಯಮಾನವಂತೂ ಈಗ ಸಾರ್ವತ್ರಿಕ.



ನಿಗದಿತ ಸಮಯಕ್ಕೆ ಸಭೆ ಆರಂಭಿಸಲು ಪೂರ್ವಸಿದ್ಧತೆ ಅತಿ ಮುಖ್ಯ. ಆಮಂತ್ರಣ ಕಳುಹಿಸುವಾಗಲೇ ಸಮಯಕ್ಕೆ ಸರಿಯಾಗಿ ಶುರು ಮಾಡುತ್ತೇವೆ ಎಂಬುದನ್ನು ಮನದಟ್ಟು ಮಾಡಿಸಿ ಪ್ರೀತಿಯಿಂದ ಆಹ್ವಾನಿಸಬೇಕು. ಕಾರ್ಯಕ್ರಮ ಶುರು ಮಾಡಲು ಸಭಿಕರ ಸಂಖ್ಯೆ ಎಷ್ಟಿರಬೇಕು ಎಂಬುದನ್ನು ಅಂದಾಜಿಸಿ, ಕನಿಷ್ಠ ಆ ಸಂಖ್ಯೆಯಷ್ಟು ಜನರು ಸಮಯಕ್ಕೆ ಸರಿಯಾಗಿ ಹಾಜರಿರುವಂತೆ ನೋಡಿಕೊಂಡರೆ ವಿಳಂಬವಾಗುವುದನ್ನು ತಪ್ಪಿಸಬಹುದು. ಮುಂಚಿತವಾಗಿಯೇ ವೇದಿಕೆಯನ್ನು ಸಿದ್ಧಗೊಳಿಸುವ ಜೊತೆಗೆ ಸಭಾಂಗಣವನ್ನು ಪೂರ್ಣವಾಗಿ ಅಣಿಗೊಳಿಸಬೇಕು. ಅತಿಥಿಗಳನ್ನೂ ನಿಗದಿತ ಸಮಯಕ್ಕೆ ಮುಂಚಿತವಾಗಿಯೇ ಆಗಮಿಸುವಂತೆ ವಿನಂತಿಸಬೇಕು. ಒಂದು ವೇಳೆ ಉದ್ಘಾಟಕರೋ ಮುಖ್ಯ ಅತಿಥಿಗಳೋ ಬರುವುದು ತಡವಾಗುವುದಾದರೆ, ಅವರಿಗೆ ವಿಷಯ ತಿಳಿಸಿ ಆರಂಭಿಸಬೇಕು. ಅವರು ಮುಂದೆ ಸೇರಿಕೊಳ್ಳುವುದರಿಂದ ಸಭಾ ಮರ್ಯಾದೆಗೂ ಭಂಗವಾಗದು.

ಸಭೆಯೊಂದರಲ್ಲಿ ನೂರು ಜನರಿದ್ದು ಒಂದು ಗಂಟೆ ವಿಳಂಬವಾಗಿ ಆರಂಭವಾಗುವುದೆಂದರೆ, ಅಲ್ಲಿ ವ್ಯರ್ಥವಾಗುವ ವೇಳೆ ಬರೀ ಒಂದು ಗಂಟೆಯಲ್ಲ, ನೂರು ಮಾನವ ಗಂಟೆಗಳು! ಅಷ್ಟು ಅವಧಿಯ ಉತ್ಪಾದಕತೆ ನಷ್ಟವಾಗುತ್ತದೆ ಎಂಬುದನ್ನು ಆಯೋಜಕರು ಅರಿತಿದ್ದಾಗ ಮಾತ್ರ ಸಮಯದ ವೃಥಾ ಪೋಲು ತಪ್ಪಿಸಬಹುದು.

ವಾಚಕರ ವಾಣಿ

ದೇಹ ತಪಾಸಣೆಯಲ್ಲಿ ಎಡವಿದರೇ?

ಸಂಸತ್ತಿನ ಮೇಲಿನ ದಾಳಿಯ ಕಹಿ ನೆನಪಿನ ದಿನವೇ ಇಬ್ಬರು ಯುವಕರು ಸಂದರ್ಶಕರ ಗ್ಯಾಲರಿಯಿಂದ ಸದನಕ್ಕೆ ಜಿಗಿದಿರುವ ಆಘಾತಕಾರಿ ಬೆಳವಣಿಗೆಯು ಅಲ್ಲಿನ ಭದ್ರತೆಯ ಲೋಪವನ್ನು ಎತ್ತಿ ತೋರಿಸುತ್ತದೆ. ಒಟ್ಟು ಐದು ರೀತಿಯಲ್ಲಿ ಒಬ್ಬ ವ್ಯಕ್ತಿಯ ತಪಾಸಣೆ ನಡೆಸಿ ಸದನದ ಒಳಕ್ಕೆ ಬಿಡಲಾಗುತ್ತದೆ ಮತ್ತು ಒಳಗೆ ಹೋದವರನ್ನು ಕೂಡ ಅಲ್ಲಿನ ಭದ್ರತಾ ಸಿಬ್ಬಂದಿ ಗಮನಿಸುತ್ತಿರುತ್ತಾರೆ ಎಂದು ಕೇಳಿದ್ದೇವೆ. ಭದ್ರತಾ ಸಿಬ್ಬಂದಿಯು ಮೂರನೇ ಹಂತದಲ್ಲಿ ವ್ಯಕ್ತಿಗಳ ದೇಹವನ್ನು ತಡವಿ ತಪಾಸಣೆ ನಡೆಸಬೇಕು. ಇಷ್ಟೆಲ್ಲಾ ಮುಂಜಾಗ್ರತೆ ವಹಿಸಿದ್ದರೂ ಆ ಯುವಕರು ಸ್ಮೋಕ್ ಕ್ಯಾನ್‌ಗಳನ್ನು ಹೇಗೆ ಒಳಗೆ ತಂದರು ಎಂಬುದೇ ನಿಗೂಢ ಮತ್ತು ವಿಸ್ಮಯ.

ಮೂರನೇ ಹಂತದ ತಪಾಸಣೆಯ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿ ಮೈಮರೆತು ಭದ್ರತೆಯನ್ನು ಸಡಿಲಗೊಳಿಸಿದರೇ ಎಂಬ ಪ್ರಶ್ನೆ ಮೂಡುತ್ತದೆ. ಸದನದ ಇತಿಹಾಸದಲ್ಲಿ ಇದೊಂದು ಕಪ್ಪುಚುಕ್ಕೆ. ಸದನ ನಡೆಯುವಾಗ ವೀಕ್ಷಕರನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾದದ್ದು ಭದ್ರತಾ ಸಿಬ್ಬಂದಿಯ ಹೊಣೆಯಾಗಿರುತ್ತದೆ. ಇಂಥ ಪ್ರಕರಣ ಯಾವುದೇ ಕಾರಣಕ್ಕೂ ಮರುಕಳಿಸದಂತೆ ನೋಡಿಕೊಳ್ಳಬೇಕಾಗಿದೆ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಜನರ ಮಾನಸಿಕತೆ ಬದಲಾಗಲಿ

ಮನುಸ್ಮೃತಿ, ಮನುವಾದ ಎಂಬ ಪದಗಳನ್ನು ಇಂದಿನ ದಿನಗಳಲ್ಲಿ ಹೆಚ್ಚಾಗಿ ಕೇಳುತ್ತಿದ್ದೇವೆ. ವಿಶೇಷವಾಗಿ, ಬ್ರಾಹ್ಮಣರನ್ನೇ ಗುರಿಯಾಗಿಟ್ಟು ಈ ಪದಗಳನ್ನು ಬಳಸಲಾಗುತ್ತಿದೆ. ಇದು ಸರಿಯಲ್ಲ. ನಾನು ಜಾತಿಯಲ್ಲಿ ಒಬ್ಬ ಬ್ರಾಹ್ಮಣನಾಗಿದ್ದರೂ ನಮ್ಮ ಮನೆಯಲ್ಲಿ ಮಾತ್ರವಲ್ಲದೆ ಇತರ ಯಾವ ಮನೆಯಲ್ಲೂ ಈ ಗ್ರಂಥ ಇರುವುದನ್ನು ನಾನು ನೋಡಿಲ್ಲ.

ಸಮಾಜದಲ್ಲಿ ಜಾತಿ ತಾರತಮ್ಯ ಇಂದಿಗೂ ಇದೆ. ಅದು ಹೋಗಬೇಕು. ಆದರೆ ಮನುಸ್ಮೃತಿ ಗ್ರಂಥವನ್ನೇ ಮುಂದಿಟ್ಟು, ಜಾತಿ ತಾರತಮ್ಯ ಮಾಡಲಾಗುತ್ತಿದೆ ಎನ್ನುವುದು ಹಸಿ ಸುಳ್ಳು. ಯಾವ ತಂದೆ ತಾಯಿಯೂ ಕೆಟ್ಟ ಕೆಲಸ ಮಾಡಿ ಎಂದು ಮಕ್ಕಳಿಗೆ ಹೇಳಿಕೊಡುವುದಿಲ್ಲ. ಒಳ್ಳೆಯದನ್ನೇ ಹೇಳಿಕೊಡುತ್ತಾರೆ. ಜನರ ಮಾನಸಿಕತೆ ಕಾಲಕ್ಕೆ ತಕ್ಕಂತೆ ಬದಲಾಗಬೇಕಿದೆ ಅಷ್ಟೇ.

ಗುರು ಜಗಳೂರು, ಹರಿಹರ

ಗುರುತಿನ ಚೀಟಿಗೆ ಬಂತು ಎಲ್ಲಿಲ್ಲದ ಮಹತ್ವ

ಅದೊಂದು ಕಾಲವಿತ್ತು, ಯಾರು ಎಲ್ಲಿ ಬೇಕಾದರೂ ಸ್ವಚ್ಛಂದವಾಗಿ ಓಡಾಡಬಹುದಿತ್ತು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸದಲ್ಲಿ ಭಾರತದ ಯಾವುದೇ ಸ್ಮಾರಕವನ್ನು ವೀಕ್ಷಿಸಲು, ಅಣೆಕಟ್ಟುಗಳ ಮೇಲೆ ನಡೆದಾಡಲು ಅವಕಾಶವಿತ್ತು. ಜನಸಾಮಾನ್ಯರಿಗೆ ವಿಮಾನ ಪ್ರಯಾಣ ಗಗನಕುಸುಮವಾಗಿದ್ದಾಗ, ವಿದ್ಯಾರ್ಥಿಗಳೂ ವಿಮಾನದ ಸಮೀಪಕ್ಕೆ ತೆರಳಿ ಅದನ್ನು ಮುಟ್ಟಿ ಆನಂದಿಸಬಹುದಿತ್ತು. ಬರೀ ಗಣ್ಯರ ಒಂದು ಬಾಯಿಮಾತಿನ ಮೇಲೆ ವಿಧಾನಸೌಧವನ್ನು ವೀಕ್ಷಿಸಬಹುದಿತ್ತು. ಬಂಧುಮಿತ್ರರು ವಿದೇಶಕ್ಕೆ ತೆರಳುವಾಗ ಈಗಿನಂತೆ ಹೆಚ್ಚಿನ ನಿರ್ಬಂಧವಿಲ್ಲದೆ ವಿಮಾನದ ಸಮೀಪದವರೆಗೂ ತೆರಳಿ ಬೀಳ್ಕೊಡಬಹುದಿತ್ತು. ಪರ ಊರಿಗೆ ಹೋದಾಗ ಯಾವುದೇ ಪುರಾವೆ ತೋರಿಸದೆ ಹೋಟೆಲ್ ರೂಮ್‌ಗಳಲ್ಲಿ ತಂಗಬಹುದಿತ್ತು.

ಈ ಮಾತುಗಳನ್ನು ಇಂದಿನ ಯುವಜನರಿಗೆ ಹೇಳಿದರೆ ನಂಬಲಾರರು. ಯಾಕೆಂದರೆ ಈಗ ಎಲ್ಲೇ ಹೋಗಲಿ, ಎಲ್ಲ ಕಡೆಗಳಲ್ಲೂ ಗುರುತಿನ ಚೀಟಿ ತೋರಿಸಬೇಕಾದುದು ಅತ್ಯವಶ್ಯ. ಕೊನೆಗೆ ರೈಲು ನಿಲ್ದಾಣದ ಲಗೇಜ್ ರೂಮ್‌ನಲ್ಲಿ ಲಗೇಜ್ ಇಡುವುದಕ್ಕೂ ಗುರುತಿನ ಚೀಟಿ ಬೇಕೇ ಬೇಕು. ಯಾವುದೇ ಅಣೆಕಟ್ಟು ವೀಕ್ಷಣೆ, ವಿಮಾನ ನಿಲ್ದಾಣ ಪ್ರವೇಶ, ವಿಧಾನಸೌಧ ವೀಕ್ಷಣೆ ಹೀಗೆ ಎಲ್ಲಿಗೆ ಹೋಗ ಬೇಕಾದರೂ ನಿರ್ಬಂಧ ಹೇರಲಾಗಿದೆ. ಬಹುತೇಕ ದೂರದಿಂದಲೇ ನೋಡಿ ಆನಂದಿಸಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಇಷ್ಟೆಲ್ಲ ಬಿಗಿ ಭದ್ರತೆ ಇದ್ದರೂ ದೇಶದ ಶಕ್ತಿಕೇಂದ್ರವಾದ ಸಂಸತ್ತಿನಲ್ಲಿ ಭದ್ರತೆ ಭೇದಿಸಿ ಇಬ್ಬರು ಯುವಕರು ಸಂದರ್ಶನ ಗ್ಯಾಲರಿಯಿಂದ ಸದನದೊಳಗೆ ಜಿಗಿದಿದ್ದಾರೆ! ಈ ಪ್ರಕರಣ ದೇಶದ ಭದ್ರತಾ ವ್ಯವಸ್ಥೆಯನ್ನೇ ಪ್ರಶ್ನಿಸುವಂತಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಶೃಂಗಾರಸಭೆ...!

ಭೂತಾಪವನು ತಡೆಯಲೆಂದು
ದುಬೈಯಲಿ ನಡೆದ ಶೃಂಗಸಭೆ
ಬರೀ ಶೃಂಗಾರಸಭೆಯಾಗಿ
ಮಾರ್ಪಟ್ಟ ಕಥನವನು
ಅರ್ಥವತ್ತಾಗಿ ಕಟ್ಟಿಕೊಟ್ಟಿದ್ದಾರೆ
ನಾಗೇಶ ಹೆಗಡೆ (ಪ್ರ.ವಾ., ಡಿ. 14).
ಭೋಗವಸ್ತುವಿನಲಿ
ಸುಖವನರಸುವುದು
ಬರೀ ಭ್ರಮೆ,
ಭೋಗಬದುಕು ಬದುಕಲ್ಲ
ಮಿತದಲಿ ಹಿತವಿದೆ
ಮಿತವೆ ಜಗಬಾಳಿಕೆಯ ನೀತಿ

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಚಿಕಿತ್ಸೆಗೆ ನೆರವಾಗಿ


ನನ್ನ ಪತ್ನಿ ಸಬೀನಾ ನದಾಫ್ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ಕಿಡ್ನಿ ನೀಡಲು ಆಕೆಯ ತಾಯಿ ಮತ್ತು ಸಹೋದರ ಸಿದ್ಧರಿದ್ದಾರೆ. ಆದರೆ ಆಕೆಯ ದೇಹದಲ್ಲಿ ರಕ್ತದ ಕಣಗಳು ಉತ್ಪಾದನೆಯಾದ ಕೆಲವೇ ಕ್ಷಣಗಳಲ್ಲಿ ಸಾಯುತ್ತಿವೆ. ಇಂತಹ ಸ್ಥಿತಿಯಲ್ಲಿ ಕಿಡ್ನಿಯನ್ನು ಕಸಿ ಮಾಡಿದರೆ ಅದು ಸಹ ಹಾನಿಗೊಳಗಾಗುವ ಸಾಧ್ಯತೆ ಹೆಚ್ಚು. ಈ ಕಾಯಿಲೆಯನ್ನು ಗುಣಪಡಿಸಲು ಸೊಲಿರಿಸ್ ಎಂಬ ಸುಮಾರು 20 ಇಂಜೆಕ್ಷನ್‌ಗಳನ್ನು ನೀಡಬೇಕಾಗುತ್ತದೆ. 10 ಲಕ್ಷಕ್ಕೆ ಒಬ್ಬರಿಗೆ ಈ ರೀತಿಯಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ.

ಇಂಜೆಕ್ಷನ್‌ನ ಬೆಲೆ ತಲಾ ಸುಮಾರು ₹ 1.80 ಲಕ್ಷ ಆಗಿದ್ದು, 35 ಲಕ್ಷಕ್ಕೂ ಹೆಚ್ಚು ಹಣ ಬೇಕಾಗುತ್ತದೆ. ಶಿಕ್ಷಕನಾಗಿರುವ ನಾನು ಇಬ್ಬರು ಹೆಣ್ಣುಮಕ್ಕಳ ತಂದೆಯಾಗಿದ್ದೇನೆ. ಈಗಾಗಲೇ ಸುಮಾರು 6 ಲಕ್ಷಕ್ಕೂ ಹೆಚ್ಚು ಹಣವನ್ನು ಪತ್ನಿಯ ಚಿಕಿತ್ಸೆಗಾಗಿ ಖರ್ಚು ಮಾಡಿದ್ದೇನೆ. ಈಗ ಇಂಜೆಕ್ಷನ್‌ಗೆ ಅಗತ್ಯವಾದ ಹಣವನ್ನು ಹೊಂದಿಸುವುದು ಬಹಳ ಕಷ್ಟವಾಗಿದೆ. ದಾನಿಗಳು ಧನಸಹಾಯ ಮಾಡಬೇಕೆಂದು ಕೋರುತ್ತೇನೆ. ವಿವರ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಖಾತೆ ಸಂಖ್ಯೆ: 64095350470, ಯಲಬುರ್ಗಾ ಶಾಖೆ, ಐಎಫ್‌ಎಸ್‌ಸಿ: SBIN0040838. ಫೋನ್‌ಪೇ ಸಂಖ್ಯೆ 7026502441, ಸಂಪರ್ಕ ಸಂಖ್ಯೆ: 7026502441.

ಮರ್ದನ್‌ಸಾಬ್ ನದಾಫ, ಕಲಭಾವಿ, ಯಲಬುರ್ಗಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗಾಯಗೊಂಡ ಪರಿಸರ ಮತ್ತು ನಾವು




• ಕೃಪಾಕರ–ಸೇನಾನಿ



ಐವತ್ತು ವರ್ಷಗಳ ಹಿಂದೆ ಅಭಯಾರಣ್ಯಗಳನ್ನು ಗುರುತಿಸುವ ಕಾರ್ಯ ಶುರುವಾದಾಗ ನಮ್ಮ ದೇಶದ ಪರಿಸ್ಥಿತಿ ಬೇರೆಯದೇ ಆಗಿತ್ತು, ರಾಜ್ಯದ್ದೂ ಕೂಡ. ಹಸಿವು, ಜನಸಂಖ್ಯಾ ಸ್ಫೋಟ ಮತ್ತಿತರ ನೂರಾರು ಸಮಸ್ಯೆಗಳಿಗೆ ಉತ್ತರ ಹುಡುಕುವುದು ಅಂದಿನ ಆದ್ಯತೆಯಾಗಿತ್ತು. ಈ ಎಲ್ಲಾ ಸಮಸ್ಯೆಗಳ ನಡುವೆ ಇಷ್ಟಾದರೂ ಕಾಡುಗಳನ್ನು ಉಳಿಸಿಕೊಂಡಿದ್ದು ಹೆಮ್ಮೆಪಡಬೇಕಾದ ಸಾಧನೆ. ಸಂಶಯವೇ ಬೇಡ.

ಜೊತೆಗೆ ಆ ದಿನಗಳಲ್ಲಿ ಜೀವ ವಿಜ್ಞಾನ ಶೈಶವಾವಸ್ಥೆಯಲ್ಲಿತ್ತು. ಹಾಗಾಗಿ ಜೀವಿಗಳ ಬದುಕಿಗೆ ಏನು ಬೇಕೆಂಬ ತಿಳಿವಳಿಕೆ ಇಲ್ಲದೆ, ಭೂಪಟದಲ್ಲಿ ಗೆರೆಗಳನ್ನು ಎಳೆದು ಕಾಡೆಂದು ಘೋಷಿಸಿದೆವು. ಆನೆಗಳಿಗಿಷ್ಟು, ಹುಲಿಗಳಿಗಿಷ್ಟು ಎಂದು ಕಾಡನ್ನು ಆಸ್ತಿ ಪಾಲುಮಾಡಿದಂತೆ ಹಂಚಿದೆವು. ಉಳಿದ ಕಾಡನ್ನು ಸವರಿ ಸಾಗುವಳಿಗೆ ಕಾದಿರಿಸಿದೆವು.

ಕಾಡಾನೆಗಳ ವಲಸೆಯ ನಕ್ಷೆಯನ್ನು ಅದರ ವಿಕಾಸದ ಪಥದಲ್ಲಿ ಎದುರಾದ ಒತ್ತಡಗಳು ತೀರ್ಮಾನಿಸಿರುತ್ತವೆ. ಆದರೆ ಈಗ ಆ ಹಾದಿಯಲ್ಲಿ ಕಂದಕಗಳಿವೆ, ಸೌರಬೇಲಿಗಳಿವೆ, ಜೋಳ, ಕಬ್ಬುಗಳು ಬೆಳೆದು ನಿಂತಿವೆ. ತಮ್ಮ ಮಾರ್ಗವನ್ನು ಬದಲಿಸಿ ಬೇರೊಂದು ದಾರಿ ಹಿಡಿದರೆ ಅದು ಮತ್ತೊಂದು ಗುಂಪಿನ ಖಾಸಗಿ ವಲಯಕ್ಕೆ ಅತಿಕ್ರಮಣ ಮಾಡಿದಂತೆ. ಇದು, ಒಂದು ರೀತಿಯಲ್ಲಿ ಮಾನಸಿಕ ತಡೆಗೋಡೆಯಂತೆ. ಅದನ್ನು ಅವು ಉಲ್ಲಂಘಿಸಲಾಗಲಿ ಅಥವಾ ಮೀರಲಾಗಲಿ ಸಾಧ್ಯವಿಲ್ಲ.

ಇನ್ನು ದಿನನಿತ್ಯ ಸುದ್ದಿಯಲ್ಲಿರುವ ಹುಲಿಗಳ ಕಥೆ ಭಿನ್ನವಾಗಿಲ್ಲ. 1972ರಲ್ಲಿ ಪ್ರಧಾನಿ ಇಂದಿರಾಗಾಂಧಿ ಕಾರ್ಯರೂಪಕ್ಕೆ ತಂದ ಹುಲಿ ಯೋಜನೆ ಮತ್ತು ಜಾರಿಗೊಳಿಸಿದ ವನ್ಯಜೀವಿ ಕಾಯ್ದೆಗಳು ಅಭಿನಂದನಾರ್ಹ. ಆ ನಂತರ ಹುಲಿಗಳ ಸಂತತಿ ಚೇತರಿಸಿಕೊಂಡಿದ್ದು ಕೂಡ ನಿಜ. ಇದಾದ ಬಳಿಕ ಮುಂದಿನ ಕಾರ್ಯಯೋಜನೆಗಳು ಏನಿರಬೇಕೆಂಬ ಚಿಂತನೆಗೆ ಯಾರೂ ಮುಂದಾಗಲಿಲ್ಲ.

ಕೇವಲ ಹೆಚ್ಚಿದ ಹುಲಿಗಳ ಸಂಖ್ಯೆಯನ್ನು ತಮ್ಮ ಅವಧಿಯ ಸಾಧನೆ ಎಂದು ಬಣ್ಣಿಸಿಕೊಳ್ಳುವುದಕ್ಕಷ್ಟೆ ಸರ್ಕಾರಗಳು ಸೀಮಿತವಾಗಿವೆ. ಹುಲಿಗಳು ಹೊಲಗದ್ದೆಗಳಲ್ಲಿ, ಕಾಫಿತೋಟಗಳಲ್ಲಿ ಪ್ರತ್ಯಕ್ಷಗೊಳ್ಳಲು ಕಾರಣವೇನು? ಸಂತತಿಗಳು ಬಲಿಷ್ಠವಾಗಿ ದೀರ್ಘಕಾಲ ಬದುಕುಳಿಯಲು ಅವಶ್ಯವಿರುವ ಅನುಷಂಗಿಕ ವೈವಿಧ್ಯದ ಪರಿಸ್ಥಿತಿ ಏನಾಗಿದೆ? ಇತ್ತೀಚಿನ ಸಂಶೋಧನೆಗಳು ಏನು ಹೇಳುತ್ತಿವೆ? ನಮ್ಮ ಅನೇಕ ಕಾಡುಗಳನ್ನು ಆಳುತ್ತಿರುವ ಆಕ್ರಮಣಕಾರಿ ವಿದೇಶಿ ಸಸ್ಯಗಳಿಂದ ಒಟ್ಟಾರೆ ಜೀವಪರಿಸರಕ್ಕೆ ಆಗಿರಬಹುದಾದ ಅನಾಹುತಗಳೇನು? ಒಟ್ಟು ಕಾಡಿನ ಪರಿಸರದ ಆರೋಗ್ಯ ಹೇಗಿದೆ? ಕುಟುಂಬಗಳಿಂದ ಹೊರನಡೆದು ಹೊಸ ವಾಸಸ್ಥಾನಗಳನ್ನು ಹುಡುಕುವ ಪ್ರಾಣಿಗಳಿಗೆ ಈಗಿರುವ ಕಾಡುಗಳಲ್ಲಿ ಸ್ಥಳಾವಕಾಶದ ಕೊರತೆ ಇದೆಯೇ? ಕಾಡು–ಕಾಡುಗಳ ನಡುವೆ ಸಂಪರ್ಕವಿದೆಯೇ? ಅದನ್ನು ಸರಿಪಡಿಸುವ ಸಾಧ್ಯತೆಗಳಿವೆಯೇ? ಹೀಗೆ ಪ್ರಶ್ನೆಗಳ ದೊಡ್ಡಪಟ್ಟಿಯೇ ನಮ್ಮೆದುರು ನಿಲ್ಲುತ್ತದೆ.

ಇಂತಹ ಅನೇಕ ಗಂಭೀರ ಸಮಸ್ಯೆಗಳು ನಮ್ಮ ಮುಂದಿರುವಾಗ ಈಗಾಗಲೇ ಕಣ್ಮರೆಯಾಗಿರುವ ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಕೇಂದ್ರ ಸರ್ಕಾರ ಪರಿಚಯಿಸಿದೆ. ರಾಜ್ಯ ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನದಲ್ಲಿದೆ. ಹುಲ್ಲುಗಾವಲು ಎಂದರೆ ಕೇವಲ ಹುಲ್ಲುಗಳ ಬಯಲುಗಳಲ್ಲ. ಅದೊಂದು ಜೀವ ಪರಿಸರ. ಲಕ್ಷಾಂತರ ವರ್ಷಗಳಲ್ಲಿ ಜರುಗಿದ ವಿಕಾಸ ಕ್ರಿಯೆಯ ಪ್ರಕ್ರಿಯೆಗೆ ಪೂರಕವಾಗಿ ರೂಪುಗೊಂಡಿರುವ ನೆಲೆ. ಸಂಪೂರ್ಣವಾಗಿ ನಾಶಗೊಂಡಿರುವ ಹುಲ್ಲುಗಾವಲುಗಳಲ್ಲಿದ್ದ ವಿಭಿನ್ನ ಪ್ರಭೇದದ ಹುಲ್ಲು ಮತ್ತು ಉಳಿದ ಸಸ್ಯ, ಕೀಟಗಳ ಸಂಯೋಜನೆಗಳನ್ನು ಮತ್ತೆ ವಿನ್ಯಾಸಗೊಳಿಸುವುದಾದರು ಹೇಗೆ? ಇಲ್ಲಿ ಮತ್ತೆ ಮತ್ತೆ ಹೇಳಬೇಕಾದ ವಿಷಯವೆಂದರೆ, ನಶಿಸಿಹೋದ ಜೀವ ಪರಿಸರಗಳನ್ನು ಮಾನವ ಎಂದಿಗೂ ಪುನರ್ ಸೃಷ್ಟಿಸಲಾರ. ಈ ಹಿನ್ನೆಲೆಯಲ್ಲಿ ಇಂತಹ ಯೋಜನೆಗಳು ವಿಫಲಗೊಳ್ಳಲೆಂದೆ ವಿನ್ಯಾಸಗೊಳಿಸಿ ಸಿದ್ಧಪಡಿಸಿರುವ ಯೋಜನೆಗಳು ಎಂಬಂತೆ ಕಾಣುತ್ತವೆ. ವಿನಾಶದಂಚಿಗೆ ಬಂದಿರುವ ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಗಳನ್ನು ಉಳಿಸಿಕೊಳ್ಳುವ ಉದ್ದೇಶ ಈ ಯೋಜನೆಗಿರಬಹುದು. ಆದರೆ ಇದೇ ಸಮಯದಲ್ಲಿ ಅಳಿದುಳಿದಿರುವ ಈ ಹಕ್ಕಿಗಳ ಆವಾಸಸ್ಥಾನವನ್ನು ಛಿದ್ರಗೊಳಿಸುವ ಅಭಿವೃದ್ಧಿ ಯೋಜನೆಗಳು ವೇಗವಾಗಿ ಅನುಷ್ಠಾನಕ್ಕೆ ಬರುತ್ತಿವೆ.



> ಇಲ್ಲಿ ಮತ್ತೆ ಮತ್ತೆ ಹೇಳಬೇಕಾದ ವಿಷಯವೆಂದರೆ, ನಶಿಸಿಹೋದ ಜೀವ ಪರಿಸರಗಳನ್ನು ಮಾನವ ಎಂದಿಗೂ ಪುನರ್ ಸೃಷ್ಟಿಸಲಾರ. ಈ ಹಿನ್ನೆಲೆಯಲ್ಲಿ ಇಂತಹ ಯೋಜನೆಗಳು ವಿಫಲಗೊಳ್ಳಲೆಂದೇ ವಿನ್ಯಾಸಗೊಳಿಸಿ ಸಿದ್ಧಪಡಿಸಿರುವ ಯೋಜನೆಗಳು ಎಂಬಂತೆ ಕಾಣುತ್ತವೆ

> ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ರಾಜ್ಯದ ಪರಿಸರ ಸಂರಕ್ಷಣೆಗೆ ನಾವೇನು ಮಾಡಬೇಕು ಎಂಬ ಪ್ರಶ್ನೆಗೆ, ನಾವು ಏನೆಲ್ಲಾ ಮಾಡಬಾರದೆಂಬುದನ್ನು ಅರಿಯುವುದೇ ಉತ್ತರ. ಏಕೆಂದರೆ ಪರಿಸರದ ವಿಷಯದಲ್ಲಿ ಅಭಿವೃದ್ಧಿ ಎಂಬ ಪದಕ್ಕೆ ಅರ್ಥವೇ ಇಲ್ಲ. ಇಡೀ ಜನಮಾನಸದಲ್ಲಿ ನಾವು ಇದೇ ಭೂಮಿಯ ಪರಿಸರದ ಒಂದು ಭಾಗ ಎಂಬ ತಿಳಿವಳಿಕೆ ಮೂಡಿದರೆ ಅದಷ್ಟೇ ಸಾಕು. ಪರಿಹಾರದ ಬಾಗಿಲುಗಳು ತಮಗೆ ತಾವೇ ತೆರೆದುಕೊಳ್ಳುತ್ತವೆ

ಹುಲ್ಲುಗಾವಲು ಪ್ರದೇಶಗಳನ್ನು ನಿರುಪಯುಕ್ತ ಭೂಮಿ ಎಂದು ತೀರ್ಮಾನಿಸಿ ಸಾಗುವಳಿಗೆ, ಕೈಗಾರಿಕೆಗಳಿಗೆ ಮಂಜೂರು ಮಾಡುವ ಕೆಲಸ ಇಂದಿಗೂ ಮುಂದುವರೆದಿದೆ. ಇದರಿಂದ ನೂರಾರು ವರ್ಷಗಳಿಂದ ಕುರಿಮಂದೆಗಳೊಂದಿಗೆ ಓಡುವ ಮೋಡಗಳನ್ನು ಹಿಂಬಾಲಿಸುತ್ತಿದ್ದ ಸಾವಿರ, ಸಾವಿರ ಅಲೆಮಾರಿ ಕುರಿಗಾಹಿಗಳ ಗತಿ ಏನಾಗಿದೆ? ಅವರ ನೆರಳಲ್ಲಿ ಕದ್ದು ಮುಚ್ಚಿ ಬದುಕು ಸಾಗಿಸುತ್ತಿದ್ದ ತೋಳಗಳ ಪರಿಸ್ಥಿತಿ ಏನಾಗಿದೆ? ಇಂಡಿಯನ್ ಬಸ್ಟರ್ಡ್ ಹಕ್ಕಿಗಳು ಎಲ್ಲಿ ಹೋದವು? ಇಂದು ನೆಲೆ ತಪ್ಪಿ ಬೀದಿಪಾಲಾಗುತ್ತಿರುವ ಈ ಸಂಸ್ಕೃತಿಯನ್ನು ನಾಶಮಾಡಿ, ನಿರುದ್ಯೋಗವೇ ಉದ್ಯೋಗವಾಗಿರುವ ದೇಶದಲ್ಲಿ ಇವರಿಗೆಲ್ಲ ಬೇರೆ ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವೆ? ವಿಶಿಷ್ಟವಾದ ಈ ಕಸುಬನ್ನು, ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಅಲೆಮಾರಿ ಕುರಿಗಾಹಿಗಳ ಅಳಿದುಳಿದ ಪರಿಸರವನ್ನು ಸಂರಕ್ಷಿಸಿಕೊಳ್ಳಬೇಕಾದ ಅಗತ್ಯವಿದೆ. 'ಅಭಿವೃದ್ಧಿ'ಗೆ ಚಿಂತಿಸುತ್ತಿರುವ ಸರ್ಕಾರ, ಬದುಕು ಛಿದ್ರಗೊಂಡು ಇವರು ನಗರಗಳಲ್ಲಿ ಕೂಲಿಗಾಗಿ ಅಲೆದಾಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಇದೇ ರೀತಿ ನಮ್ಮ ನದಿಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಅವು ಮಲಿನಗೊಂಡಿರುವುದಷ್ಟೆ ಅಲ್ಲ, ತಮ್ಮ ನೈಜ ಸ್ವರೂಪವನ್ನೇ ಕಳೆದುಕೊಂಡಿದೆ. ಕುಡಿಯುವ ನೀರಿಗೂ ಧಕ್ಕೆ ಬರುವಂತೆ ಕೈಗಾರಿಕೆಗಳು ವಿಷವನ್ನು ನದಿಗೆ ಸೇರಿಸುತ್ತಿವೆ. ಇಲ್ಲಿ ಕಾನೂನು ನಿದ್ರಿಸಿಬಿಟ್ಟಿದೆ. ಮೀನುಗಾರಿಕೆ ಇಲಾಖೆ ಬೇರೆಲ್ಲಿಂದಲೋ ತಂದ ಮೀನು ತಳಿಗಳನ್ನು ನದಿಗೆ ಇಳಿಸುತ್ತಿದೆ. ಈ ನಡುವೆ ಸರ್ಕಾರ ನದಿ ಜೋಡಣೆಯ ಪ್ರಸ್ತಾಪ ಮುಂದಿಟ್ಟಿದೆ. ಇದೊಂದು ಮಹಾ ಅನಾಹುತಕ್ಕೆ ಮುನ್ನುಡಿಯಂತೆ ಕಾಣುತ್ತಿದೆ.

ಹರಿಯುವ ನದಿಗಳಿಗೆ ಅವುಗಳದೇ ಆದ ವಿಶಿಷ್ಟ ಜೀವ ಪರಿಸರಗಳಿರುತ್ತವೆ. ಅಲ್ಲಿ ಬಂಡೆಗಳು ಬೇಕು, ಗುಡ್ಡಗಳು ಬೇಕು, ಜೌಗು ಪ್ರದೇಶಗಳು ಬೇಕು, ನದಿಗಳು ಬದಿಗೆ ಬಿಸಾಡಿದ ಮರುಳು ರಾಶಿಗಳು ಇರಬೇಕು, ಆಗಷ್ಟೆ ಅದು ನದಿ.


ಸಹಜ ಜೀವ ಪರಿಸರಕ್ಕೆ ಹೊಸ ಪ್ರಾಣಿ, ಪಕ್ಷಿ, ಮೀನು ಅಥವಾ ಸಸ್ಯಗಳನ್ನು ಮಾನವ ಪರಿಚಯಿಸಿ ಜೀವಪರಿಸರವನ್ನು ಧ್ವಂಸಗೊಳಿಸಿದ ಉದಾಹರಣೆಗಳು ನಮ್ಮ ಭೂಮಿಯ ಇತಿಹಾಸದಲ್ಲಿ ಹೇರಳವಾಗಿವೆ. ಇತಿಹಾಸದಿಂದ ನಾವು ಏನನ್ನೂ ಕಲಿಯದಿದ್ದಾಗ ಇತಿಹಾಸ ಮತ್ತೆ ಮತ್ತೆ ಮರುಕಳಿಸುತ್ತಿರುತ್ತದೆ.

ಮೊದಲಿಗೆ ನಾವು ಒಂದು ಜೀವ ಪರಿಸರವನ್ನು 'ಅಭಿವೃದ್ಧಿ'ಪಡಿಸುತ್ತೇವೆಂಬ ಭ್ರಮೆಯಿಂದ ಹೊರಬರಬೇಕಾದ ಅವಶ್ಯಕತೆ ಇದೆ. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಅಭಿವೃದ್ಧಿ ಎಂದರೆ ನಾಶಗೊಳಿಸುವುದೆಂಬ ಅರ್ಥ ಬರುತ್ತದೆ. ಉದಾಹರಣೆಗೆ ಕಾಡಿನಲ್ಲಿ ಹೆಚ್ಚು ಹೆಚ್ಚು ಕೆರೆಗಳನ್ನು ನಿರ್ಮಿಸುವ ಕೆಲಸ ಬರದಿಂದ ಸಾಗಿದೆ. ಇದು ತರ್ಕಬದ್ಧವಾದುದ್ದಲ್ಲ ಮತ್ತು ಅವೈಜ್ಞಾನಿಕ ಕೂಡ. ಯಾವುದೇ ಜೀವ ಪರಿಸರದಲ್ಲಿ ಸಹಜವಾಗಿ ರೂಪುಗೊಂಡಿರುವ ಜಲಮೂಲಗಳು ಅಲ್ಲಿಯ ಜೀವಿಗಳ ಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಪ್ರಾಕೃತಿಕ ತಡೆಗೋಡೆಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ರೀತಿಯ ತಡೆಗೋಡೆಗಳು ಒಟ್ಟು ಜೀವಜಾಲದ ಆರೋಗ್ಯಕ್ಕೆ ಅತ್ಯವಶ್ಯಕ.

ನಾವು ಉಳಿಸಿಕೊಳ್ಳಲು ಯತ್ನಿಸುತ್ತಿರುವುದು ಜೈವಿಕ ವಲಯಗಳನ್ನು ಎಂಬುದನ್ನು ಯಾವಾಗಲು ನೆನಪಿನಲ್ಲಿಟ್ಟುಕೊಳ್ಳಬೇಕು. ಒಂದು ಪರಿಸರ ವ್ಯವಸ್ಥೆಯಲ್ಲಿ (ಇಕೋಸಿಸ್ಟಂ) ಎಲ್ಲವೂ ಹೆಣೆದುಕೊಂಡಿರುತ್ತವೆ. ಮಣ್ಣು ಕಲ್ಲುಗಳಿಂದ ಮಳೆನೀರಿನವರೆಗೆ. ಅಣಬೆಯಿಂದ ಆನೆಯವರೆಗೆ... ಹಾಗಾಗಿ ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ.

ಒಟ್ಟಾರೆ ಇಲ್ಲಿ ಅರಿವಿನ ಕೊರತೆ ಇದೆ. ಎಲ್ಲವೂ ಸಾಂಪ್ರದಾಯಿಕವಾಗಿ ಜರುಗುತ್ತಿವೆ. ಹಾಗಾದರೆ ನಾವೀಗ ಏನು ಮಾಡಬೇಕು? ಗುಣಮಟ್ಟದ ದೀರ್ಘಕಾಲದ ವೈಜ್ಞಾನಿಕ ಸಂಶೋಧನೆಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು ಮತ್ತು ಈ ಸಂಶೋಧನೆಗಳ ತಳಹದಿಯಲ್ಲೇ ನಮ್ಮ ಮುಂದಿನ ಪರಿಸರ ಸಂರಕ್ಷಣೆಯ ಹಾದಿಯನ್ನು ಗುರುತಿಸಿಕೊಳ್ಳಬೇಕು. ಒಳನೋಟಗಳಿರುವ ತಜ್ಞರ ಸಲಹೆಗೆ ತೆರೆದುಕೊಳ್ಳಬೇಕು. ಪರಿಸರದ ಸೂಕ್ಷ್ಮಗಳನ್ನು ಬಲ್ಲ ಅನುಭವಿಗಳನ್ನು ರಾಜ್ಯ ವನ್ಯಜೀವಿ ಸಲಹಾ ಮಂಡಳಿಗಳಂತಹ ಸಮಿತಿಗಳಿಗೆ ಪರಿಗಣಿಸಬೇಕು. ಅದು ರಾಜಕೀಯ ನಿರಾಶ್ರಿತರ ಅಥವಾ ಪ್ರಭಾವಿಗಳನ್ನು ಓಲೈಸುವ ಕೆಲಸಕ್ಕೆ ಸೀಮಿತವಾಗಬಾರದು.

ಲೇಖಕರು: ವನ್ಯಜೀವಿ ಸಾಕ್ಷ್ಯಚಿತ್ರ ನಿರ್ಮಾಪಕರು



ಹೆಬ್ಬಕ

'ಕದನ ವಿರಾಮ' ಪ್ರಾರಂಭ



ಛಾಯಾಶ್ರೀ, ಆಕಾಶ್ ಶೆಟ್ಟಿ

ಈ ಹಿಂದೆ 'ರಿವಿಲ್' ಚಿತ್ರವನ್ನು ನಿರ್ದೇಶಿಸಿದ್ದ ಮುರಳಿ ಎಸ್.ವೈ. ಆ್ಯಕ್ಷನ್–ಕಟ್ ಹೇಳುತ್ತಿರುವ 'ಕದನ ವಿರಾಮ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಶ್ರೀ ಬ್ರಹ್ಮಲಿಂಗೇಶ್ವರ ಫಿಲ್ಮ್ಸ್ ಲಾಂಛನದಲ್ಲಿ ಕೆ.ಭಾಸ್ಕರ್ ನಾಯ್ಕ್, ಸಾಮ್ರಾಟ್ ಮಂಜುನಾಥ್ ವಿ. ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

"'ಕದನ ವಿರಾಮ' ಎಂದರೆ ಭೂಮಿ ಹಾಗೂ ಮನುಷ್ಯನ ನಡುವೆ ನಡೆಯುವ ಕಥೆ. ನಿರ್ಮಾಪಕ ಭಾಸ್ಕರ್ ನಾಯ್ಕ್ ಅವರೇ ಈ ಕಥೆ ಬರೆದಿದ್ದಾರೆ. ನಾನು ಚಿತ್ರಕಥೆ, ಸಂಭಾಷಣೆ ಬರೆದಿದ್ದೇನೆ. ಐದು ಹಾಡುಗಳು ಹಾಗೂ ನಾಲ್ಕು ಸಾಹಸ ಸನ್ನಿವೇಶಗಳು ಈ ಚಿತ್ರದಲ್ಲಿವೆ. ಸಿನಿಮಾದ ಬಹುತೇಕ ಚಿತ್ರೀಕರಣ ಕುಂದಾಪುರದಲ್ಲಿ ನಡೆಯಲಿದೆ. ಈ ತಿಂಗಳ ಕೊನೆಗೆ ಚಿತ್ರೀಕರಣ ಆರಂಭವಾಗಲಿದೆ" ಎಂದರು ನಿರ್ದೇಶಕ ಮುರಳಿ.

ವಿ.ಮನೋಹರ್ ಸಂಗೀತ ನಿರ್ದೇಶನ ಹಾಗೂ ರಿಜೊ ಪಿ. ಜಾನ್ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಆಕಾಶ್ ಶೆಟ್ಟಿ ಹಾಗೂ ಛಾಯಾಶ್ರೀ ಚಿತ್ರದ ನಾಯಕ, ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ತೆರೆಗೆ ಬರಲು ಸಿದ್ಧನಾದ 'ಸತ್ಯ'

'ಕರಿಯ-2', 'ಗಣಪ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿರುವ ಸಂತೋಷ್ ಹಾಗೂ ರಂಜನಿ ರಾಘವನ್ ನಟನೆಯ 'ಸತ್ಯಂ' ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಸತ್ಯಂ ಚಿತ್ರಕ್ಕೆ ಅಶೋಕ್ ಕಡಬ ನಿರ್ದೇಶನವಿದೆ.

'ಇತ್ತೀಚೆಗಷ್ಟೇ ಚಿತ್ರದ ಟೀಸರ್ ಬಿಡುಗಡೆಗೊಂಡಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಎರಡು ಕಾಲಘಟ್ಟಗಳ ಕಥೆ ಇದಾಗಿದ್ದು, ಕರಾವಳಿ ಭಾಗದಲ್ಲಿ ನಡೆಯುವಂತಹ ಭೂತ ಕೋಲದ ಸನ್ನಿವೇಶಗಳು ಚಿತ್ರದಲ್ಲಿದೆ' ಎನ್ನುತ್ತಾರೆ ನಿರ್ದೇಶಕ ಅಶೋಕ್.

'ನನ್ನ ಹಿಂದಿನ ಎಲ್ಲಾ ಚಿತ್ರಗಳಿಗಿಂತ 'ಸತ್ಯಂ' ವಿಭಿನ್ನ ಪರಿಕಲ್ಪನೆಯ ಚಿತ್ರ. ಟೀಸರ್ ವೀಕ್ಷಿಸಿದವರ ಸಂಖ್ಯೆ 10 ಲಕ್ಷ ದಾಟಿದೆ. ನಮ್ಮ ತಂದೆ (ದಿ. ಆನೇಕಲ್ ಬಾಲರಾಜ್) ಕೂಡ ಕಥೆಯನ್ನು ಇಷ್ಟಪಟ್ಟಿದ್ದರು' ಎಂದು ನಾಯಕ ಸಂತೋಷ್ ಹೇಳಿದ್ದಾರೆ.

ಮಾಂತೇಶ್ ವಿ.ಕೆ. ಈ ಚಿತ್ರದ ನಿರ್ಮಾಪಕ. ಕನ್ನಡ ಹಾಗೂ ತೆಲುಗಿನಲ್ಲಿ 'ಸತ್ಯಂ' ರಿಲೀಸ್ ಆಗಲಿದೆ. ರವಿ ಬಸ್ರೂರು ಚಿತ್ರಕ್ಕೆ ಸಂಗೀತ ನೀಡಿದ್ದು, ಸಿನಿಟೆಕ್ ಸೂರಿ ಛಾಯಾಚಿತ್ರ-ಗ್ರಹಣವಿದೆ.



ರಂಜನಿ ರಾಘವನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2024ರ ಫೆ.1ರಂದು ಕೇಂದ್ರ ಬಜೆಟ್ ಅನ್ನು ಮಂಡಿಸಲಿದ್ದಾರೆ. ಈ ಬಜೆಟ್‌ನಲ್ಲಿ ಕಂಪನಿಗಳಲ್ಲಿ ಕೆಲಸದ ಅವಧಿ, ರಜೆ ಹಾಗೂ ಸಂಬಳಗಳು ಬದಲಾಗಬಹುದು. ಜುಲೈ 1ರಿಂದ ಕಂಪನಿಗಳು ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸಲಿದೆ. ಉದ್ಯೋಗಿಗಳು ದಿನದಲ್ಲಿ 10–12 ತಾಸುಗಳಂತೆ ವಾರದ ನಾಲ್ಕು ದಿನ ಕೆಲಸ ಮಾಡಬೇಕಾಗಬಹುದು. ಕಂಪನಿಗಳು, ಉದ್ಯೋಗಿಗಳಿಗೆ ವಾರದಲ್ಲಿ ಮೂರು ದಿನ ರಜೆ ನೀಡಲಿವೆ...' ಎಂಬಂಥ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ, ಇದು ಸುಳ್ಳು ಸುದ್ದಿ.



ಪೋಸ್ಟ್‌ನಲ್ಲಿ ಪ್ರಸ್ತಾಪಿಸಲಾದ ವಿಷಯಗಳ ಕುರಿತು ವಿಸ್ತೃತ ಹುಡುಕಾಟ ನಡೆಸಲಾಯಿತು. ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ವರದಿಗಳನ್ನು ಹುಡುಕಲಾಯಿತು. ಆದರೆ, ವಾರದ ರಜೆಯ ದಿನಗಳ ಹೆಚ್ಚಳದ ಕುರಿತು ಯಾವ ಪತ್ರಿಕೆಯಲ್ಲೂ ವರದಿ ಕಾಣಲಿಲ್ಲ. ಕೊನೆಯದಾಗಿ ಕೇಂದ್ರ ಹಣಕಾಸು ಸಚಿವಾಲಯವನ್ನೇ ಕೇಳಲಾಯಿತು. ಈ ರೀತಿಯ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿಲ್ಲ. ಇದು ಸುಳ್ಳು ಸುದ್ದಿ ಎಂದು ಸಚಿವಾಲಯವು ಉತ್ತರಿಸಿತು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ನಾವು ಕಳೆದುಕೊಳ್ಳುತ್ತಿರುವುದೇನು?



ನುಡಿ ಬೆಳಗು

ಪ್ರೊ.ಎಂ. ಕೃಷ್ಣೇಗೌಡ

ಮೊನ್ನೆ ಮೊನ್ನೆ ನಮ್ಮೂರಿಗೆ ಮಳೆ ಬಂದಾಗ ಯಾಕೋ ನೆನಪಾಯಿತು- 'ಈ ಮಳೆಯಲ್ಲಿ ತೊಯ್ದು ತಪ್ಪಡಿಯಾಗಿ ಓಡಾಡಿ ಎಷ್ಟೋ ವರ್ಷಗಳಾಗಿ ಹೋಯಿತಲ್ಲಾ?!' ನಾವು ಗಟ್ಟಿಮುಟ್ಟು ಮನೆ ಕಟ್ಟಿಕೊಂಡ ಮೇಲೆ, ಕಾರು ಕೊಂಡ ಮೇಲೆ ಮಳೆಗೆ ನಾವು ತೋಯುವುದೇ ಇಲ್ಲ. ಕಾರಲ್ಲೊಂದು ಸಣ್ಣ ಛತ್ರಿ ಇಟ್ಟುಕೊಂಡಿದ್ದರೆ ಮಳೆಯ ಹನಿಗಳು ಕೂಡಾ ನಮ್ಮನ್ನು ಮುಟ್ಟುವುದಿಲ್ಲ. ನಮಗೆ ಬಯಲಲ್ಲಿ ಓಡಾಡುವಾಗಲೋ, ಸೈಕಲ್ ತುಳಿಯುವಾಗಲೋ ಮಳೆ ಬಂದರೆ ಆ ಮಳೆಯ ನೀರು ನಮ್ಮ ಅಂಗಾಗಗಳಲ್ಲೆಲ್ಲಾ ಹರಿದಾಡಿಬಿಡುತ್ತಿತ್ತು. ಈಗ ಮಳೆಗೂ ಆ ಪ್ರೀತಿಯಿಲ್ಲ, ನಮಗೂ ಆ ಭಾಗ್ಯವಿಲ್ಲ.

ಬೇಸಿಗೆಯನ್ನು ಕೂಡಾ ಬೀದಿಪಾಲು ಮಾಡಿದ್ದೇವೆ ನಾವು. ನಮ್ಮ ಕಾರು ಮನೆಗಳಲ್ಲಿರುವ ಎ.ಸಿ ಫ್ಯಾನುಗಳು ಬೇಸಿಗೆಯ ಅನುಭವವನ್ನೂ ಕಿತ್ತುಕೊಂಡಿವೆ. ನಮ್ಮ ಮೈಯಿ ಬೆವರುವುದನ್ನೂ ಮರೆತು ಕೂತಿದೆ.

ಈಗ ಚಳಿ ಕಾಲಿಕ್ಕಿದೆ. ನಮಗೆ ಮೂಗು ಸೋರುವುದು, ಗಂಟಲು ನೋಯುವುದು, ತುಟಿ ಒಡೆಯುವುದು, ಕೈಕಾಲು ಹುರುಪೇಳುವುದು ಈ ಚಳಿಗಾಲದಲ್ಲೇ. ಹೊಲಗದ್ದೆಗಳಲ್ಲಿ ಅವರೆಕಾಯಿಗೆ ಸೊನೆ ಬೀಳಬೇಕಾದರೆ ಈ ಚಳಿ, ಇಬ್ಬನಿ ಎಲ್ಲಾ ಬೇಕು. ಆದರೆ ಈ ಚಳಿ ಕೂಡಾ ಬಯಲು ಬೀದಿಗಳಲ್ಲೇ ಬದುಕಿ ಅಲ್ಲೇ ಮುದುಡಿ ಮಲಗಬೇಕು ಹಾಗೆ ಮಾಡಿಟ್ಟಿದ್ದೇವೆ. ಮನೆಯೊಳಗೆ, ಕಾರುಗಳಲ್ಲಿ ಈ ಹೀಟರು ಗೀಟರುಗಳನ್ನು ಹಾಕಿಬಿಟ್ಟರೆ ಪಾಪ, ಚಳಿ ಸತ್ತೇ ಹೋಗುತ್ತದೆ. ಹೊರಗೆ ಹೋದಾಗಲೂ ಚಳಿಗೆ, 'ನಮ್ಮನ್ನು ಮುಟ್ಟಿದರೆ ಹುಷಾರ್!' ಎಂದು ಹೆದರಿಸಿಬಿಟ್ಟಿದ್ದೇವೆ. ನಮ್ಮ ಸ್ವೆಟರು, ಶಾಲು, ಕೈಗವಸು, ಕಾಲುಚೀಲ, ಕೋತಿಕುಲಾವಿಗಳನ್ನು (ಮಂಕಿ ಕ್ಯಾಪ್) ದಾಟಿ ಚಳಿ ನಮ್ಮ ಮೈಮುಟ್ಟುವುದು ಹೇಗೆ ಹೇಳಿ?

ಅಂತೂ ನಮ್ಮ ನಾಗರಿಕತೆ ವಿಜ್ಞಾನ, ತಂತ್ರಜ್ಞಾನಗಳೆಲ್ಲಾ ಸೇರಿ ನಮ್ಮ ಋತುಮಾನ ನಮ್ಮನ್ನು, ನಾವು ನಮ್ಮ ಋತುಮಾನಗಳನ್ನು ಮುಟ್ಟತಟ್ಟಿ ಮಾತಾಡಿಸದ ಹಾಗೆ ಮಾಡಿಬಿಟ್ಟಿವೆ. ನಮಗೂ ನಮ್ಮ ಹವಾಮಾನ ಋತುಮಾನಗಳಿಗೂ ಪರಸ್ಪರ ಪರಿಚಯವೇ ಮರೆತುಹೋದಂತಾಗಿದೆ.

ಈಚೀಚೆಗೆ ಚಳಿ ಮೊದಲಿನಷ್ಟಿಲ್ಲ ಅನ್ನುತ್ತಾರೆ ಕೆಲವರು. ಇರಬಹುದು. ತನಗೆ ಮರ್ಯಾದೆ ಇಲ್ಲದ ಜಾಗಕ್ಕೆ ಅದಾದರೂ ಯಾಕೆ ಬಂದೀತು ಹೇಳಿ. ಆಧುನಿಕರಾದ ನಾವು ಸದಾ ಹೊಸಹೊಸದನ್ನು ಪಡೆದುಕೊಳ್ಳುವ ಸಂಭ್ರಮದಲ್ಲಿರುತ್ತೇವೆ. ಅದು ಸಹಜವೇ. ಆದರೆ ಈ ಪಡೆದುಕೊಳ್ಳುವ ಭರದಲ್ಲಿ ಕಳೆದುಕೊಳ್ಳುತ್ತಿರುವುದೇನು ಎಂದು ಕೂಡಾ ಅವಾಗೀವಾಗ ಆಲೋಚನೆ ಮಾಡಬೇಕಲ್ಲವೆ? ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಡಿಸೆಂಬರ್ 15, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ತೃತೀಯ ಗಂ. 22-31 ನಕ್ಷತ್ರ: ಪೂರ್ವಾಷಾಢ ಗಂ. 08-11 ನಂತರ ಉತ್ತರಾಷಾಢ ಗಂ. 30-25 ಯೋಗ: ವೃದ್ಧಿ ಗಂ 10-17 ಕರಣ: ತೈತಿಲ ಗಂ. 11-45, ವೃಶ್ಚಿಕ ಮಾಸದ 29 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 4, ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ: 06-49 **ಸೂರ್ಯಾಸ್ತ:** 06-02

ಮುಸ್ಲಿಂ ದಿನಾಂಕ : 01 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 6, 2

ಮೇಷ: ದೊಡ್ಡ ವಿಚಾರವೊಂದಕ್ಕೆ ಕೈ ಹಾಕಬೇಕಾಗಬಹುದು. ಅದಕ್ಕಿಂತ ಮೊದಲಾಗಿ ಆತ್ಮ ಸಂಯಮ ರೂಢಿಸಿ ಕೊಳ್ಳಬೇಕಾದ ಅಗತ್ಯವಿದೆ. ಬಂಧುಗಳ ಮನೆಯ ಸತ್ಕಾರ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ.

ವೃಷಭ: ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ಸಿಗುವ ಮುನ್ಸೂಚನೆ. ವಿವಾಹ ಯೋಗ್ಯ ವಯಸ್ಕರಿಗೆ ಮನುಷ್ಯ ಪ್ರಯತ್ನವಿದ್ದರೆ ಮದುವೆ ನಿಶ್ಚಯವಾಗುವುದು. ಕಬ್ಬಿಣ ಅಥವಾ ಗ್ಲಾಸ್‌ಗಳಿಂದ ಗಾಯಗಳಾಗುವ ಲಕ್ಷಣಗಳಿವೆ.

ಮಿಥುನ: ಸರಿಸಮಾನ ಮನಸ್ಸನ್ನು ಹೊಂದಿದವರಲ್ಲಿ ಒಪ್ಪಂದ ವ್ಯವಹಾರ ನಡೆಸಬಹುದು. ನಿಮಗೆ ಕಾಡುವ ಸಮಸ್ಯೆಯಿಂದಾಗಿ ಯಾರಲ್ಲೂ ನಂಬಿಕೆ ಇಡದಂಥ ಪರಿಸ್ಥಿತಿ ತೋರಿಬರುವುದು. ಆತ್ಮ ಬಲದ ಮೇಲೆ ನಂಬಿಕೆ ಇಡಿ.

ಕರ್ಕಾಟಕ: ಆಳವಾದ ಅಧ್ಯಯನದಲ್ಲಿ ತೊಡಗಿದವರಿಗೆ ಆಶ್ಚರ್ಯಕರ ವಿಷಯ ತಿಳಿಯಲಿದೆ. ನಿಮ್ಮನ್ನು ನೀವೇ ವಿಮರ್ಶಿಕೊಳ್ಳಿ. ನಿಮ್ಮ ಸರಿ ತಪ್ಪುಗಳು ನಿಮಗೇ ಅರಿವಾಗುವುದು. ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರವು ಸಿಗಲಿದೆ.

ಸಿಂಹ: ಹೊಸ ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಈ ದಿನ ಫಲ ನೀಡಲಿದೆ. ಇನ್ನೊಬ್ಬರನ್ನು ಅರ್ಥೈಸಿಕೊಳ್ಳುವ ಗುಣ ನಿಮ್ಮಲ್ಲಿ ಕಡಿಮೆಯಾಗಲಿದೆ. ವ್ಯವಹಾರ ನಡೆಸುವುದಕ್ಕಾಗಿ ಸಾಲ ತೆಗೆದುಕೊಳ್ಳಬೇಡಿ.

ಕನ್ಯಾ: ಒದಗಿ ಬರಲಿರುವ ಅವಕಾಶವನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ವೃತ್ತಿ ಪರವಾಗಿ ಯಾವುದೇ ಬದಲಾವಣೆಗೆ ಇಂದು ಸಮಂಜಸ ದಿನವಾಗಿರುವುದಿಲ್ಲ. ಲಕ್ಷ್ಮೀ ನರಸಿಂಹನನ್ನು ಆರಾಧಿಸಿ ಶುಭವಾಗುವುದು.

ತುಲಾ: ಶೀಘ್ರ ಹಾಗೂ ಕಾಲಕ್ಕೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ಹಣ ಕಾಸಿನ ಲಾಭವನ್ನು ತರಲಿದೆ. ನಿಮ್ಮ ವಾಕ್ಚಾತುರ್ಯಕ್ಕೆ ಸಾಮಾಜಿಕವಾಗಿ ಗೌರವ ಪ್ರಶಂಸೆಗಳು ಉಂಟಾಗುವುದು. ನಿಮ್ಮ ಅದೃಷ್ಟದ ಪರೀಕ್ಷೆ ನಡೆಯಲಿದೆ.

ವೃಶ್ಚಿಕ: ಮುಕ್ತ ಮಾತುಕತೆಯಿಂದ ಕಾರ್ಮಿಕರ ಸಮಸ್ಯೆ ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಸುವುದು ಬುದ್ಧಿವಂತಿಕೆ ಲಕ್ಷಣ. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಧನು: ನೇರ ನಡೆ ನುಡಿಯಿರುವವರೊಂದಿಗೆ ಮಾತ್ರ ವ್ಯವಹಾರ ಮುಂದುವರೆಸಿಕೊಂಡು ಹೋಗುವುದು ಉತ್ತಮ. ಸಹೋದರರಲ್ಲಿ ಅಥವಾ ಮನೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯ, ವಾದ ವಿವಾದ, ಕಲಹಗಳು ಇಲ್ಲವಾಗುವುದು.

ಮಕರ: ರಾಜಕೀಯ ವಲಯದಲ್ಲಿ ಉಂಟಾಗುವ ಸಣ್ಣ ಪುಟ್ಟ ಬದಲಾವಣೆಯನ್ನೂ ಗಮನಿಸಿ, ನಂತರದಲ್ಲಿ ಬೆಂಬಲಿಸುವ ಕೆಲಸ ಮಾಡಿ. ಕುಟುಂಬದ ಸದಸ್ಯರೊಂದಿಗೆ ನಿಮ್ಮ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವಿರಿ.

ಕುಂಭ: ನಿಮ್ಮ ಕೃಷಿ ಪ್ರದೇಶವನ್ನು ವ್ಯವಸ್ಥಿತ ರೀತಿಯಲ್ಲಿಡಲು ತೀರ್ಮಾನಿಸುವುದು ಉತ್ತಮ. ಎದುರಾಗುವ ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸಿ. ಧೈರ್ಯ ಮತ್ತು ಜನರನ್ನು ಸಂಬಾಳಿಸುವ ಶಕ್ತಿಯನ್ನು ಹೊಂದುವಿರಿ.

ಮೀನ: ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿಕೊಂಡು ಉಳಿತಾಯದ ತೀರ್ಮಾನ ಕೈಗೊಳ್ಳುವುದು ಉತ್ತಮ. ಕೆಲವೊಂದು ಸಾಂಸಾರಿಕ ಸಮಸ್ಯೆಗಳಿಗೆ ಈ ದಿನ ನೀವು ಅತ್ಯಂತ ಭಾವುಕರಾಗುವಂತಾಗುವುದು.

ಪದಬಂಧ 5530


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪಾರಮಾರ್ಥಿಕವಲ್ಲ! ಮಣ್ಣಿಗೆ ಸಂಬಂಧಿಸಿದ್ದು! (3)
3.ಮಧುರವಾದ ಧ್ವನಿ (4)
5.ಗುಜರಿ ಸೇರುವಷ್ಟು ಭಗ್ನಗೊಂಡಿರುವುದು (4)
7.ಇದು ಕನ್ನಡಿಗನ ಕಮಿಟಿ (3)
8.ಯಾವುದೇ ತಪ್ಪು ಮಾಡದ ನಿರ್ದೋಷಿ (5)
10.ಆಕೆಯದ್ದು ಕಕ್ಷೆಗೇರುವ ಬಯಕೆ! (3)
11.ಎಲ್ಲರೂ ಸಭೆ ಸೇರಿರುವ ಸ್ಥಳ (4)
15.ಕೊನೆಗೆ ಪ್ರಾಣವಿಟ್ಟು ಒತ್ತಿ ಉಚ್ಚರಿಸುವ ಅಕ್ಷರ (4)
16.ಉಸುಕಿರುವ ಕಡೆ ಪ್ರದರ್ಶಿತವಾದ ಶಕ್ತಿ! (3)

ಮೇಲಿಂದ ಕೆಳಕ್ಕೆ

1.ದ್ರವರೂಪದಲ್ಲೇ ಕಾಣಿಸುವ ಲೋಹ (3)
2.ಬಲ್ಲವರಿಗಾಗಿ ಹಬ್ಬಿರುಸಿರುವ ಬಳ್ಳಿ (3)
3.ಕೆಮ್ಮಿದಾಗ ಹೊರಬೀಳುವ ಶ್ಲೇಷ್ಮ (2)
4.ವರ್ಧಂತಿ ಎಂದದ್ದು ಬರೀ ಗಾಳಿಸುದ್ದಿ! (3)
6.ತವರು ಮನೆಯಲ್ಲಿರುವ ಲೋಹ (3)
7.ಏಕಾಗ್ರತೆಯಿಂದ ನಿರ್ಮಿಸಿರುವ ಗೋರಿ (3)
8.ನಿರೀಕ್ಷಕನ ಬರುವಿಕೆಗೆ ಆಸೆಯಿಂದ ಇದಿರು ನೋಡುವಿಕೆ (3)
9.ಸಾಕ್ಷರನ ಮುಂದಿರುವ ಅಸುರ (3)
10.ಶ್ರಮವಹಿಸಿ ಕಟ್ಟಿರುವ ಋಷಿಯ ವಾಸಸ್ಥಾನ (3)
12.ಈತ ಅತ್ಯಂತ ಭಾವಜೀವಿ (3)
13.ಹಾವು ಸೇರಿಕೊಂಡಿರುವ ಕಣಜ (3)
14.ಕಾಜಾಣ ಹಿಡಿದ ಬುದ್ಧಿವಂತ! (2)



5529ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಿರಿದುರ್ಗ 2.ಜಲಜ
4.ಅವರೋಹ 7.ಪ್ರತಿಫಲ
9.ನವಯೌವನ
12.ಸ್ವಾಭಿಮಾನ 13.ರುಷುವತ್ತು
15.ತಣ್ಣೀರು 16.ಬಾಲರವಿ

ಮೇಲಿಂದ ಕೆಳಕ್ಕೆ:
1.ಗಿರ್ಧಾರಿಂಅ 3.ಜಟಿಲ
5.ವರ 6.ಹಯವದನ
7.ಪ್ರಭಾವಬೀರು 8.ಫಲ
10.ನಾಭಿ 11.ನವ
12.ಸ್ವಾಗತ 14.ತ್ತುಪವಿ

ಸುಡೊಕು 5916

1		9		2			8	
					9		5	2
	8	2		4	5			
2							6	
		4		3				1
5					2			
		5		9			7	6
7			2		6	8		
	4			7			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5915 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಮಧ್ಯವಾರ್ಷಿಕ ಹಣಕಾಸು ಪರಿಶೀಲನಾ ವರದಿ ಮಂಡನೆ: ಅರ್ಧ ವರ್ಷದಲ್ಲಿ 1.05 ಲಕ್ಷ ಕೋಟಿ ರಾಜಸ್ವ ಸಂಗ್ರಹ

ವಿದೇಶಿ ಬಂಡವಾಳ ಶೇ 46ರಷ್ಟು ಕುಸಿತ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ರಾಜ್ಯದಲ್ಲಿ ವಿದೇಶಿ ನೇರ ಹೂಡಿಕೆಯು (ಎಫ್‌ಡಿಐ) ಕಳೆದ ಆರ್ಥಿಕ ವರ್ಷದ ಮೊದಲ ಆರು ತಿಂಗಳಿಗೆ ಹೋಲಿಸಿದರೆ ಪ್ರಸಕ್ತ ವರ್ಷದ ಮೊದಲ ಆರು ತಿಂಗಳಲ್ಲಿ ಶೇಕಡ 46ರಷ್ಟು ಕುಸಿತವಾಗಿದೆ ಎಂದು ಹಣಕಾಸು ಇಲಾಖೆಯು ಮಂಡಿಸಿರುವ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ ಹೇಳಿದೆ.

ವರದಿಯನ್ನು ಗುರುವಾರ ಸದನದಲ್ಲಿ ಮಂಡಿಸಿದ್ದು, '2022-23ರ ಮೊದಲ ಆರು ತಿಂಗಳಲ್ಲಿ 5.3 ಶತಕೋಟಿ ಡಾಲರ್‌ಗಳಷ್ಟು ಎಫ್‌ಡಿಐ ರಾಜ್ಯಕ್ಕೆ ಬಂದಿತ್ತು. ಆದರೆ, 2023-24ರ ಮೊದಲ ಆರು ತಿಂಗಳಲ್ಲಿ 2.8 ಶತ ಕೋಟಿ ಡಾಲರ್ ಮಾತ್ರ ಹೂಡಿಕೆ ಹರಿದುಬಂದಿದೆ. 2.5 ಶತ ಕೋಟಿ ಡಾಲರ್‌ನಷ್ಟು ಕುಸಿತ ಕಂಡುಬಂದಿದೆ' ಎಂಬ ಅಂಶ ಅದರದಲ್ಲಿದೆ.

ಗ್ಯಾರಂಟಿಗಳಿಗೆ ₹5,887 ಕೋಟಿ ವೆಚ್ಚ (ಸೆಪ್ಟೆಂಬರ್‌ವರೆಗೆ)

ಶಕ್ತಿ	₹785.48
ಗೃಹ ಜ್ಯೋತಿ	₹1,401.55
ಅನ್ನ ಭಾಗ್ಯ	₹1,802.58
ಗೃಹ ಲಕ್ಷ್ಮಿ	₹1,897.28

ಮುಂದುವರಿದ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆ ಕುಂಠಿತವಾಗಿರುವುದೇ ಎಫ್‌ಡಿಐ ಹರಿವು ಕುಸಿಯಲು ಕಾರಣ. ದೇಶದ ನವೋದ್ಯಮಗಳ ರಾಜಧಾನಿ ಎಂದು ಹೆಸರಾಗಿರುವ ಬೆಂಗಳೂರಿಗೆ ಇದರಿಂದ ತೊಂದರೆಯಾಗಲಿದೆ. ಮೊದಲ ಆರು ತಿಂಗಳ ಅವಧಿಯಲ್ಲಿ ನವೋದ್ಯಮಗಳಿಗೆ ಹರಿದುಬಂದ ಎಫ್‌ಡಿಐ ಪ್ರಮಾಣದಲ್ಲಿ ಶೇ 80ರಷ್ಟು ಕುಸಿತವಾಗಿದೆ. ಜಗತ್ತಿನ ಪ್ರಮುಖ ಮಾಹಿತಿ ತಂತ್ರಜ್ಞಾನ ಉದ್ದಿಮೆಗಳನ್ನು ಹೊಂದಿರುವ ರಾಜ್ಯದ ಮೇಲೆ ಆರ್ಥಿಕ ಕುಸಿತದ ಪರಿಣಾಮಗಳಾಗಲಿವೆ ಎಂದು ವರದಿ ತಿಳಿಸಿದೆ.

ಸೆಪ್ಟೆಂಬರ್‌ವರೆಗೆ ತೆರಿಗೆ ಸಂಗ್ರಹದ ವಿವರ (₹ ಕೋಟಿಗಳಲ್ಲಿ)

ತೆರಿಗೆ ವಿಧ	2022-23	2023-24	ಕಳೆದ ವರ್ಷಕ್ಕೆ ಹೋಲಿಸಿದರೆ ಬೆಳವಣಿಗೆ
ವಾಣಿಜ್ಯ ತೆರಿಗೆ	38,935	44,831	15.1%
ಅಬಕಾರಿ ತೆರಿಗೆ	14,711	16,611	12.9%
ನೋಂದಣಿ ಮತ್ತು ಮುದ್ರಾಂಕ	8,229	9,344	14%
ಮೋಟಾರು ವಾಹನ ತೆರಿಗೆ	4,479	5,244	46%
ಇತರ	380	855	125%
ಒಟ್ಟು	66,735	76,885	15.2%

ಶೇ 44.9ರಷ್ಟು ಗುರಿ ಸಾಧನೆ: ಆರ್ಥಿಕ ವರ್ಷದ ಮೊದಲ ಅರ್ಧ ಭಾಗದಲ್ಲಿ ₹ 1.05 ಲಕ್ಷ ಕೋಟಿ ರಾಜಸ್ವ ಸಂಗ್ರಹವಾಗಿದೆ. ಇದರಲ್ಲಿ ₹ 76,885 ಕೋಟಿ ಸ್ವಂತ ತೆರಿಗೆ ರಾಜಸ್ವ ಮತ್ತು ₹ 6,519 ಕೋಟಿ ಸ್ವಂತ ತೆರಿಗೆಯೇತರ ರಾಜಸ್ವ ಸಂಗ್ರಹವಾಗಿದೆ. ಸ್ವಂತ ತೆರಿಗೆ ರಾಜಸ್ವ ಸಂಗ್ರಹದಲ್ಲಿ ಗುರಿಗೆ ಹೋಲಿಸಿದರೆ ಶೇಕಡ 44.9ರಷ್ಟು ಸಾಧನೆಯಾಗಿದೆ ಎಂಬ ವರದಿಯಲ್ಲಿದೆ.

ಈ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ₹ 98,070 ಕೋಟಿ ರಾಜಸ್ವ ವೆಚ್ಚ ಮಾಡಲಾಗಿದೆ. ಬಂಡವಾಳ ವೆಚ್ಚವೂ ಸೇರಿದರೆ ₹ 1,08,362 ಕೋಟಿ ವಿನಿಯೋಗಿಸಲಾಗಿದೆ. ಸಾರ್ವಜನಿಕ ಸಾಲದ ಮೇಲಿನ ವೆಚ್ಚವೂ ಸೇರಿದರೆ ಒಟ್ಟು ವೆಚ್ಚದ ಮೊತ್ತ ₹ 1,13,716 ಕೋಟಿಗಳಷ್ಟಾಗಿದೆ.

ಅನರ್ಹ ಬಿಪಿಎಲ್ ಪಡಿತರ ಚೀಟಿ ರದ್ದತಿಗೆ ಪರಿಶೀಲನಾ ವರದಿ ಶಿಫಾರಸು



ರಾಜ್ಯವು ದೇಶದಲ್ಲಿ ಎರಡನೇ ಅತಿ ಹೆಚ್ಚು ತಲಾ ಆದಾಯ ಹೊಂದಿರುವ ರಾಜ್ಯ. ಆದರೆ, ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಸಂಖ್ಯೆಯೂ ಹೆಚ್ಚಿದೆ. ಆದ್ದರಿಂದ ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಬೇಕು ಎಂದು ಮಧ್ಯವಾರ್ಷಿಕ ಪರಿಶೀಲನಾ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಇತರ ಶಿಫಾರಸುಗಳು

- ಕರ್ನಾಟಕ ವಿದ್ಯುತ್ ನಿಗಮದ ಆರ್ಥಿಕ ಸ್ಥಿತಿ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು.
- ಆಸ್ತಿ ನಗದೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು.
- ಮಹಾರಾಷ್ಟ್ರ ಮಾದರಿಯಲ್ಲಿ ಕಸ್ಟಮ್ಸ್ ಅಧಿಕಾರಿಗಳ ನೆರವಿನಲ್ಲಿ ಆಮದು ವಸ್ತುಗಳ ಮೇಲಿನ ಸುಂಕ ಸಂಗ್ರಹಿಸಬೇಕು.

ಸುದ್ದಿ 2 ನಿಮಿಷ

4 ಲಕ್ಷ ಕೃಷಿ ಪಂಪ್‌ಸೆಟ್ ವಿದ್ಯುತ್ ಸಂಪರ್ಕ ಸಕ್ರಮ: ಸಚಿವ ಜಾರ್ಜ್

ವಿಧಾನಸಭೆ: ಸೆಪ್ಟೆಂಬರ್ 22 ರವರೆಗೆ ನೋಂದಣಿಯಾಗಿರುವ 4 ಲಕ್ಷಕ್ಕೂ ಅಧಿಕ ಕೃಷಿ ಪಂಪ್‌ಸೆಟ್‌ಗಳ ಸಂಪರ್ಕಗಳನ್ನು ಸಕ್ರಮಗೊಳಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಭರವಸೆ ನೀಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಭರಮಗೌಡ ಅಲಗೌಡ ಕಾಗೆ (ರಾಜು ಕಾಗೆ) ಅವರ ಪ್ರಶ್ನೆಗೆ ಉತ್ತರಿಸಿ, ಕೃಷಿ ಪಂಪ್‌ಸೆಟ್‌ಗಳಿಗೆ 500 ಮೀಟರ್‌ಗಿಂತ ಕಡಿಮೆ ವ್ಯಾಪ್ತಿಯಲ್ಲಿ ಲೈನ್ ಹಾಕಬೇಕಿದ್ದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳೇ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಿವೆ ಎಂದು ಹೇಳಿದರು.

ವ್ಯಾಪ್ತಿ 500 ಮೀಟರ್‌ಗಳಿಗಿಂತ ಹೆಚ್ಚಿದ್ದಲ್ಲಿ ಜಾಲಮುಕ್ತ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುವುದು. ಈ ಹಿಂದೆ ನೋಂದಣಿ ಮಾಡುವ ಸಂದರ್ಭದಲ್ಲಿ ಪಾವತಿಸಲಾದ ಹಣವನ್ನು ರೈತರಿಂದ ಸಂಗ್ರಹಿಸುವಾಗ ಶೇ 20ರ ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುವುದು ಎಂದು ಜಾರ್ಜ್ ತಿಳಿಸಿದರು.

ಸೌರ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿದ್ದ ಸಹಾಯಧನದ ಮೊತ್ತವನ್ನು ಶೇ 30ರಿಂದ ಶೇ 50ಕ್ಕೆ ಹೆಚ್ಚಿಸಲಾಗಿದೆ. ರೈತರಿಗೆ ಒಟ್ಟು ಶೇ 80 ರಷ್ಟು ಸಹಾಯಧನ ಸಿಗುತ್ತದೆ ಎಂದು ವಿವರಿಸಿದರು.

ಈಗಾಗಲೇ ನೋಂದಣಿ ಮಾಡಿರುವ ಕೃಷಿ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಅಳವಡಿಸುವ ಕಾಮಗಾರಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದು ಜ್ಯೇಷ್ಠತೆ ಆಧಾರದಲ್ಲಿ ಹಂತ ಹಂತವಾಗಿ ಕೈಗೊಳ್ಳುತ್ತಿವೆ ಎಂದರು.



ಗಾಂಧೀಜಿ ಭೇಟಿ ನೀಡಿದ ಜಾಗಗಳ ಅಭಿವೃದ್ಧಿ: ನಿರ್ಣಯ

ವಿಧಾನಸಭೆ: ಮಹಾತ್ಮಾಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ 100 ವರ್ಷ ತುಂಬುತ್ತಿರುವ ನೆನಪಿನಲ್ಲಿ ಸ್ಮಾರಕ ನಿರ್ಮಾಣ ಮತ್ತು ಗಾಂಧಿಯವರು ಭೇಟಿ ನೀಡಿದ ಸ್ಥಳಗಳ ಅಭಿವೃದ್ಧಿಗೆ ವಿಶೇಷ ಅನುದಾನ ಒದಗಿಸಲು ಸರ್ವಾನುಮತದ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಬಿಜೆಪಿಯ ಅಭಯಪಾಟೀಲ ಅವರು ಈ ಕುರಿತು ಖಾಸಗಿ ನಿರ್ಣಯವನ್ನು ಮಂಡಿಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರ ಇದಕ್ಕಾಗಿ ತಲಾ ₹100 ಕೋಟಿಯನ್ನು ನೀಡಬೇಕು. ಇದಕ್ಕೆ ಸಮಗ್ರ ಯೋಜನೆ ರೂಪಿಸಬೇಕು ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಸ್ಮಾರಕ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಬಹುದು. ಕೇಂದ್ರದ ಮೇಲೂ ಒತ್ತಡ ಹೇರಬಹುದು ಎಂದು ಹೇಳಿದರು.

ಜೆಜೆಎಂ: 6 ತಿಂಗಳಲ್ಲಿ ತನಿಖಾ ವರದಿ

ವಿಧಾನಸಭೆ: ಮನೆಮನೆಗೆ ನೀರು ಪೂರೈಸುವ ಜಲಜೀವನ್ ಮಿಷನ್ (ಜೆಜೆಎಂ) ಅನುಷ್ಠಾನದಲ್ಲಿ ನಡೆದ ಅಕ್ರಮದ ಬಗ್ಗೆ ಬ್ಯುರೊ ವೆರಿಟಾಸ್ ಎಂಬ ಮೂರನೇ ಸಂಸ್ಥೆ ತನಿಖೆ ನಡೆಸುತ್ತಿದ್ದು, ಆರು ತಿಂಗಳಲ್ಲಿ ವರದಿ ಬರಲಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಮೇಲೆ ಮಾತನಾಡಿದ ಬಿಜೆಪಿಯ ಸಿದ್ಧು ಸವದಿ, ಯೋಜನೆಗೆ ಬಳಸಲಾದ ನಲ್ಲಿ, ಸ್ತಂಭ, ಪೈಪ್‌ಗಳು ಕಳಪೆಯಾಗಿದೆ. ಕೈಯಲ್ಲಿ ಮುಟ್ಟಿದರೆ ಮುರಿದು ಹೋಗುವಂತಿವೆ. ಟೆಂಡರ್ ನಡೆದು ನಾಲ್ಕು ವರ್ಷ ಆದರೂ ಅನೇಕ ಹಳ್ಳಿಗಳಿಗೆ ನೀರು ತಲುಪಿಲ್ಲ ಎಂದರು.

ಮಧ್ಯಪ್ರವೇಶಿಸಿದ ಪ್ರಿಯಾಂಕ್, '1500 ಹಳ್ಳಿಗಳಿಗೆ ಖುದ್ದು ಭೇಟಿ ನೀಡಿ, ನಲ್ಲಿ, ಪೈಪ್‌ಗಳ ಫೋಟೋ ತೆಗೆದು, ಗುಣಮಟ್ಟ ಪರಿಶೀಲಿಸುವ ಕೆಲಸವನ್ನು ಸಂಸ್ಥೆ ವಹಿಸಿ ಒಂದೂವರೆ ತಿಂಗಳಾಗಿದೆ. ಬಳಸಲಾದ ಸಾಮಗ್ರಿಗಳ ಮಾದರಿಗಳನ್ನು ಸಂಸ್ಥೆ ತಮಗೆ ಸಲ್ಲಿಸಿದೆ. ಕಳಪೆ ಕಾಮಗಾರಿ ನಡೆದಿರುವುದು ಸಾಬೀತಾಗಿದೆ' ಎಂದು ಕೋರಿದರು.

ಸಾಗುವಳಿಗೆ ನಿರಾಕ್ಷೇಪಣಾ ಪತ್ರ: ಜಂಟಿ ಸರ್ವೆ

ವಿಧಾನಸಭೆ: ಅರಣ್ಯ ಪ್ರದೇಶದ ಗಡಿಯಾಚೆ ಇರುವ ಕೃಷಿ ಜಮೀನಿಗೆ ಸಾಗುವಳಿ ಚೀಟಿ ನೀಡುವ ಸಂಬಂಧ ರೈತರಿಗೆ ನಿರಾಕ್ಷೇಪಣಾ ಪತ್ರ ವಿತರಿಸಲು ಕಂದಾಯ ಮತ್ತು ಅರಣ್ಯ ಇಲಾಖೆಗಳು ಕಾಲಮಿತಿಯಲ್ಲಿ ಜಂಟಿ ಸರ್ವೆ ನಡೆಸಲು ನಿರ್ದೇಶನ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಭರವಸೆ ನೀಡಿದರು.

ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಹರೀಶ್ ಪೂಂಜಾ ಪ್ರಶ್ನೆಗೆ ಉತ್ತರಿಸಿ, ಈ ಉದ್ದೇಶಕ್ಕಾಗಿ ಅರಣ್ಯ ಭೂಮಿ ಗಡಿ ಗುರುತಿಸಿ ನಿಖರ ನಕ್ಷೆಯನ್ನು ಜಂಟಿ ಸರ್ವೆ ಮೂಲಕ ರೂಪಿಸಲಾಗುವುದು ಎಂದರು.

ಜಿಲ್ಲಾ ಅರಣ್ಯ ಅಥವಾ ರಕ್ಷಿತ ಅರಣ್ಯಕ್ಕೆ ಹೊಂದಿಕೊಂಡಂತೆ ಹಾಗೂ 100 ಮೀಟರ್ ವ್ಯಾಪ್ತಿಯಲ್ಲಿದ್ದಾಗ ಮಂಜೂರಾತಿ ಪೂರ್ವದಲ್ಲಿ ಆ ಪ್ರದೇಶದ ಕರ್ತವ್ಯ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸಮ್ಮತಿ ಪಡೆಯಬೇಕಾಗುತ್ತದೆ. ಸದ್ಯಕ್ಕೆ ಅರಣ್ಯ ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳಾದ ಅಧಿಸೂಚನೆಗಳು ಹಾಗೂ ನಕಾಶೆಗಳೊಂದಿಗೆ ಪರಿಶೀಲಿಸಿ ಕೋರಿಕೆ ಸಲ್ಲಿಸಿದ ಜಾಗವು ಅರಣ್ಯ ಪ್ರದೇಶದ ವ್ಯಾಪ್ತಿಗೆ ಬರುತ್ತದೆಯೋ ಇಲ್ಲವೊ ಎಂಬುದನ್ನು ಹಿಂಬರಹದ ಮೂಲಕ ನೀಡಲಾಗುತ್ತಿದೆ ಎಂದು ಖಂಡ್ರೆ ವಿವರಿಸಿದರು.

'ಉತ್ತರದ ಅಭಿವೃದ್ಧಿಗೆ ಹೋರಾಟವೇ ದಾರಿ'

ದಕ್ಷಿಣದ ಜಿಲ್ಲೆಯವರಿಗೆ ರಾಜಧಾನಿ ಹತ್ತಿರ, ಉತ್ತರದವರನ್ನು ಗುರುತಿಸುವವರೇ ಇಲ್ಲ: ಪಾಟೀಲ

ಪ್ರಜಾವಾಣಿ ವಾರ್ತೆ



ಬಿ.ಆರ್. ಪಾಟೀಲ

ವಿಧಾನಸಭೆ: ದಕ್ಷಿಣದ ಸಮಸ್ಯೆಗಳ ಬಂದಾಗ ಜನ ಪ್ರತಿನಿಧಿಗಳು, ಸಂಘಟನೆಗಳು ಒಗ್ಗಟ್ಟಿನ ಹೋರಾಟ ನಡೆಸುತ್ತಾರೆ. ಹೋರಾಟ ಮಾಡದೇ ನ್ಯಾಯ ಸಿಗುವುದಿಲ್ಲ. ಉತ್ತರ ಕರ್ನಾಟಕಕ್ಕೆ ನ್ಯಾಯ ಸಿಗಬೇಕಾದರೆ ಸಂಘಟಿತ ಹೋರಾಟವೊಂದೇ ದಾರಿ ಎಂದು ಕಾಂಗ್ರೆಸ್‌ನ ಬಿ.ಆರ್. ಪಾಟೀಲ ಪ್ರತಿಪಾದಿಸಿದರು.

ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಒಳಗೊಂಡಂತೆ ಉತ್ತರ ಕರ್ನಾಟಕ ಎದುರಿಸುತ್ತಿರುವ ಸಮಸ್ಯೆಗಳ ಮೇಲಿನ ಚರ್ಚೆಯಲ್ಲಿ ಗುರುವಾರ ಪಾಲ್ಗೊಂಡ ಅವರು, ಸರ್ಕಾರ ಎಂದರೆ ಆನೆ ಇದ್ದಂತೆ. ಮತದಾರರು ಹೋರಾಟವೆಂಬ ಅಂಕುಶ ಬಳಸಿ ತಿವಿದರೆ ಮಾತ್ರ ಆನೆ ಬಗ್ಗುತ್ತದೆ ಎಂದರು.

'ಕಾಫಿ, ಅಡಿಕೆ, ತೆಂಗು, ಕಾವೇರಿ ನೀರಿಗೆ ಸಮಸ್ಯೆಗಳು ಎದುರಾದಾಗ ಎಲ್ಲರೂ ಒಟ್ಟಾಗಿ ಹೋರಾಡಿ ಸರ್ಕಾರವನ್ನು ಮಣಿಸುತ್ತಾರೆ. ಆದರೆ, ನಾವು ಒಂದೊಂದು ದಿಕ್ಕಿಗೆ ಇದ್ದೇವೆ. ಅವರು ಮಾಡಿದಂತೆ ನಾವೂ ಮಾಡಿದರೆ ಸಮಸ್ಯೆಗಳು ಬಗೆಹರಿಯಲಿವೆ' ಎಂದರು.

'ದಕ್ಷಿಣದ ಜಿಲ್ಲೆಯವರಿಗೆ ರಾಜಧಾನಿ ಹತ್ತಿರ. ಅಲ್ಲಿನ ಶಾಸಕರು ಬೆಳಿಗ್ಗೆ ಕ್ಷೇತ್ರದಿಂದ ಹೊರಟು, ಸಚಿವರು, ಅಧಿಕಾರಿಗಳನ್ನು ಭೇಟಿ ಮಾಡಿ ಸಂಜೆ ವಾಪಸ್ ಹೋಗಬಹುದು. ಈ ಭಾಗದವರು 10-12ಗಂಟೆ ಪ್ರಯಾಣಿಸಿ ಬೆಂಗಳೂರು ತಲುಪಬೇಕಿದೆ. ಅಷ್ಟೆಲ್ಲ ಮಾಡಿ ಹೋದರೂ ಸಚಿವಾಲಯದ ಅಧಿಕಾರಿಗಳಿಂದ ಹಿಡಿದು ಕಾರಕೂನರವರೆಗೆ ಯಾರೊಬ್ಬರೂ ಉತ್ತರದ ಜಿಲ್ಲೆಯವರು ಇಲ್ಲ. ನಮ್ಮನ್ನು ಗುರುತಿಸುವವರೂ ಇಲ್ಲ. ಇನ್ನು ನಮ್ಮ ಕೆಲಸ ಹೇಗೆ ಆಗಲು ಸಾಧ್ಯ' ಎಂದು ಪ್ರಶ್ನಿಸಿದರು.

'ಗೋದಾವರಿಯಿಂದ ಒಂದೇ ಹನಿ ನೀರು ನಮಗೆ ಸಿಗುತ್ತಿಲ್ಲ. ಭೀಮಾ ನದಿಯಿಂದ 17 ಟಿಎಂಸಿ ಅಡಿ ಸಿಗಬೇಕಿದೆ. ಅಮರ್ಜಾ, ಬೆಣ್ಣೆತೊರಾ ನೀರು ಸಿಗುತ್ತಿಲ್ಲ. ಇದು ಯಾಕೆ ಸಿಗುತ್ತಿಲ್ಲ ಎಂದು ಯಾರೂ ಹೇಳುತ್ತಿಲ್ಲ. ರಾಜ್ಯದ ಶೇ 60 ರಷ್ಟು ಭಾಗ ಕೃಷ್ಣಾ ಕಣಿವೆಯಡಿಯೇ ಬಂದರೂ ಇದರ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿಯ ಸಿದ್ದು ಸವದಿ ಮಾತನಾಡಿ, 'ನಮ್ಮ ಭಾಗದಲ್ಲಿ ಹಲವು ಗ್ರಾಮಗಳು ಪ್ರವಾಹದಿಂದ ಪದೇ ಪದೇ ಮುಳುಗುತ್ತಿವೆ. ಇದಕ್ಕೆ ಶಾಶ್ವತ ಪರಿಹಾರ ಒದಗಿಸಬೇಕು. ಈ ಹಿಂದಿನ ಪ್ರವಾಹದ ಸಂದರ್ಭದಲ್ಲಿ ಹಾಳಾಗಿ ಹೋದ ಮನೆಗಳನ್ನು ಪುನರ್ ನಿರ್ಮಿಸಿಕೊಡುವ ಕೆಲಸ ಆಗಬೇಕು' ಎಂದು ಹೇಳಿದರು.

'ಮಹಾರಾಷ್ಟ್ರ ಅಣೆಕಟ್ಟಿನಿಂದ ಸಮಸ್ಯೆ'

ಮಹಾರಾಷ್ಟ್ರ ವೈಶಾಲ ಬಳಿ ಕೃಷ್ಣಾ ನದಿಗೆ ಅಣೆಕಟ್ಟು ನಿರ್ಮಿಸುತ್ತಿದ್ದು, ಇನ್ನೊಂದು ವರ್ಷದಲ್ಲಿ ಅದು ಪೂರ್ಣಗೊಳ್ಳಲಿದೆ. ಇದರಿಂದ ಅಕ್ಟೋಬರ್ ತಿಂಗಳಿಂದ ರಾಜ್ಯಕ್ಕೆ ನೀರು ಹರಿದು ಬರುವುದು ನಿಲ್ಲುತ್ತದೆ ಎಂದು ಕಾಂಗ್ರೆಸ್‌ನ ಲಕ್ಷ್ಮಣ ಸವದಿ ಆತಂಕ ವ್ಯಕ್ತಪಡಿಸಿದರು.

ಈ ವಿಚಾರವಾಗಿ ಜಲಸಂಪನ್ಮೂಲ ಸಚಿವರು ಗಮನಹರಿಸಬೇಕು. ಅವರ ಅಣೆಕಟ್ಟೆಯಿಂದ ರಾಜ್ಯದ ಸುಮಾರು 7,000 ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಸೃಷ್ಟಿಯಾಗಲಿದೆ. 60 ಲಕ್ಷ ಎಕರೆ ಕೃಷಿಗೆ ನೀರು ಸಿಗುವುದಿಲ್ಲ ಎಂದರು.



ಲಕ್ಷ್ಮಣ ಸವದಿ

'ಮಹಾರಾಷ್ಟ್ರದಲ್ಲಿ ದ್ರಾಕ್ಷಿ ದರ ಕುಸಿದಾಗ ಸರ್ಕಾರವೇ ಒಣ ದ್ರಾಕ್ಷಿಯನ್ನು ಖರೀದಿಸಿ ಅಂಗನವಾಡಿ ಮಕ್ಕಳಿಗೆ ಉಚಿತವಾಗಿ ವಿತರಿಸುತ್ತದೆ. ನಮ್ಮಲ್ಲೂ ಅದೇ ಮಾದರಿ ಅನುಸರಿಸಬಹುದು. ಮಕ್ಕಳ ಪೌಷ್ಟಿಕತೆ ಹೆಚ್ಚುತ್ತದೆ, ಬೆಳೆಗಾರರ ನೆರವಿಗೆ ಧಾವಿಸಿದಂತಾಗುತ್ತದೆ' ಎಂದರು.




ಕಿತ್ತೂರು ಕರ್ನಾಟಕಕ್ಕೆ ನಂಜುಂಡಪ್ಪ ವರದಿಯಿಂದ ಅಲ್ಪಸ್ವಲ್ಪ ಅನುದಾನ ಬರುತ್ತಿತ್ತು. ಈಗ ಅನುದಾನವೇ ಬರುತ್ತಿಲ್ಲ

ಎನ್.ಎಚ್. ಕೋನರಡ್ಡಿ, ಕಾಂಗ್ರೆಸ್



ಬೆಂಗಳೂರಿನಲ್ಲಿ 7 ಸಾವಿರ ಬೃಹತ್ ಕೈಗಾರಿಕೆಗಳಿವೆ. ಹಾವೇರಿ ಜಿಲ್ಲೆಯಲ್ಲಿ ಕೇವಲ 7 ಉದ್ಯಮಗಳಿವೆ. ಇದೇ ಉತ್ತರಕರ್ನಾಟಕಕ್ಕೂ ದಕ್ಷಿಣ ಕರ್ನಾಟಕಕ್ಕೂ ಇರುವ ವ್ಯತ್ಯಾಸ

ಪ್ರಕಾಶ್ ಕೋಳಿವಾಡ, ಕಾಂಗ್ರೆಸ್



ತೊಗರಿ ಹೊಸತಳಿ ಸಂಶೋಧನೆ ಆಗಬೇಕು. ರೋಗ ನಿರೋಧಕತೆ ಕಳೆದುಕೊಂಡಿರುವ ತೊಗರಿ ನೆಟೆ ರೋಗಕ್ಕೆ ತುತ್ತಾಗಿ ನಾಶವಾಗಿದೆ

ಅಲ್ಲಮ ಪ್ರಭು ಪಾಟೀಲ, ಕಾಂಗ್ರೆಸ್



ವಕೀಲರಿಗೆ ರಕ್ಷಣೆ: ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ವೃತ್ತಿಗೆ ಸಂಬಂಧಿಸಿದಂತೆ ವಕೀಲರ ಮೇಲೆ ಹಲ್ಲೆ ನಡೆಸುವುದು, ಬೆದರಿಕೆ ಒಡ್ಡುವುದು ಮತ್ತು ಕೆಲಸಕ್ಕೆ ಅಡ್ಡಿಪಡಿಸುವುದನ್ನು ನಿಷೇಧಿಸುವ 'ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಮಸೂದೆ-2023'ಕ್ಕೆ ಸದನವು ಗುರುವಾರ ಒಪ್ಪಿಗೆ ನೀಡಿತು.

ಹಲ್ಲೆ ನಡೆಸುವವರು, ಬೆದರಿಕೆ ಒಡ್ಡುವವರಿಗೆ ಆರು ತಿಂಗಳಿನಿಂದ ಮೂರು ತಿಂಗಳವರೆಗೆ ಜೈಲು ಶಿಕ್ಷೆ ಮತ್ತು ₹ 1 ಲಕ್ಷದವರೆಗೆ ದಂಡ ವಿಧಿಸಲು ಈ ಮಸೂದೆ ಅವಕಾಶ ಕಲ್ಪಿಸಲಿದೆ. ಈ ಕಾಯ್ದೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ವಿಚಾರಣೆಯನ್ನು ವಿಶೇಷ ನ್ಯಾಯಾಲಯಗಳ ಮೂಲಕ ನಡೆಸಲಾಗುತ್ತದೆ.

ಯಾವುದೇ ಅಪರಾಧ ಪ್ರಕರಣದಲ್ಲಿ ವಕೀಲರ ಬಂಧನ ಆದರೆ ಸದರಿ ವಕೀಲ ಸದಸ್ಯನಾಗಿರುವ ವಕೀಲರ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿಗೆ 24 ಗಂಟೆಗಳೊಳಗೆ ಪೊಲೀಸರು ಮಾಹಿತಿ ನೀಡಬೇಕೆಂಬ ಅಂಶವೂ ಮಸೂದೆಯಲ್ಲಿದೆ.

ಬಿಜೆಪಿಯ ಎಸ್. ಸುರೇಶ್ ಕುಮಾರ್, 'ವಕೀಲರು ಧೈರ್ಯದಿಂದ ಕೆಲಸ ಮಾಡಲು ಇದರಿಂದ ಸಾಧ್ಯವಾಗಲಿದೆ. ಹಲ್ಲೆಗೊಳಗಾಗಿ ಕೆಲಸ ಮಾಡಲಾಗದ ಸ್ಥಿತಿ ತಲುಪುವ ವಕೀಲರಿಗೆ ಪರಿಹಾರ ನೀಡುವ ಅಂಶವನ್ನೂ ಸೇರಿಸಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ, 'ವಕೀಲರ ಮೇಲೆ ಹಲ್ಲೆ ನಡೆಸುವವರಿಗೆ ರಾಜಸ್ಥಾನದಲ್ಲಿರುವಂತೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ವಕೀಲರ ಬಂಧನದ ಬಳಿಕ ಬಾರ್ ಕೌನ್ಸಿಲ್‌ಗೆ ಮಾಹಿತಿ ನೀಡುವುದು, ಪರಿಹಾರ ಮತ್ತಿತರ ಅಂಶಗಳನ್ನು ನಿಯಮಗಳಲ್ಲಿ ಸ್ಪಷ್ಟಪಡಿಸುವುದಾಗಿ ಕಾನೂನು ಸಚಿವ ಎಚ್.ಕೆ. ಪಾಟೀಲ ಭರವಸೆ ನೀಡಿದರು. ಬಳಿಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ಬಾಂಬೆ ಸಾರ್ವಜನಿಕ ಟ್ರಸ್ಟ್ ಕಾಯ್ದೆ-1950 ರ ಅಡಿಯಲ್ಲಿ ನೋಂದಣಿಯಾಗಿದ್ದ ಸಾರ್ವಜನಿಕ ಮತ್ತು ಕೌಟುಂಬಿಕ ಟ್ರಸ್ಟ್ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಪುನಃ ಅದೇ ಕಾಯ್ದೆ ವ್ಯಾಪ್ತಿಗೆ ತರುವ 'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಮಸೂದೆ- 2023'ಕ್ಕೂ ವಿಧಾನಸಭೆ ಅಂಗೀಕಾರ ನೀಡಿತು.

ಗುತ್ತಿಗೆ ಮೀಸಲಾತಿ ಮಸೂದೆ ಅಂಗೀಕಾರ

ಸರ್ಕಾರದ ವಿವಿಧ ಇಲಾಖೆಗಳಲ್ಲಿ ₹ 1 ಕೋಟಿವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1ಕ್ಕೆ ಶೇಕಡ 4ರಷ್ಟು ಮತ್ತು ಪ್ರವರ್ಗ 2-ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಶೇಕಡ 15ರಷ್ಟು ಮೀಸಲಾತಿ ಕಲ್ಪಿಸುವ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ಮಸೂದೆ2023'ಕ್ಕೆ ವಿಧಾನಸಭೆ ಗುರುವಾರ ಒಪ್ಪಿಗೆ ನೀಡಿತು.

ಗುತ್ತಿಗೆಗಳಲ್ಲಿ ಮೀಸಲಾತಿ ನೀಡುವಾಗ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ 2-ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಆದಾಯದ ಮಿತಿಯನ್ನೂ ಕೈಬಿಡಲಾಗಿದೆ. ಇತರ ಸಂದರ್ಭಗಳಲ್ಲಿ ಮೀಸಲಾತಿ ಪಡೆಯುವವರಿಗೆ ಆದಾಯದ ಮಿತಿಯನ್ನು ನಿಗದಿಪಡಿಸಲಾಗಿದೆ.

'ಕೃಷ್ಣಾಗೆ ಬೇಕಿದೆ ಇನ್ನೂ ₹40 ಸಾವಿರ ಕೋಟಿ'

ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ₹40 ಸಾವಿರ ಕೋಟಿ ಅಗತ್ಯವಿದೆ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ಬಿಜೆಪಿಯ ಹಣಮಂತ ನಿರಾಣಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಮೂರು ಹಂತದ ಯೋಜನೆಗಳಿಗೆ ₹76,203 ಕೋಟಿ ನಿಗದಿ ಮಾಡಲಾಗಿತ್ತು. ಇದುವರೆಗೂ ₹36,457 ಕೋಟಿ ವಿನಿಯೋಗಿಸಲಾಗಿದೆ. 14.61 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಗುರಿಯಲ್ಲಿ 8.35 ಲಕ್ಷ ಹೆಕ್ಟೇರ್‌ಗೆ ನೀರು ಒದಗಿಸಲಾಗಿದೆ ಎಂದರು. 1964ರಿಂದ ಆರಂಭವಾದ ಯೋಜನೆ ಇದುವರೆಗೂ ಪೂರ್ಣಗೊಂಡಿಲ್ಲ. ರೈತರಿಗೆ ನೀಡಬೇಕಿರುವ ₹1,400 ಕೋಟಿ ಪರಿಹಾರ ಬಾಕಿ ಇದೆ. ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ನಿರಾಣಿ ಒತ್ತಾಯಿಸಿದರು.

ಕಾನೂನಿಗೆ ತಿದ್ದುಪಡಿ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಭ್ರೂಣಹತ್ಯೆ: ಜಾಮೀನು ರಹಿತ ಅಪರಾಧ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಹೆಣ್ಣು ಭ್ರೂಣ ಹತ್ಯೆಯನ್ನು ಜಾಮೀನುರಹಿತ ಅಪರಾಧವನ್ನಾಗಿ ಪರಿಗಣಿಸಲಾಗುವುದು. ಈ ಉದ್ದೇಶದಿಂದ ಕಾನೂನಿಗೆ ತಿದ್ದುಪಡಿ ತರಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮಂಡ್ಯ ಸೇರಿದಂತೆ ರಾಜ್ಯದ ವಿವಿಧೆಡೆ ಹೆಣ್ಣು ಭ್ರೂಣಹತ್ಯೆ ಪ್ರಕರಣಗಳು ಪತ್ತೆಯಾಗಿರುವ ಕುರಿತು ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಹಲವು ಸದಸ್ಯರು ಗುರುವಾರ ನಡೆಸಿದ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಉತ್ತರ ನೀಡಿದ ಸಚಿವರು, 'ಈಗ ಇರುವ ಕಾನೂನಿನಲ್ಲಿ ಕಠಿಣ ಕ್ರಮಗಳಿಗೆ ಅವಕಾಶವಿಲ್ಲ. ಆದ್ದರಿಂದ ಭಾರತೀಯ ದಂಡ ಸಂಹಿತೆ (ಐಪಿಸಿ) ಸೇರಿದಂತೆ ಅಗತ್ಯವಿರುವ ಕಾನೂನುಗಳಿಗೆ ತಿದ್ದುಪಡಿ ತರಲಾಗುವುದು' ಎಂದರು.

ರಾಜ್ಯದ ವಿವಿಧೆಡೆ ಪತ್ತೆಯಾಗಿರುವ ಪ್ರಕರಣಗಳಲ್ಲಿ ಐಪಿಸಿಯ 315 ಮತ್ತು 316ನೇ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆದರೆ, ಹೆಣ್ಣು ಭ್ರೂಣಹತ್ಯೆಯನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಅದನ್ನು ಜಾಮೀನುರಹಿತ ಅಪರಾಧ ಎಂದು ಘೋಷಿಸಬೇಕಿದೆ. ಅದಕ್ಕೆ ಪೂರಕವಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

ಭ್ರೂಣಹತ್ಯೆಯಲ್ಲಿ ಭಾಗಿಯಾಗುವ ವೈದ್ಯರು, ತಂತ್ರಜ್ಞರು, ಆಸ್ಪತ್ರೆ ಮತ್ತು ಸ್ಕ್ಯಾನಿಂಗ್ ಕೇಂದ್ರಗಳ ಸಿಬ್ಬಂದಿ, ಮಾಲೀಕರ ಜತೆಯಲ್ಲಿ ಭ್ರೂಣದ ತಾಯಿ, ತಂದೆ ಮತ್ತು ಒತ್ತಡ ಹೇರಿದ ಸಂಬಂಧಿಗಳನ್ನೂ ಆರೋಪಿಗಳಾಗಿ ಪರಿಗಣಿಸಬೇಕಿದೆ. ಈ ದಿಸೆಯಲ್ಲೂ ಕಾನೂನು ತಿದ್ದುಪಡಿ ಮಾಡಲಾಗುವುದು ಎಂದರು.

ಹೆಣ್ಣು ಭ್ರೂಣಹತ್ಯೆಯಲ್ಲಿ ಭಾಗಿಯಾಗುವವರಿಗೆ ಮರಣದಂಡನೆ ವಿಧಿಸಲು ಕ್ರಮ ಕೈಗೊಳ್ಳಬೇಕು

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಹೆಣ್ಣು ಭ್ರೂಣಹತ್ಯೆ ತಡೆಗೆ ರಾಜ್ಯಮಟ್ಟದ ಕಾರ್ಯಪಡೆಯೊಂದನ್ನು ನೇಮಿಸಲಾಗುವುದು. ಉಪ ವಿಭಾಗ ಮಟ್ಟದಲ್ಲಿ ಮೂರು ತಿಂಗಳಿಗೊಮ್ಮೆ ರಹಸ್ಯ ಕಾರ್ಯಾಚರಣೆ ಮೂಲಕ ಸ್ಕ್ಯಾನಿಂಗ್ ಕೇಂದ್ರಗಳು, ಆಸ್ಪತ್ರೆಗಳ ತಪಾಸಣೆಗೆ ನಿರ್ದೇಶನ ನೀಡಲಾಗಿದೆ. ಇಂತಹ ಕೃತ್ಯಗಳಲ್ಲಿ ಭಾಗಿಯಾಗುವ ಅಧಿಕಾರಿಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ವಿಶೇಷ ನೀತಿ: ಹೆಣ್ಣು ಭ್ರೂಣ ಹತ್ಯೆ ತಡೆಯಲು ಕಾನೂನು ಕ್ರಮಗಳ ಜತೆಯಲ್ಲೇ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವೂ ಇದೆ. ಇದಕ್ಕಾಗಿ ವಿಶೇಷ ನೀತಿಯೊಂದನ್ನು ರೂಪಿಸಲಾಗುವುದು ಎಂದರು.

ಸ್ವತಃ ವೈದ್ಯರಾಗಿರುವ ಕಾಂಗ್ರೆಸ್‌ನ ಮಂಥರ್ ಗೌಡ, ಎಚ್.ಡಿ.ರಂಗನಾಥ್, ಎನ್.ಟಿ. ಶ್ರೀನಿವಾಸ್, ಬಿಜೆಪಿಯ ಶೈಲೇಂದ್ರ ಬೆಲ್ದಾಳೆ ಭ್ರೂಣಹತ್ಯೆ ತಡೆಯುವ ನಿಟ್ಟಿನಲ್ಲಿ ಹಲವು ಸಲಹೆಗಳನ್ನು ನೀಡಿದರು. ಬಿಜೆಪಿಯ ಶಶಿಕಲಾ ಜೊಲ್ಲೆ, ಬಿ. ಸುರೇಶ್ ಗೌಡ, ಕಾಂಗ್ರೆಸ್‌ನ ರೂಪಕಲಾ ಅವರು, ಇಂತಹ ಕೃತ್ಯಗಳಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದರು.

ಆಸ್ಪತ್ರೆ ಮುಖ್ಯಸ್ಥನ ಪತ್ತೆಗೆ ಕ್ರಮ

ಹೊಸಕೋಟೆ ತಾಲ್ಲೂಕಿನ ತಿರುಮಶೆಟ್ಟಿಹಳ್ಳಿ ಕ್ರಾಸ್‌ನ ಎಸ್.ಪಿ.ಜಿ. ಆಸ್ಪತ್ರೆಯಲ್ಲಿ ಭ್ರೂಣಹತ್ಯೆ ನಡೆಯುತ್ತಿರುವುದನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳು ಸ್ವಯಂಪ್ರೇರಿತ ಕಾರ್ಯಾಚರಣೆಯಲ್ಲಿ ಪತ್ತೆಹಚ್ಚಿದ್ದಾರೆ. ಪರಾರಿಯಾಗಿರುವ ಆಸ್ಪತ್ರೆ ಮುಖ್ಯಸ್ಥನ ಪತ್ತೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

ಕಾಂಗ್ರೆಸ್‌ನ ಶರತ್ ಬಚ್ಚೇಗೌಡ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಅವರು, 'ಇಲಾಖೆಯ ಅಧಿಕಾರಿಗಳೇ ಈ ಪ್ರಕರಣ ಪತ್ತೆಹಚ್ಚಿದ್ದಾರೆ. ಆಯುಕ್ತರು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಆಸ್ಪತ್ರೆಗೆ ಬೀಗಮುದ್ರೆ ಹಾಕಿದ್ದಾರೆ' ಎಂದರು.

ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ಸಂಸದ ಪ್ರತಾಪ ಸಿಂಹ ವಿರುದ್ಧ ಕಾಂಗ್ರೆಸ್ ಆರೋಪ

‘ಗಮನ ಬೇರೆಡೆ ಸೆಳೆಯಲು ಬಿಜೆಪಿ ಯತ್ನ’

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪದಿಂದ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಯತ್ನಿಸುತ್ತಿದ್ದಾರೆ. ಆರೋಪಿಗಳು ಸದನ ಪ್ರವೇಶಿಸಲು ಬಿಜೆಪಿ ಸಂಸದರೊಬ್ಬರು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ಗುರುವಾರ ಆರೋಪಿಸಿದೆ.

ಬುಧವಾರದ ಘಟನೆಯಲ್ಲಿ ಬಂಧಿತರಾದ ಮಹಿಳೆಯ ಚಿತ್ರವನ್ನು ಮಾಳವೀಯಾ ಹಂಚಿಕೊಂಡಿದ್ದು ಈಕೆ ಕಾಂಗ್ರೆಸ್‌ಗಾಗಿ ಪ್ರಚಾರ ಮಾಡುತ್ತಿದ್ದಾರೆ ಎನ್ನುವಂತೆ ಬಿಂಬಿಸಿದ್ದಾರೆ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ದೂರಿದ್ದಾರೆ.

‘ಬಿಜೆಪಿ ಐಟಿ ಘಟಕವು ಎರಡು ವಾಸ್ತವಾಂಶದಿಂದ ಜನರ ಗಮನ ಬೇರೆಡೆ ಸೆಳೆಯಲು ಬಯಸುತ್ತಿದೆ. ಮೊದಲನೆಯದ್ದು ಸಂಸತ್ತಿನ ಭದ್ರತೆಯ ಲೋಪದಂತಹ ಗಂಭೀರ ವಿಷಯ. ಎರಡನೆಯದ್ದು ಸದನದಲ್ಲಿ ಆಘಾತ ಮೂಡಿಸುವಂತೆ ಜಿಗಿದ ಆರೋಪಿಗಳಿಗೆ

> **ಭದ್ರತೆಯನ್ನು ಭೇದಿಸಿ ಲೋಕಸಭೆ ಪ್ರವೇಶಿಸಿದವರ ಹಾಗೂ ಕಾಂಗ್ರೆಸ್– ಕಮ್ಯುನಿಸ್ಟ್ ಪಕ್ಷದವರ ಡಿಎನ್‌ಎಗೂ ಬಿಡಿಸಲಾಗದ ನಂಟಿದೆ ಎಂಬುದು ಸ್ಪಷ್ಟವಾಗುತ್ತಿದೆ**
> **ಅಮಿತ್ ಮಾಳವೀಯ,**
> ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ

ಬಿಜೆಪಿ ಸಂಸದ ಪ್ರತಾಪ ಸಿಂಹ ಅವರೇ ಪಾಸ್ ಕೊಡಿಸಿದ್ದು’ ಎಂದು ರಮೇಶ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಕ್ಕೂ ಮೊದಲು ‘ಎಕ್ಸ್’ನಲ್ಲಿ ಚಿತ್ರವನ್ನು ಪೋಸ್ಟ್ ಮಾಡಿದ್ದ ಮಾಳವೀಯ ಅವರು ‘ ಸಂಸತ್ತಿನ ಭದ್ರತೆಯನ್ನು ಉಲ್ಲಂಘಿಸಿದ ಮಹಿಳೆ ನೀಲಂ ಆಜಾದ್ ಅವರನ್ನು ನೋಡಿ. ಇವರು ಕಾಂಗ್ರೆಸ್/ ಇಂಡಿಯಾ ಮೈತ್ರಿಕೂಟದ ಸಕ್ರಿಯ ಬೆಂಬಲಿಗರು, ಹಲವು ಪ್ರತಿಭಟನೆಗಳಲ್ಲಿ ಭಾಗಿಯಾಗಿದ್ದ ಆಂದೋಲನ ಜೀವಿ’ ಎಂದು ಬರೆದಿದ್ದರು.

‘ಇವರನ್ನು ಯಾರು ಕಳುಹಿಸಿದ್ದರು ಎಂಬುದು ಪ್ರಶ್ನೆ. ಸಂಸತ್ತಿನ ಪಾಸ್ ಪಡೆಯಲು ಅವರು ಮೈಸೂರಿನ ಬಿಜೆಪಿ ಸಂಸದರನ್ನು ಯಾಕೆ ಆಯ್ಕೆ ಮಾಡಿಕೊಂಡರು, ಪ್ರಜಾಪ್ರಭುತ್ವದ ಉನ್ನತ ಸಂಸ್ಥೆಯಾದ ಸಂಸತ್ತನ್ನು ಅಪವಿತ್ರಗೊಳಿಸಲೂ ಪ್ರತಿಪಕ್ಷಗಳು ಹಿಂದೇಟು ಹಾಕುವುದಿಲ್ಲ’ ಎಂದು ಬಿಜೆಪಿ ನಾಯಕ ಹೇಳಿದ್ದರು. ಮತ್ತೊಬ್ಬ ಆರೋಪಿ ಮನೋರಂಜನ್ ಅವರ ತಂದೆಯ ವಿಡಿಯೊ ಜೊತೆಗೆ, ಪ್ರತ್ಯೇಕ ಪೋಸ್ಟ್ ಹಾಕಿ ‘ಮನೋರಂಜನ್ ಕಾಂಗ್ರೆಸ್ ಅಥವಾ ಎಸ್‌ಎಫ್‌ಐ ಪ್ರಾಯೋಜಿತ ಚಳವಳಿಗಳಲ್ಲಿ ಸಕ್ರಿಯರಾಗಿದ್ದರೆ? ಅವರು ರಾಹುಲ್‌ಗಾಂಧಿ ಅವರ ಭಾರತ್ ಜೋಡೊ ಯಾತ್ರಾದಲ್ಲಿ ಪಾಲ್ಗೊಂಡಿದ್ದರೆ?’ ಎಂದು ಕೇಳಿದ್ದರು.

ವಿದ್ಯಾಭ್ಯಾಸಕ್ಕೆ ಹಣ ಕೇಳಿದ್ದ ಅಮೋಲ್– ಪೋಷಕರ ಹೇಳಿಕೆ

ಛತ್ರಪತಿ ಸಂಭಾಜಿನಗರ, ಮಹಾರಾಷ್ಟ್ರ (ಪಿಟಿಐ): ‘ಅಮೋಲ್ ಶಿಂದೆ ಸೇನೆ ಸೇರಲು ಇಚ್ಛಿಸಿದ್ದ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಿಂಗಳಿಗೆ ₹ 4,000 ಕೊಡುವಂತೆ ಕೇಳಿದ್ದ ಆದರೆ ನಮಗೆ ಕೊಡಲು ಆಗಿರಲಿಲ್ಲ’ ಎಂದು ಪೋಷಕರು ಹೇಳಿದ್ದಾರೆ.

ಲೋಕಸಭೆಯಲ್ಲಿ ಬುಧವಾರ ಭದ್ರತಾ ಲೋಪದ ವೇಳೆಯೇ ಸಂಸತ್ತಿನ ಹೊರಗೆ ಪ್ರತಿಭಟನೆ ನಡೆಸಿ ಅಮೋಲ್ ಶಿಂದೆ ಬಂಧನಕ್ಕೆ ಒಳಗಾಗಿದ್ದರು. ನಿರುದ್ಯೋಗಿಯಾಗಿದ್ದ ಇವರು ವಿವಿಧೆಡೆ ಸೇನಾ ನೇಮಕಾತಿ ಅಭಿಯಾನಗಳಲ್ಲಿ ಭಾಗವಹಿಸಿದ್ದರು.

ದೆಹಲಿ ಘಟನೆ ಬಳಿಕ ಲಾತೂರು ಪೊಲೀಸರ ತಂಡವು ಝರಿ ಗ್ರಾಮಕ್ಕೆ ತೆರಳಿ ಶಿಂದೆ ಮನೆಯಲ್ಲಿ ಶೋಧ ನಡೆಸಿದೆ. ಬುಧವಾರ ರಾತ್ರಿ ಸುದ್ದಿಗಾರರ ಜತೆ ಮಾತನಾಡಿದ ಈತನ ತಾಯಿ ಕೇಸರ್‌ಬಾಯಿ, ‘ ಸೇನಾ ನೇಮಕಾತಿಯ ವಯೋಮಿತಿ ಮೀರಿದ್ದರಿಂದ ಯಾವುದಾದರೂ ಕಂಪನಿ ಸೇರಿಕೊಳ್ಳಲು ನಾನು ಹೇಳುತ್ತಿದ್ದೆ. ಪೊಲೀಸರು ನಮ್ಮ ಮನೆಗೆ ಬಂದಾಗಲೇ ನಮಗೆ ಸಂಸತ್ತಿನಲ್ಲಿ ನಡೆದ ಘಟನೆ ಬಗ್ಗೆ ಗೊತ್ತಾಗಿದ್ದು. ಕ್ರೀಡೆಗೆ ಸಂಬಂಧಿಸಿದ ಆತನ ಕೆಲವು ದಾಖಲೆಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ’ ಎಂದು ಹೇಳಿದರು.

‘ಲಾತೂರಿನಲ್ಲಿ ವಿದ್ಯಾಭ್ಯಾಸ ಮಾಡಲು ಬಯಸಿದ್ದ. ಅದಕ್ಕಾಗಿ ₹ 4000 ತಿಂಗಳಿಗೆ ಬೇಕು ಎಂದು ಕೇಳಿದ್ದ. ನಮಗೆ ಕೊಡಲಾಗಲಿಲ್ಲ’ ಎಂದರು.

‘ಅಮೋಲ್ ದಿನಗೂಲಿ ಕಾರ್ಮಿಕನಾಗಿಯೂ ಕೆಲಸ ಮಾಡಿದ್ದ. ಇತರರು ನೇಮಕಾತಿ ಮೂಲಕ ಸೇನೆ ಸೇರಿದ್ದರು. ಅವನಿಗೆ ಸಾಧ್ಯವಾಗಿರಲಿಲ್ಲ. ದಿನಗೂಲಿ ಕಾರ್ಮಿಕನಾಗಿ ಇನ್ನೆಷ್ಟು ದಿನಗಳು ದುಡಿಯಬೇಕು ಎಂದು ಆತ ಆಲೋಚಿಸಿರಬೇಕು. ಅದಕ್ಕಾಗೇ ಈ ಕೃತ್ಯ ಎಸಗಿರಬೇಕು’ ಎಂದು ಆತನ ತಂದೆ ಧನ್‌ರಾಜ್ ಶಿಂಧೆ ಅಭಿಪ್ರಾಯ ಪಟ್ಟರು.

‘ಆತ ಈ ಪ್ರಕರಣದಲ್ಲಿ ಸುರಕ್ಷಿತವಾಗಿ ಹೊರಬಂದರೆ ಗ್ರಾಮಕ್ಕೆ ಮರಳಿ ಬರುತ್ತಾನೆ. ಬರದಿದ್ದರೆ, ನಮಗೆ ಮಗನೇ ಇರಲಿಲ್ಲ ಎಂದುಕೊಳ್ಳುತ್ತೇವೆ’ ಎಂದೂ ಅವರು ಹೇಳಿದರು.

ರೈತರ ಪ್ರತಿಭಟನೆ, ಮಣಿಪುರ ಬಿಕ್ಕಟ್ಟು ಮತ್ತು ನಿರುದ್ಯೋಗದಿಂದ ಬೇಸರಗೊಂಡು ಈ ಕೃತ್ಯ ಎಸಗಿದ್ದಾಗಿ, ಬಣ್ಣದ ಹೊಗೆ ಉಗುಳುವ ಐದು ಕ್ಯಾನ್‌ಗಳನ್ನು ತಾನು ₹1,200ಕ್ಕೆ ಕೊಂಡು ತಂದಿದ್ದಾಗಿ ವಿಚಾರಣೆ ವೇಳೆ ಅಮೋಲ್ ಹೇಳಿರುವುದಾಗಿ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಭದ್ರತೆ ಉಲ್ಲಂಘನೆಯ ಕೆಲ ಘಟನಾವಳಿ

1974, ಏ. 11:	ಕರಪತ್ರಗಳ ಜತೆಗೆ ಎರಡು ಪಿಸ್ತೂಲ್‌ಗಳು ಮತ್ತು ಬಾಂಬ್ ಹೋಲುವ ವಸ್ತು ಹಿಡಿದಿದ್ದ ಒಬ್ಬ ವ್ಯಕ್ತಿ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಘೋಷಣೆಗಳನ್ನು ಕೂಗಿದ್ದ
1974 ಜುಲೈ 26:	ಡ್ಯಾಗರ್ ಹಿಡಿದು ಲೋಕಸಭೆಯ ಸಂದರ್ಶಕರ ಗ್ಯಾಲರಿ ಪ್ರವೇಶಿಸಲು ಯತ್ನಿಸಿದ್ದ ವ್ಯಕ್ತಿಯ ಸೆರೆ
1974 ನ. 26 :	ಲೋಕಸಭೆಯ ಸಂದರ್ಶಕರ ಗ್ಯಾಲರಿಗೆ ಸ್ಫೋಟಕ ಮತ್ತು ಡ್ಯಾಗರ್‌ನೊಂದಿಗೆ ಪ್ರವೇಶಿಸಿದ್ದ ವ್ಯಕ್ತಿ
1982 ಮಾ. 18:	ರಾಜ್ಯಸಭೆಯ ಸಂದರ್ಶಕರ ಗ್ಯಾಲರಿಯಲ್ಲಿ ಘೋಷಣೆಗಳನ್ನು ಕೂಗಿದ್ದ 14 ಮಂದಿ
1982 ಮಾ. 23:	ರಾಜ್ಯಸಭೆಯ ಸಂದರ್ಶಕರ ಗ್ಯಾಲರಿಯಲ್ಲಿ ಘೋಷಣೆಗಳನ್ನು ಕೂಗಿದ್ದ ಮಹಿಳೆ
1983 ನ. 21:	ರಾಜ್ಯಸಭೆಯಲ್ಲಿ ಘೋಷಣೆಗಳನ್ನು ಕೂಗಿ ಸಂದರ್ಶಕರ ಗ್ಯಾಲರಿಯಿಂದ ಚಪ್ಪಲಿ ಎಸೆದಿದ್ದ ಉತ್ತರ ಪ್ರದೇಶದ ವ್ಯಕ್ತಿ
1999 ಜ. 9:	ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸಂಸದರ ಕುರ್ಚಿಗಳತ್ತ ಜಿಗಿದಿದ್ದ ಇಬ್ಬರು
2016 ನ. 25:	ಲೋಕಸಭೆಯಲ್ಲಿ ಸಂಸದರ ಆಸನದತ್ತ ಜಿಗಿಯಲು ಯತ್ನಿಸಿದ್ದ ಮಧ್ಯಪ್ರದೇಶದ ವ್ಯಕ್ತಿಯನ್ನು ತಡೆದ ಭದ್ರತಾ ಸಿಬ್ಬಂದಿ

ಝಾಗೆ ಕೋಲ್ಕತ್ತ ನಂಟು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಸಂಸತ್ತಿನಲ್ಲಿ ಭದ್ರತೆ ಉಲ್ಲಂಘಿಸಿದ ಸಂಚುಕೋರರಿಗೆ ಕೋಲ್ಕತ್ತದ ನಂಟು ಇದೆ ಎನ್ನಲಾಗಿದೆ. ಪ್ರಮುಖ ಸಂಚುಕೋರ ಲಲಿತ್ ಝಾ ಈ ನಗರದ ನಿವಾಸಿ ಎಂದು ಹೇಳಲಾಗಿದೆ.

ಸೆಂಟ್ರಲ್ ಕೋಲ್ಕತ್ತದಲ್ಲಿ ನೆಲೆಸಿದ್ದು ಶಿಕ್ಷಕ ವೃತ್ತಿಯಲ್ಲಿರುವುದಾಗಿ ಝಾ ಹೇಳಿಕೊಂಡಿದ್ದರು. ಆದರೆ ಒಂದು ವರ್ಷದಿಂದ ಅವರು ಈ ಸ್ಥಳದಲ್ಲಿ ಇರಲಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ.

ಈ ಸ್ಥಳದ ಜನರು ಝಾ ಅವರನ್ನು ಈ ಮೊದಲು ನೋಡಿದ್ದಾಗಿ ಸ್ಥಳೀಯ ಸುದ್ದಿ ವಾಹಿನಿಗಳಿಗೆ ಹೇಳಿಕೆ ನೀಡಿದ್ದಾರೆ. ಘಟನೆ ನಡೆದ ದಿನ ಮಧ್ಯಾಹ್ನ 1 ಗಂಟೆ ವೇಳೆಗೆ ಝಾ ಅವರು ತಮ್ಮನ್ನು ಸಂಪರ್ಕಿಸಿದ್ದರು ಎಂದು ಸಮಾಜ ಸೇವೆಯಲ್ಲಿ ತೊಡಗಿರುವ ವಿದ್ಯಾರ್ಥಿ ನೀಲಾಕ್ಷ ಎಂಬುವರು ಗುರುವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಬಣ್ಣದ ಹೊಗೆ ಎದ್ದಿರುವ ದೃಶ್ಯ ಸೆರೆ ಹಿಡಿದ ವಿಡಿಯೊವನ್ನು ತಮ್ಮ ವಾಟ್ಸ್‌ಆ್ಯಪ್‌ನೊಂದಿಗೆ ಝಾ ಹಂಚಿಕೊಂಡಿದ್ದರು. ಈ ವೇಳೆ ತಾನು ಕಾಲೇಜಿನಲ್ಲಿದ್ದೆ ಎಂದು ನೀಲಾಕ್ಷ ಅವರು ‘ಎಬಿಪಿ ಆನಂದ’ ವಾಹಿನಿಗೆ ತಿಳಿಸಿದ್ದಾರೆ.

ಮಾಧ್ಯಮದಲ್ಲಿ ಇದನ್ನು ವೀಕ್ಷಿಸುವಂತೆ ಅವರು ತನಗೆ ಹೇಳಿದರು. ಆರಂಭದಲ್ಲಿ ವಿಡಿಯೊವನ್ನು ಸರಿಯಾಗಿ ನೋಡಲಿಲ್ಲ. ನಂತರದಲ್ಲಿ ಘಟನೆ ಎಲ್ಲಿ ನಡೆಯಿತು ಎಂದು ಕೇಳಿದಾಗ ಪ್ರತಿಕ್ರಿಯೆ ಲಭಿಸಲಿಲ್ಲ ಎಂದು ಅವರು ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ಸೆಂಟ್ರಲ್ ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಝಾ ಅವರ ಪರಿಚಯವಾಯಿತು. ಕೋಲ್ಕತ್ತದಲ್ಲಿ ನೆಲೆಸಿರುವುದಾಗಿ ಝಾ ಹೇಳಿದ್ದರು. ಆದರೆ ನಿರ್ದಿಷ್ಟ ಪ್ರದೇಶವನ್ನು ಹೆಸರಿಸಿರಲಿಲ್ಲ ಎಂದಿದ್ದಾರೆ.

ಬುಡಕಟ್ಟು ಜನರ ಶಿಕ್ಷಣ ಮತ್ತು ಇತರ ಕಲ್ಯಾಣ ಕಾರ್ಯಕ್ರಮದ ಬಗ್ಗೆ ಗಮನಹರಿಸುವ ತಮ್ಮ ಸಂಘಟನೆಗೆ ಝಾ ಅವರನ್ನು ಸೇರಿಸಿಕೊಳ್ಳಲು ಬಯಸಿ ಅವರನ್ನು ಸಂಪರ್ಕಿಸಿದ್ದಾಗಿ ಮತ್ತು ಅವರು ಸಂಘಟನೆ ಸದಸ್ಯರಾಗಿ ಮತ್ತು ಕೆಲ ತಿಂಗಳ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾಗಿ ನೀಲಾಕ್ಷ ತಿಳಿಸಿದ್ದಾರೆ.



ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಪ್ರತಾಪ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಬಿಜೆಪಿ ಸಂಸದ ಪ್ರತಾಪ ಸಿಂಹ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಯುವ ಕಾಂಗ್ರೆಸ್ ಕಚೇರಿ ಹಿಂಭಾಗದ ರಾಜೇಂದ್ರ ಪ್ರಸಾದ್ ರಸ್ತೆಯಲ್ಲಿ ಜಮಾಯಿಸಿ, ಬ್ಯಾನರ್‌ಗಳನ್ನು ಹಿಡಿದು ಪ್ರತಾಪ ಸಿಂಹ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಸಂಸತ್ ಸದಸ್ಯ ಸ್ಥಾನದಿಂದ ಪ್ರತಾಪ ಸಿಂಹ ಅವರನ್ನು ಉಚ್ಚಾಟನೆ ಮಾಡಬೇಕು ಎಂದೂ ಆಗ್ರಹಿಸಿದರು.

ಶ್ರೀನಿವಾಸ್ ಮಾತನಾಡಿ, ‘ಈ ಘಟನೆಯು ಸಂಸತ್ತಿನ ಭದ್ರತೆಯ ಬಗ್ಗೆ ಗಂಭೀರ ಪ್ರಶ್ನೆಯನ್ನು ಹುಟ್ಟು ಹಾಕಿದೆ. ಈ ವಿಷಯದ ಬಗ್ಗೆ ಪ್ರಧಾನಿ ಮತ್ತು ಗೃಹ ಸಚಿವರು ಹೇಳಿಕೆ ನೀಡಬೇಕು’ ಎಂದು ಒತ್ತಾಯಿಸಿದರು.

ಲೋಕಸಭೆಯಲ್ಲಿ ಬುಧವಾರ ನಡೆದಿರುವುದು ಗಂಭೀರ ಘಟನೆ. ಆದರೆ, ಈ ಘಟನೆ ಕುರಿತು ಕೇಂದ್ರ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ ಎಂದು ಅವರು ದೂರಿದರು.

ಶೋಭಾ ಒತ್ತಾಯ: ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ‘ಸಂಸತ್ತಿನ ಭದ್ರತಾ ಲೋಪದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಶಿಕ್ಷೆ ನೀಡಬೇಕು’ ಎಂದು ಒತ್ತಾಯಿಸಿದರು.

ಮೈಸೂರು ನಿವಾಸಕ್ಕೆ ಭದ್ರತೆ; ಪೊಲೀಸ್ ಸಿಬ್ಬಂದಿ ನಿಯೋಜನೆ

ಮನೋರಂಜನ್ ಹಿನ್ನೆಲೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಮೈಸೂರು: ‘ಲೋಕಸಭೆಯಲ್ಲಿ ಕಲಾಪ ನಡೆಯುತ್ತಿದ್ದಾಗ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದ ಆರೋಪಿ ಸಾಗರ್ ಶರ್ಮ ಮೈಸೂರಿಗೆ ಕಳೆದ ಮೇ ತಿಂಗಳಿನಲ್ಲಿ ಭೇಟಿ ನೀಡಿದ್ದ ಎಂಬ ಮಾಹಿತಿ ಲಭ್ಯವಾಗಿದ್ದು, ತನಿಖೆ ನಡೆದಿದೆ.

‘ಆರೋಪಿ, ಮೈಸೂರಿನ ಡಿ.ಮನೋರಂಜನ್ ವಿರುದ್ಧ ಈವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ’ ಎಂದು ಎಸಿಪಿ ಗಜೇಂದ್ರ ಪ್ರಸಾದ್ ’ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದ್ದಾರೆ.

‘ಯುವಕನ ಮನೆಯಲ್ಲಿ ಆತನಿಗೆ ಸಂಬಂಧಿಸಿದ ಗ್ಯಾಜೆಟ್‌ಗಳೇನೂ ಸಿಕ್ಕಿಲ್ಲ. ಹೀಗಾಗಿ ಆತನ ಚಟುವಟಿಕೆಗಳ ಬಗೆಗಿನ ಊಹಾಪೋಹಗಳಿಗೆ ಪ್ರತಿಕ್ರಿಯಿಸಲು ಆಗದು’ ಎಂದರು.

ಯುವಕನ ಮನೆಗೆ ಗುರುವಾರ ಸ್ಥಳೀಯ ಗುಪ್ತಚರ ವಿಭಾಗದವರು ಬಂದು ಮಾಹಿತಿ ಪಡೆದರು. ಆಂತರಿಕ ಭದ್ರತಾ ವಿಭಾಗ, ಗುಪ್ತಚರ ಬ್ಯೂರೊ ಸಿಬ್ಬಂದಿ ಮನೆಯವರಿಂದ ಹಾಗೂ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿದ್ದಾರೆ ಎನ್ನಲಾಗಿದೆ. ಮನೆಯ ಬಳಿ ಪೊಲೀಸರನ್ನು ನಿಯೋಜಿಸಲಾಗಿದೆ. ಜಲದರ್ಶಿನಿಯಲ್ಲಿರುವ ಸಂಸದ ಪ್ರತಾಪ ಸಿಂಹ ಕಚೇರಿಗೂ ಭದ್ರತೆ ಒದಗಿಸಲಾಗಿದೆ.

ಆರೋಪಿಗಳೊಂದಿಗೆ ಸಂಸದರ ಸಭೆ: ಇದೇ ವೇಳೆ, ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ಮುಖಂಡರು ‘ಸಂಸದ ಪ್ರತಾಪ ಸಿಂಹ ಅವರು ಆರೋಪಿಗಳೊಂದಿಗೆ ಕಚೇರಿಯಲ್ಲಿ ಸಭೆ ನಡೆಸಿದ್ದರು. ಈ ಬಗ್ಗೆ ದಾಖಲೆಯಿದ್ದು. ತನಿಖೆ ವೇಳೆ ತೋರಿಸುತ್ತೇವೆ’ ಎಂದರು.

ದೇವೇರಾಜೇ ಗೌಡ ಆಕ್ರೋಶ: ಗುರುವಾರ ಬೆಳಿಗ್ಗೆ ತಮ್ಮ ಮನೆಗೆ ಬಂದ ಸುದ್ದಿಗಾರರ ಮುಂದೆಯೇ ಆಕ್ಷೇಪ ವ್ಯಕ್ತಪಡಿಸಿದ ಯುವಕನ ತಂದೆ ದೇವರಾಜೇ ಗೌಡ, ‘ನಮ್ಮನ್ನು ಬದುಕೋದಿಕ್ಕೆ ಬಿಡಿ. ಅವರು ಮಾಡಿರುವುದನ್ನು ಅನುಭವಿಸುತ್ತಾರೆ. ನೀವು ತೊಂದರೆ ಕೊಡುತ್ತಿದ್ದೀರಿ. ಇಲ್ಲಿಂದ ಹೊರಟು ಹೋಗಿ’ ಎಂದು ಮನೆಯೊಳಗೆ ನಡೆದರು.

ಎಸ್‌ಎಫ್‌ಐನಿಂದ ಸೆನ್‌ಗೆ ದೂರು: ಮನೋರಂಜನ್ ಎಸ್‌ಎಫ್‌ಐ ಸಮ್ಮೇಳನದಲ್ಲಿ ಭಾಗವಹಿಸಿದ್ದರೆಂಬ ಫೋಟೊ ಬರಹ ಸಾಮಾಜಿಕ ಮಾಧ್ಯಮದಲ್ಲಿ ಬುಧವಾರ ರಾತ್ರಿ ಹರಿದಾಡಿತು. ಈ ಬಗ್ಗೆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎಸ್.ವಿಜಯಕುಮಾರ್ ಅವರು ಸೆನ್ ಠಾಣೆಗೆ ಗುರುವಾರ ದೂರು ನೀಡಿದ್ದಾರೆ.

‘ವಿಜಯ್ ಪಟೇಲ್ ಎಂಬ ‘x’ ಖಾತೆ, ಹುಣಸೂರು ಬಿಜೆಪಿ ಪೇಜ್, ಅಜಿತ್.ಎಸ್ ಶೆಟ್ಟಿ ಕಿರಾಡಿ, ನಮೋ ಸಪೋರ್ಟರ್ಸ್, ಅಮಿತ್ ಷಾ ಫ್ಯಾನ್ಸ್, ಗೌರೀಶ್ ಶಾಸ್ತ್ರಿ, ಪ್ರಶಾಂತ್ ಸಂಬರ್ಗಿ, ಬಜರಂಗದಳ ಕರ್ನಾಟಕದ ಫೇಸ್ಬುಕ್ ಪೇಜ್‌ನಲ್ಲಿ ನನ್ನ ಫೋಟೋವನ್ನು ಮನೋರಂಜನ್ ಎಂಬುದಾಗಿ ಬಿಂಬಿಸಿ ಹರಿಬಿಟ್ಟಿದ್ದಾರೆ. ಸಂಸತ್ ಒಳಗಿನ ದಾಳಿ ಪ್ರಕರಣದ ತನಿಖೆ ದಾರಿ ತಪ್ಪಿಸಲು ನನ್ನ ಹಾಗೂ ಎಸ್‌ಎಫ್‌ಐ ಸಂಘಟನೆಯ ಹೆಸರನ್ನು ತಳುಕು ಹಾಕಲಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಆರೋಪಿ ಡಿ.ಮನೋರಂಜನ್ ಅವರ ಮನೆಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಿಸಲಾಗಿದೆ– ಪ್ರಜಾವಾಣಿ ಚಿತ್ರ

ಮಲ್ಲಾಪುರಕ್ಕೆ ಪೊಲೀಸರ ಭೇಟಿ

ಹಾಸನ: ಲೋಕಸಭೆಯಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಡಿ.ಮನೋರಂಜನ್ ಹುಟ್ಟೂರು ಅರಕಲಗೂಡು ತಾಲ್ಲೂಕಿನ ಮಲ್ಲಾಪುರ ಗ್ರಾಮಕ್ಕೆ ಕೊಣನೂರು ಪೊಲೀಸರು ಬುಧವಾರ ರಾತ್ರಿ ಭೇಟಿ ನೀಡಿ ಕುಟುಂಬದ ಕುರಿತು ಮಾಹಿತಿ ಕಲೆ ಹಾಕಿದರು.

‘ಯುವಕನ ತಂದೆ ದೇವರಾಜೇಗೌಡರು ಗ್ರಾಮದಲ್ಲಿ ನಾಲ್ಕು ಎಕರೆ ಫಾರ್ಮ್ ಹೌಸ್ ಹೊಂದಿದ್ದು, ನಿರ್ವಹಣೆಗೆ ಕುಟುಂಬವೊಂದನ್ನು ನಿಯೋಜಿಸಿದ್ದಾರೆ. ಆಗಾಗ ಬಂದು ಹೋಗುತ್ತಾರೆ. ಯುವಕನನ್ನು ನೋಡಿಲ್ಲ’ ಎಂದು ಗ್ರಾಮಸ್ಥರು ಮಾಹಿತಿ ನೀಡಿದರು.

‘ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ದೇವರಾಜೇ ಗೌಡರು ಊರು ಬಿಟ್ಟು 20-25 ವರ್ಷವಾಗಿದೆ. ಮಗ ಒಳ್ಳೆಯ ಪ್ರಜೆಯಾಗಲೆಂದು ಮೈಸೂರಿಗೆ ಕರೆದೊಯ್ದು ಓದಿಸಿದ್ದರು’ ಪೊಲೀಸರಿಗೆ ಮಾಹಿತಿ ನೀಡಿದರು.

ಡ್ಯಾನಿಯಲ್, ಅವ್ವಾದ್‌ಗೆ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ

ನವದೆಹಲಿ(ಪಿಟಿಐ): ಪ್ರಸಕ್ತ ಸಾಲಿನ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿಗೆ ಡ್ಯಾನಿಯಲ್ ಬ್ಯಾರೆನ್ ಬೊಯಿಮ್ ಹಾಗೂ ಅಲಿ ಅಬು ಅವ್ವಾದ್ ಅವರನ್ನು ಆಯ್ಕೆ ಮಾಡಲಾಗಿದೆ. ಅರ್ಜೆಂಟೀನಾ ಸಂಜಾತ ಬ್ಯಾರೆನ್‌ಹೋಮ್ ಅವರು ಪಿಯಾನೊ ವಾದಕ ಹಾಗೂ ವಾದ್ಯಗೋಷ್ಠಿಗಳ ನಿರ್ವಾಹಕರಾಗಿದ್ದಾರೆ. ಅವ್ವಾದ್ ಅವರು ಪ್ಯಾಲೆಸ್ಟೀನ್ ಪ್ರಜೆ.

‘ಈ ಇಬ್ಬರು ಇಸ್ರೇಲ್ ಹಾಗೂ ಪ್ಯಾಲೇಸ್ಟೀನ್ ನಡುವಿನ ಯುದ್ಧ ಕೊನೆಗಾಣಿಸಲು ತಮ್ಮ ಜೀವನವನ್ನೇ ಸಮರ್ಪಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ನೀಡಿದ ಕೊಡುಗೆ ಪರಿಗಣಿಸಿ ಶಾಂತಿ, ನಿಶ್ಶಸ್ತ್ರೀಕರಣ ಹಾಗೂ ಅಭಿವೃದ್ಧಿಗಾಗಿ ನೀಡುವ ಇಂದಿರಾ ಗಾಂಧಿ ಪ್ರಶಸ್ತಿಗೆ ಇಬ್ಬರನ್ನು ಆಯ್ಕೆ ಮಾಡಲಾಗಿದೆ’ ಎಂದು ಇಂದಿರಾ ಗಾಂಧಿ ಸ್ಮಾರಕ ಟ್ರಸ್ಟ್ ಹೇಳಿದೆ.

ವಕೀಲರ ಪತ್ರ: ಸಿಜೆಐ ಆಶ್ಚರ್ಯ

ನವದೆಹಲಿ: ವಕೀಲರು ತಮ್ಮ ಪ್ರಕರಣದ ವಿಚಾರಣೆ ನಡೆಸಲು ಇಂತಹ ನ್ಯಾಯಮೂರ್ತಿಯೇ ಬೇಕು, ಇಂತಹ ನ್ಯಾಯಮೂರ್ತಿ ಬೇಡ ಎಂದು ಹೇಳುವುದನ್ನು ಕೇಳಿದಾಗ ಆಶ್ಚರ್ಯ ಉಂಟಾಗುತ್ತದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಹೇಳಿದರು.

ಸೂಕ್ಷ್ಮ ಪ್ರಕರಣಗಳ ವಿಚಾರಣೆಯನ್ನು ನಿರ್ದಿಷ್ಟ ನ್ಯಾಯಪೀಠವೊಂದಕ್ಕೆ ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ವಕೀಲರ ಸಂಘದ ಮಾಜಿ ಅಧ್ಯಕ್ಷ ದುಷ್ಯಂತ್ ದವೆ ಮತ್ತು ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಪತ್ರ ಬರೆದ ನಂತರ ಸಿಜೆಐ ಈ ಮಾತು ಆಡಿದ್ದಾರೆ.

ಎಎಪಿಯ ಸತ್ಯೇಂದ್ರ ಜೈನ್ ಅವರ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ಅವರ ನ್ಯಾಯಪೀಠಕ್ಕೆ ವಹಿಸಲಾಗಿದೆ. ಏಕೆಂದರೆ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ ಅವರಿಗೆ ಅನಾರೋಗ್ಯದ ಕಾರಣ ಈ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲು ಆಗುತ್ತಿಲ್ಲ ಎಂದು ಸಿಜೆಐ ಅವರು ಜೈನ್ ಪರ ವಕೀಲ ಅಭಿಷೇಕ್ ಮನು ಸಿಂಘ್ವಿಗೆ ತಿಳಿಸಿದರು.

‘ಕೋರ್ಟ್‌ನ ರಿಜಿಸ್ಟ್ರಿಗೆ ಕೆಲ ಪತ್ರ ರವಾನಿಸಲಾಗಿದೆ. ಪ್ರಕರಣವನ್ನು ಬೇರೆಡೆ ವರ್ಗಾವಣೆ ಮಾಡಿದ್ದು ಏಕೆ ಎಂದು ಪ್ರಶ್ನಿಸಲಾಗಿದೆ. ಕಾರಣ ಹೇಳುತ್ತೇನೆ. ಆರೋಪ ಮಾಡುವುದು ಸುಲಭ. ನ್ಯಾಯಮೂರ್ತಿ ಬೋಪಣ್ಣ ಅವರ ಕಚೇರಿಯಿಂದ ಸಂದೇಶ ಬಂದಿತ್ತು... ವೈದ್ಯಕೀಯ ಕಾರಣಗಳಿಂದ ಅವರು ದೀಪಾವಳಿ ನಂತರ ಕರ್ತವ್ಯಕ್ಕೆ ಹಾಜರಾಗಲಿಲ್ಲ. ಹೀಗಾಗಿ ಈ ಪ್ರಕರಣವನ್ನು ನ್ಯಾಯಮೂರ್ತಿ ಬೇಲಾ ಅವರಿಗೆ ವಹಿಸಲಾಯಿತು’ ಎಂದು ಸಿಜೆಐ ವಿವರಿಸಿದರು.

14 ಸಂಸದರ ಅಮಾನತು

ಒಂದನೇ ಪುಟದಿಂದ....

ಆರಂಭದಲ್ಲಿ ಲೋಕಸಭೆಯ 14 ಸದಸ್ಯರನ್ನು ಅಮಾನತುಗೊಳಿಸಲಾಗಿತ್ತು. ಎಸ್.ಆರ್.ಪಾರ್ತಿಬನ್ ಅವರು ಕಲಾಪಕ್ಕೆ ಹಾಜರಾಗಿರಲಿಲ್ಲ. ‘ಅವರು ಚೆನ್ನೈಯಲ್ಲಿ ಇದ್ದಾರೆ. ಆದರೂ, ಅವರನ್ನು ಅಮಾನತು ಮಾಡಲಾಗಿದೆ’ ಎಂದು ಹಲವು ಸಂಸದರು ದೂರಿದರು. ವಿವಾದ ಆಗುತ್ತಿದ್ದಂತೆ ಅಮಾನತುಗೊಂಡವರ ಪಟ್ಟಿಯಿಂದ ಪಾರ್ತಿಬನ್ ಹೆಸರನ್ನು ಕೈಬಿಟ್ಟು ಲೋಪ ಸರಿಪಡಿಸಲಾಯಿತು.

ಹಟ ಬಿಡದ ಡೆರಿಕ್: ರಾಜ್ಯಸಭೆಯಲ್ಲಿ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ಟಿಎಂಸಿಯ ಡೆರಿಕ್ ಒಬ್ರಯಾನ್ ಅವರು ಧರಣಿ ಆರಂಭಿಸಿದರು. ಆರೋಪಿಗಳಿಗೆ ಪಾಸ್ ವ್ಯವಸ್ಥೆ ಮಾಡಿಸಿದ ಸಂಸದ ಪ್ರತಾಪ ಸಿಂಹ ಉಚ್ಚಾಟನೆ ಮಾಡಬೇಕು ಎಂದು ಆಗ್ರಹಿಸಿದರು. ಘೋಷಣೆಗಳನ್ನು ಕೂಗದಂತೆ ಸಭಾಪತಿ ಜಗದೀಪ್ ಧನಕರ್ ಸೂಚಿಸಿದರು. ಆಗ ಡೆರಿಕ್ ಅವರು ಸಭಾಪತಿ ಪೀಠದ ಸಮೀಪ ಧಾವಿಸಿ ಪ್ರತಿಭಟಿಸಿದರು. ಧನಕರ್ ಎದ್ದು ನಿಂತು ಎಚ್ಚರಿಕೆ ನೀಡಿದರು. ಸದನದಿಂದ ಕೂಡಲೇ ಹೊರಹೋಗುವಂತೆ ನಿರ್ದೇಶನ ನೀಡಿದರು. ಅದಕ್ಕೆ ಡೆರಿಕ್ ಒಪ್ಪಲಿಲ್ಲ. ಪ್ರತಿಭಟನೆ ಮುಂದುವರಿಸಿದರು. ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮಾತುಕತೆಗೆ ಆಹ್ವಾನಿಸಿ ಧನಕರ್ ಅವರು ಕಲಾಪವನ್ನು ಮುಂದೂಡಿದರು. ಬಳಿಕ ಕಲಾಪ ಆರಂಭವಾದಾಗ ಡೆರಿಕ್ ಅವರು ಪ್ರತಿಭಟನೆ ಮುಂದುವರಿಸಿದರು. ಸಭಾಪತಿ ಮತ್ತೊಮ್ಮೆ ಎಚ್ಚರಿಕೆ ನೀಡಿದರು.

ನಿಯಮ 256ರ ಅಡಿಯಲ್ಲಿ ಡೆರಿಕ್ ಅವರನ್ನು ಅಮಾನತುಗೊಳಿಸಲು ಸಭಾನಾಯಕ ಪೀಯೂಷ್ ಗೋಯಲ್ ಅವರು ಪ್ರಸ್ತಾವನೆ ಮಂಡಿಸಿದರು. ಅಮಾನತುಗೊಂಡ ಬಳಿಕವೂ ಡೆರಿಕ್ ಸದನದಿಂದ ಹೊರ ಹೋಗಲಿಲ್ಲ. ಅವರ ನಡವಳಿಕೆಯನ್ನು ಸದನದ ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿ ಸಭಾಪತಿ ಆದೇಶಿಸಿದರು. ಅವರ ಕಾರ್ಯವೈಖರಿ ಕುರಿತು ಮೂರು ತಿಂಗಳಲ್ಲಿ ವರದಿ ಸಲ್ಲಿಸಲು ಸೂಚಿಸಿದರು. ತಮ್ಮನ್ನು ಅಮಾನತುಗೊಳಿಸಿರುವುದನ್ನು ಖಂಡಿಸಿ ಒಬ್ರಯಾನ್ ಅವರು ಸಂಸತ್‌ನ ಹೊರಗೆ ಮೌನ ಪ್ರತಿಭಟನೆ ನಡೆಸಿದರು.

ಹಳೆಯ ಘಟನೆಗಳ ಉಲ್ಲೇಖಿಸಿದ ಜೋಶಿ: ಲೋಕಸಭೆಯಲ್ಲಿ ಹೇಳಿಕೆ ನೀಡಿದ ಪ್ರಲ್ಹಾದ ಜೋಶಿ, ‘ಬುಧವಾರ ನಡೆದ ಅಹಿತಕರ ಘಟನೆ ಗಂಭೀರವಾದುದು ಎಂಬುದನ್ನು ನಾವೆಲ್ಲರೂ ಒಪ್ಪುತ್ತೇವೆ. ಘಟನೆಯ ನಂತರ ಸ್ಪೀಕರ್ ಓಂ ಬಿರ್ಲಾ ಅವರು ಸದಸ್ಯರ ಜತೆಗೆ ಸಭೆ ನಡೆಸಿ ಸಲಹೆಗಳನ್ನು ಕೇಳಿದ್ದಾರೆ ಹಾಗೂ ಸಂಸತ್‌ನ ಭದ್ರತೆ ಹೆಚ್ಚಿಸುವುದಾಗಿಯೂ ಭರವಸೆ ನೀಡಿದ್ದಾರೆ. ಸಂಸದರ ಕೆಲವು ಸಲಹೆಗಳನ್ನು ಈಗಾಗಲೇ ಜಾರಿಗೆ ತರಲಾಗಿದೆ. ಭದ್ರತೆಯನ್ನು ಇನ್ನಷ್ಟು ಬಲಪಡಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಭಾಧ್ಯಕ್ಷರು ಅಭಯ ನೀಡಿದ್ದಾರೆ’ ಎಂದರು.

ಭದ್ರತಾ ಉಲ್ಲಂಘನೆಯ ಹಿಂದಿನ ಘಟನೆಗಳನ್ನು ಪಟ್ಟಿ ಮಾಡಿದ ಅವರು, ‘ಘೋಷಣೆ ಕೂಗುವುದು, ಕಾಗದಗಳನ್ನು ಎಸೆಯುವುದು ಮತ್ತು ಗ್ಯಾಲರಿಯಿಂದ ಜಿಗಿಯುವಂತಹ ಘಟನೆಗಳು ಈ ಹಿಂದೆಯೂ ನಡೆದಿವೆ. ನಾನು ಹಿಂದಿನ ಘಟನೆಗಳನ್ನು ಹೋಲಿಕೆ ಮಾಡುತ್ತಿಲ್ಲ ಮತ್ತು ಬುಧವಾರದ ಘಟನೆಯನ್ನು ಸಮರ್ಥಿಸುತ್ತಿಲ್ಲ. ಆದರೆ, ನಾವು ಹಿಂದಿನ ಘಟನೆಗಳಿಂದ ಪಾಠ ಕಲಿಯಬೇಕಾಗಿದೆ’ ಎಂದರು.

‘ಸಂಸತ್ ಭವನದ ಆಂತರಿಕ ಭದ್ರತೆಯು ಸ್ಪೀಕರ್ ಅವರ ಅಧೀನದಲ್ಲಿದೆ. ಉನ್ನತ ಮಟ್ಟದ ತನಿಖೆಗಾಗಿ ಸ್ಪೀಕರ್ ಅವರು ಗೃಹ ಕಾರ್ಯದರ್ಶಿಗೆ ಪತ್ರ ಬರೆದಿದ್ದು, ಈಗಾಗಲೇ ತನಿಖೆ ಆರಂಭವಾಗಿದೆ’ ಎಂದು ಸಚಿವರು ಸದನಕ್ಕೆ ತಿಳಿಸಿದರು.

ಅಮಾನತುಗೊಂಡ ಸಂಸದರು

ರಾಜ್ಯಸಭೆ
• ಡೆರಿಕ್ ಒಬ್ರಯಾನ್
ಲೋಕಸಭೆ
• ಟಿ.ಎನ್.ಪ್ರತಾಪನ್
• ಹಿಬಿ ಈಡನ್
• ಜ್ಯೋತಿಮಣಿ
• ರಮ್ಯಾ ಹರಿದಾಸ್
• ಡೀನ್ ಕುರಿಯೋಸ್
• ವಿ.ಕೆ.ಶ್ರೀಕಂದನ್
• ಬೆನ್ನಿ ಬೆಹ್ನಾನ್
• ಮೊಹಮ್ಮದ್ ಜಾವೆದ್
• ಮಾಣಿಕಂ ಟ್ಯಾಗೋರ್
• ಪಿ.ಆರ್.ನಟರಾಜನ್
• ಕನ್ನಿಮೋಳಿ
• ಕೆ.ಸುಬ್ಬರಾಯನ್
• ಎಸ್.ವೆಂಕಟೇಶನ್

ಸಂಸತ್‌ಗೆ ಸರ್ಪಗಾವಲು

ಭದ್ರತಾ ಲೋಪ ಘಟನೆಯ ಬೆನ್ನಲ್ಲೇ ಸಂಸತ್‌ನ ಭದ್ರತೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಸಂಸತ್‌ಗೆ ಪ್ರವೇಶಿಸುವವರ ದಾಖಲೆಗಳನ್ನು ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರು ಗುರುವಾರ ಕಟ್ಟುನಿಟ್ಟಾಗಿ ಪರಿಶೀಲಿಸಿದರು. ಸಂಸತ್‌ನ ಸುತ್ತಮುತ್ತಲ ಪ್ರದೇಶಗಳಲ್ಲಿ ಸರ್ಪಗಾವಲು ಹಾಕಲಾಗಿದೆ.

ಸಂಸದರ ಪ್ರವೇಶಕ್ಕಾಗಿ ಮೀಸಲಾದ ಮಕರ ದ್ವಾರದಿಂದ ಪ್ರವೇಶಿಸಲು ಮೇಘಾಲಯದ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಅವರಿಗೂ ಭದ್ರತಾ ಸಿಬ್ಬಂದಿ ಬಿಡಲಿಲ್ಲ. ಸಂಗ್ಮಾ ಅವರು ತಮ್ಮ ಕಾರಿನಿಂದ ಇಳಿದು ಶಾರ್ದೂಲ್ ದ್ವಾರದ ಮೂಲಕ ಸಂಸತ್ ಪ್ರವೇಶಿಸಿದರು.

ಬಿಗಿ ಭದ್ರತೆಯ ನಡುವೆಯೇ ಗುಜರಾತ್‌ನ ಬುಡಕಟ್ಟು ಪ್ರದೇಶವಾದ ಡ್ಯಾಂಗ್‌ನ ವಿದ್ಯಾರ್ಥಿಗಳ ದೊಡ್ಡ ಗುಂಪು ಸಂಸತ್ ಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿತು.

> **ಭದ್ರತಾ ವೈಫಲ್ಯದ ಬಗ್ಗೆ ಸರ್ಕಾರವನ್ನು ಪ್ರಶ್ನಿಸಿದ ಸಂಸದರನ್ನೇ ಅಮಾನತು ಮಾಡಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ. ಕೇಂದ್ರ ಸರ್ಕಾರವು ಸಂಸತ್ತನ್ನೂ ‘ರಬ್ಬರ್ ಸ್ಟ್ಯಾಂಪ್’ ಹಂತಕ್ಕೆ ಇಳಿಸಿದೆ**
> **ಕೆ.ಸಿ.ವೇಣುಗೋಪಾಲ್,**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> **ಭದ್ರತಾ ಲೋಪ ವಿಷಯವು ನಮ್ಮೆಲ್ಲರಿಗೂ (ಸಂಸದರಿಗೆ) ಸಂಬಂಧಿಸಿದ್ದು. ನಾವೆಲ್ಲ ಏಕ ಧ್ವನಿಯಿಂದ ಮಾತನಾಡಬೇಕು. ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು**
> **ಪ್ರಲ್ಹಾದ ಜೋಶಿ,**
> ಸಂಸದೀಯ ವ್ಯವಹಾರಗಳ ಸಚಿವ

ದೇಶದ್ರೋಹ ಕಾಯ್ದೆಯಡಿ ಪ್ರಕರಣ

ಒಂದನೇ ಪುಟದಿಂದ...

ಸಂಸತ್ತಿನ ಭದ್ರತೆಯ ಉಲ್ಲಂಘನೆಯು ‘ಭಯೋತ್ಪಾದನಾ ಕ್ರಮ’ ಮತ್ತು ಭೀತಿ ಮೂಡಿಸಲು ಮಾಡಿದ ‘ಯೋಜಿತ’ ದಾಳಿ ಎಂದು ದೆಹಲಿ ಪೊಲೀಸರು ಹೇಳಿದರು.

ದಾಳಿ ಪ್ರಕರಣದ ‘ಪ್ರಮುಖ ರೂವಾರಿ’ ಕೋಲ್ಕತ್ತ ಮೂಲದ ಶಿಕ್ಷಕ ಲಲಿತ್ ಝಾ ಬಂಧಿಸಲು ಪೊಲೀಸರು ತೀವ್ರ ಶೋಧ ನಡೆಸಿದ್ದರು. ಸಂಸತ್ ಭವನಕ್ಕೆ 500 ಮೀಟರ್ ದೂರದಲ್ಲಿರುವ ಕರ್ತವ್ಯ ಪಥ ಠಾಣೆಗೆ ಗುರುವಾರ ರಾತ್ರಿ ಬಂದ ಆತನನ್ನು ಪೊಲೀಸರು ಬಂಧಿಸಿದರು.

ಲಲಿತ್ ಝಾ ವಿರುದ್ಧ ಪ್ರಕರಣವನ್ನು ದಾಖಲಿಸಿದ ಪೊಲೀಸರು ಬಳಿಕ, ಈತನನ್ನು ಈ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ಘಟಕದ ವಶಕ್ಕೆ ಒಪ್ಪಿಸಿದರು. ಈತನ ಬಂಧನದೊಂದಿಗೆ ಒಟ್ಟು 6 ಜನರನ್ನು ಬಂಧಿಸಿದಂತಾಗಿದೆ.

‘ಯುಎಪಿಎ ಅಡಿ ದಾಖಲಿಸುವ ಪ್ರಕರಣಗಳು ಜಾಮೀನುರಹಿತವಾಗಿರುತ್ತವೆ. ಈ ಘಟನೆಗೂ ಯಾವುದೇ ಭಯೋತ್ಪಾದಕ ಸಂಘಟನೆಗೂ ನಂಟು ಇದುವರೆಗೆ ಕಂಡುಬಂದಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖೆಯ ಸಂದರ್ಭದಲ್ಲಿ ಇನ್ನೂ ಇಬ್ಬರ ಹೆಸರು ಪ್ರಸ್ತಾಪ ಆಗಿದೆ, ಎಲ್ಲವನ್ನೂ ವ್ಯವಸ್ಥಿತವಾಗಿ ಯೋಜಿಸಿ ಕೃತ್ಯ ಎಸಗಿದ್ದಾರೆ ಎಂದು ಮೂಲಗಳು ಹೇಳಿವೆ. ಆರೋಪಿಗಳು ಸಂಸತ್ತಿಗೆ ಬರುವುದಕ್ಕೂ ಮೊದಲು ಗುರುಗ್ರಾಮದಲ್ಲಿ ವಿಶಾಲ್ ಶರ್ಮ ಅಲಿಯಾಸ್ ವಿಕ್ಕಿ ಎನ್ನುವವರ ಮನೆಯಲ್ಲಿ ಇದ್ದರು. ವಿಶಾಲ್ ಅವರು ಈಗಲೂ ಪೊಲೀಸರ ವಶದಲ್ಲಿದ್ದಾರೆ.

ನಾಲ್ವರು ಆರೋಪಿಗಳ ವೈದ್ಯಕೀಯ ತಪಾಸಣೆಯನ್ನು ರಾಮ ಮನೋಹರ ಲೋಹಿಯಾ ಆಸ್ಪತ್ರೆಯಲ್ಲಿ ಬುಧವಾರ ಮಧ್ಯರಾತ್ರಿ ನಡೆಸಲಾಯಿತು. ಯುಎಪಿಎ ಸೆಕ್ಷನ್ 16 (ಭಯೋತ್ಪಾದಕ ಕೃತ್ಯಕ್ಕೆ ಶಿಕ್ಷೆ), ಸೆಕ್ಷನ್ 18 (ಪಿತೂರಿಗೆ ಶಿಕ್ಷೆ) ಮತ್ತು ಐಪಿಸಿಯ ಸೆಕ್ಷನ್ 120ಬಿ (ಕ್ರಿಮಿನಲ್ ಪಿತೂರಿ), ಸೆಕ್ಷನ್ 452 (ಅಕ್ರಮ ಪ್ರವೇಶ), ಸೆಕ್ಷನ್ 153 (ದಂಗೆಗೆ ಪ್ರಚೋದನೆ ನೀಡುವುದು), ಸೆಕ್ಷನ್ 186 (ಸಾರ್ವಜನಿಕ ಸೇವಕರ ಕರ್ತವ್ಯಕ್ಕೆ ಅಡ್ಡಿ ಉಂಟುಮಾಡುವುದು) ಸೇರಿ ಕೆಲವು ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ಆರೋಪಿಗಳನ್ನು ರಾಜತಾಂತ್ರಿಕ ಭದ್ರತಾ ಪಡೆಯ ಕಚೇರಿಯಲ್ಲಿ ವಿಚಾರಣೆಗೆ ಗುರಿಪಡಿಸಲಾಯಿತು. ಆರಂಭದಲ್ಲಿ ನೀಲಂ, ಅಮೋಲ್ ಅವರನ್ನು ಸಂಸತ್ ಬೀದಿಯ ಠಾಣೆಗೆ ಕರೆದೊಯ್ಯಲಾಗಿತ್ತು. ತನಿಖೆ ಸಂದರ್ಭದಲ್ಲಿ ಎರಡು ಸಂಘಟನೆಗಳ ಹೆಸರು ಪ್ರಸ್ತಾಪ ಆಗಿದೆ, ಅವುಗಳ ಪಾತ್ರದ ಬಗ್ಗೆ ಪರಿಶೀಲನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆರೋಪಿಗಳು ಒಂದೇ ರೀತಿ ಉತ್ತರಿಸುತ್ತಿದ್ದಾರೆ. ಪೊಲೀಸರ ಕೈಗೆ ಸಿಕ್ಕಿಬಿದ್ದು, ತನಿಖೆ ಎದುರಿಸಬೇಕಾಗಿ ಬಂದರೆ ಹೇಗೆ ಉತ್ತರಿಸಬೇಕು ಎಂದು ಅವರೆಲ್ಲರು ಸಿದ್ಧತೆ ನಡೆಸಿದ್ದರು ಅನ್ನಿಸುತ್ತದೆ ಎಂದು ಮೂಲಗಳು ಹೇಳಿವೆ.

ಭಗತ್‌ಸಿಂಗ್ ಪ್ರೇರಣೆ: ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರಿಂದ ಪ್ರೇರಣೆ ಪಡೆದು ಲಲಿತ್ ಹಾಗೂ ಇತರರು, ದೇಶದ ಗಮನ ಸೆಳೆಯಲು ಈ ಕೃತ್ಯ ಎಸಗಲು ಮುಂದಾಗಿದ್ದರು ಎನ್ನಲಾಗಿದೆ. 6 ಮಂದಿ ಸಾಮಾಜಿಕ ಜಾಲತಾಣಗಳ ಮೂಲಕ ಪರಿಚಿತರಾಗಿದ್ದು, ಫೇಸ್‌ಬುಕ್‌ನಲ್ಲಿ ಭಗತ್ ಸಿಂಗ್ ಅಭಿಮಾನಿಗಳ ಪುಟ ಸೇರಿದ್ದರು ಎಂದು ಗೊತ್ತಾಗಿದೆ.

ತನಿಖೆಯ ಸಂದರ್ಭದಲ್ಲಿ ಅಮೋಲ್ ಅವರು, ರೈತರ ಪ್ರತಿಭಟನೆ, ಮಣಿಪುರದಲ್ಲಿ ನಡೆದಿದ್ದ ಜನಾಂಗೀಯ ಘರ್ಷಣೆ ಹಾಗೂ ನಿರುದ್ಯೋಗ ಸಮಸ್ಯೆಗಳಿಂದ ನಾವು ತೀವ್ರ ಬೇಸರಗೊಂಡಿದ್ದಾಗಿ ತಿಳಿಸಿದ್ದಾರೆ. ಇವರೆಲ್ಲರ ಸಿದ್ಧಾಂತ ಒಂದೇ ಆಗಿತ್ತು. ಹೀಗಾಗಿ ಎಲ್ಲರೂ ಸೇರಿ ಸರ್ಕಾರಕ್ಕೆ ಒಂದು ಸಂದೇಶ ನೀಡಲು ಬಯಸಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ವರ್ಷದ ಹಿಂದೆ ಮೈಸೂರಿನಲ್ಲಿ ಭೇಟಿ

ಲಲಿತ್, ಸಾಗರ್ ಮತ್ತು ಮನೋರಂಜನ್ ಅವರು ಒಂದು ವರ್ಷದ ಹಿಂದೆ ಮೈಸೂರಿನಲ್ಲಿ ಭೇಟಿ ಮಾಡಿದ್ದರು. ಅಲ್ಲಿ ಅವರು ಸಂಸತ್ತಿನ ಒಳಕ್ಕೆ ನುಗ್ಗುವ ಯೋಜನೆ ಸಿದ್ಧಪಡಿಸಿದ್ದರು. ನಂತರ ಅವರು ಅಮೋಲ್ ಮತ್ತು ನೀಲಂ ಅವರನ್ನು ತಮ್ಮ ಯೋಜನೆಗೆ ಸೇರಿಸಿಕೊಂಡರು. ಮುಂದಾಳತ್ವ ವಹಿಸಿಕೊಂಡಿದ್ದ ಲಲಿತ್, ಸಂಸತ್ತಿನ ಎಲ್ಲ ಪ್ರವೇಶ ದ್ವಾರಗಳನ್ನು ಮುಂಗಾರು ಅಧಿವೇಶನದ ಅವಧಿಯಲ್ಲಿ ತಿಳಿದುಕೊಳ್ಳುವಂತೆ ಮನೋರಂಜನ್ ಅವರಿಗೆ ಸೂಚನೆ ನೀಡಿದ್ದರು.

‘ಜುಲೈನಲ್ಲಿ ಮನೋರಂಜನ್ ದೆಹಲಿಗೆ ಬಂದಿದ್ದರು. ಸಂಸದರೊಬ್ಬರಿಂದ ಸಂದರ್ಶಕರ ಪಾಸ್ ಪಡೆದು ಸಂಸತ್ತಿಗೆ ಒಳಗೆ ಹೋಗಿ ಬಂದಿದ್ದರು. ಶೂ ಅನ್ನು ಪರಿಶೀಲಿಸುವುದಿಲ್ಲ ಎಂಬುದನ್ನು ಆಗ ಅರಿತುಕೊಂಡಿದ್ದರು’ ಎಂದು ಮೂಲವೊಂದು ತಿಳಿಸಿದೆ. ಬುಧವಾರ ಲಲಿತ್ ಅವರೂ ಸಂಸತ್ತಿಗೆ ಬಂದಿದ್ದರು. ಇಬ್ಬರಿಗೆ ಮಾತ್ರ ಪಾಸ್ ದೊರೆತಾಗ, ನಾಲ್ಕೂ ಮಂದಿಯ ಮೊಬೈಲ್ ಫೋನ್‌ಗಳನ್ನು ಲಲಿತ್ ತೆಗೆದುಕೊಂಡರು.

ಲೋಕಸಭೆಯ ಒಳಗೆ, ಸಂಸತ್ತಿನ ಹೊರಗಡೆ ಬಳಸಲಾದ ಹೊಗೆ ಉಗುಳುವ ಡಬ್ಬಿಗಳನ್ನು ಅಮೋಲ್ ಅವರು ಮಹಾರಾಷ್ಟ್ರದ ಕಲ್ಯಾಣ್‌ನಿಂದ ತಂದಿದ್ದರು.

ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರದಲ್ಲಿ ಸಾವು

ಕುಟುಂಬಸ್ಥರಿಗೆ 64 ಶವ ಹಸ್ತಾಂತರ

ಇಂಫಾಲ್(ಪಿಟಿಐ): ಕುಕಿ ಹಾಗೂ ಮೈತೇಯಿ ಬುಡಕಟ್ಟುಗಳಿಗೆ ಸೇರಿದ ಒಟ್ಟು 64 ಸಂತ್ರಸ್ತರ ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕಣಿವೆ ರಾಜ್ಯ ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಆರಂಭವಾದ ನಂತರ ನಡೆದ ಹಿಂಸಾಚಾರದಲ್ಲಿ ಮೃತಪಟ್ಟಿದ್ದವರ ಶವಗಳನ್ನು ವಿವಿಧ ಆಸ್ಪತ್ರೆಗಳ ಶವಾಗಾರದಲ್ಲಿಯೇ ಇಡಲಾಗಿತ್ತು.

ಜೆಎನ್‌ಐಎಂಎಸ್ ಹಾಗೂ ಆರ್‌ಐಎಂಎಸ್ ಆಸ್ಪತ್ರೆಗಳಲ್ಲಿ ಇರಿಸಲಾಗಿದ್ದ ಕುಕಿ ಸಮುದಾಯದ 60 ಮೃತದೇಹಗಳನ್ನು ಬಿಗಿ ಭದ್ರತೆ ನಡುವೆ ಏರ್‌ಲಿಫ್ಟ್ ಮಾಡಲಾಯಿತು.ಮಣಿಪುರ ಪೊಲೀಸರು ಹಾಗೂ ಸೇನೆಯ ಅಸ್ಸಾಂ ರೈಫಲ್ಸ್ ಯೋಧರು ಭದ್ರತೆ ಒದಗಿಸಿದ್ದರು. ಚುರಚಾಂದಪುರದ ಶವಾಗಾರದಲ್ಲಿ ಮೈತೇಯಿ ಸಮುದಾಯಕ್ಕೆ ಸೇರಿದವರ ನಾಲ್ಕು ಮೃತದೇಹಗಳನ್ನು ಇಡಲಾಗಿತ್ತು. ಅವುಗಳನ್ನು ಸಹ ಇಂಫಾಲ್‌ಗೆ ತಂದು, ಕುಟುಂಬಗಳಿಗೆ ಹಸ್ತಾಂತರಿಸಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಜನಾಂಗೀಯ ಸಂಘರ್ಷ ಕುರಿತು ನಡೆಯುತ್ತಿರುವ ತನಿಖೆ, ಪರಿಹಾರ ಕಾರ್ಯಗಳು ಹಾಗೂ ಪುನರ್ವಸತಿಯ ಮೇಲ್ವಿಚಾರಣೆಗಾಗಿ ಹೈಕೋರ್ಟ್‌ನ ಮೂವರು ನಿವೃತ್ತ ನ್ಯಾಯಮೂರ್ತಿಗಳನ್ನು ಒಳಗೊಂಡ ಸಮಿತಿಯನ್ನು ಸುಪ್ರೀಂ ಕೋರ್ಟ್ ರಚಿಸಿದೆ. ನ್ಯಾಯಮೂರ್ತಿಗಳಾದ ಗೀತಾ ಮಿತ್ತಲ್, ಶಾಲಿನಿ ಜೋಷಿ ಹಾಗೂ ಆಶಾ ಮೆನನ್ ಈ ಸಮಿತಿಯಲ್ಲಿದ್ದಾರೆ.

ಸಮಿತಿಯ ಶಿಫಾರಸಿನಂತೆ, ಅಂತ್ಯಕ್ರಿಯೆಗಾಗಿ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸುವಂತೆಇತ್ತೀಚೆಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ರಾಜ್ಯದಲ್ಲಿ ನಡೆದ ಹಿಂಸಾಚಾರದಲ್ಲಿ 175 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ, 169 ಮಂದಿ ಗುರುತಿಸಲಾಗಿದೆ ಎಂದು ಸಮಿತಿಯ ವರದಿಯಲ್ಲಿ ಹೇಳಲಾಗಿದೆ.

ಮಥುರಾ ಮಸೀದಿ ಸಮೀಕ್ಷೆಗೆ ಕೋರ್ಟ್ ಅಸ್ತು

ಮೇಲ್ವಿಚಾರಣೆ ನಡೆಸಲು ಆಯುಕ್ತರನ್ನಾಗಿ ವಕೀಲರೊಬ್ಬರ ನೇಮಕಕ್ಕೆ ಒಪ್ಪಿಗೆ

ಪ್ರಯಾಗರಾಜ್ (ಪಿಟಿಐ): ಮಥುರಾದಲ್ಲಿ ಕೃಷ್ಣ ಜನ್ಮಭೂಮಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಶಾಹಿ ಈದ್ಗಾ ಆವರಣದಲ್ಲಿ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಮೀಕ್ಷೆ ನಡೆಸಲು ಅಲಹಾಬಾದ್ ಹೈಕೋರ್ಟ್ ಗುರುವಾರ ಅವಕಾಶ ನೀಡಿದೆ.

ಮಸೀದಿಯ ಸಮೀಕ್ಷಾ ಕಾರ್ಯದ ಮೇಲ್ವಿಚಾರಣೆ ನಡೆಸಲು ವಕೀಲರೊಬ್ಬರನ್ನು ಆಯುಕ್ತರನ್ನಾಗಿ ನೇಮಿಸಲು ನ್ಯಾಯಮೂರ್ತಿ ಮಯಾಂಕ್ ಕುಮಾರ್ ಜೈನ್ ಅವರಿರುವ ಏಕಸದಸ್ಯ ಪೀಠವು ಒಪ್ಪಿಗೆ ನೀಡಿದೆ. ಈ ಮಸೀದಿಯು ಹಿಂದೆ ಹಿಂದೂ ದೇವಸ್ಥಾನ ಆಗಿತ್ತು ಎಂದು ಹೇಳುವ ಕೆಲವು ಕುರುಹುಗಳು ಇವೆ ಎಂಬುದು ಅರ್ಜಿದಾರರ ವಾದ.

ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ. ಸಮೀಕ್ಷಾ ಕಾರ್ಯವು ಹೇಗಿರಬೇಕು ಎಂಬುದನ್ನು ಅಂದು ಪರಿಶೀಲಿಸಬಹುದು ಎಂದು ಕೋರ್ಟ್ ಹೇಳಿದೆ. ದೇವಸ್ಥಾನ – ಮಸೀದಿಗೆ ಸಂಬಂಧಿಸಿದ ವ್ಯಾಜ್ಯವೊಂದರಲ್ಲಿ ಸಮೀಕ್ಷೆ ನಡೆಸುವುದಕ್ಕೆ ಹೈಕೋರ್ಟ್ ಅನುಮತಿ ನೀಡಿರುವುದು ಈಚಿನ ತಿಂಗಳಲ್ಲಿ ಇದು ಎರಡನೆಯ ನಿದರ್ಶನ. ವಾರಾಣಸಿಯ ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದಲ್ಲಿ ಇರುವ ಜ್ಞಾನವಾಪಿ ಮಸೀದಿಯ ಸಮೀಕ್ಷೆಯನ್ನು ಭಾರತೀಯ ಪುರಾತತ್ವ ಇಲಾಖೆಯು ಈಚೆಗೆ ಪೂರ್ಣಗೊಳಿಸಿದೆ. ಆದರೆ ಈ ಸಮೀಕ್ಷೆಯ ವರದಿ ಸಲ್ಲಿಸುವುದಕ್ಕೆ ಸ್ಥಳೀಯ ನ್ಯಾಯಾಲಯವೊಂದರಿಂದ ಹೆಚ್ಚಿನ ಕಾಲಾವಕಾಶ ಕೋರಿದೆ.

ಹಿಂದೂ ದೇವಸ್ಥಾನಗಳಲ್ಲಿನ ಕಂಬಗಳ ಲಕ್ಷಣವನ್ನು ಹೊಂದಿರುವ ಕಮಲ ಆಕಾರದ ಒಂದು ಕಂಬ ಹಾಗೂ ಶೇಷನಾಗನ ಚಿತ್ರವೊಂದು ಮಸೀದಿ ಆವರಣದಲ್ಲಿ ಇದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ ಎಂದು ವಕೀಲ ವಿಷ್ಣು ಶಂಕರ್ ಜೈನ್ ತಿಳಿಸಿದ್ದಾರೆ. ಕಂಬದ ಬುಡದಲ್ಲಿ ಹಿಂದೂ ಧಾರ್ಮಿಕ ಸಂಕೇತಗಳು ಹಾಗೂ ಕೆತ್ತನೆಗಳು ಇವೆ ಎಂದು ಕೂಡ ಹೇಳಲಾಗಿದೆ.

ಶಾಹಿ ಈದ್ಗಾ ಮಸೀದಿಯನ್ನು ಮೊಘಲ್ ದೊರೆ ಔರಂಗಜೇಬ ಶ್ರೀಕೃಷ್ಣ ಜನ್ಮಭೂಮಿಯ ಒಂದು ಭಾಗವನ್ನು ಧ್ವಂಸಗೊಳಿಸಿ ಕಟ್ಟಿದ್ದ ಎಂಬುದು ಅರ್ಜಿದಾರರ ವಾದ.

ಮುಂಬೈ ಧಾರಣೆ

ಶೇಂಗಾ

14-12-2023

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	867 (875)
ಪಾಮ್ ವಾರದ ಡೆಲಿವರಿ	824 (818)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 62,200 (60,900)

ಬೆಳ್ಳಿ ಕೆ.ಜಿ 74,000 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ


ಚಿನ್ನದ ದರ ₹1,130 ಬೆಳ್ಳಿ ₹2,350 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂ.ಗೆ ₹1,130 ಏರಿಕೆಯಾಗಿ, ₹62,950ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹2,350 ಹೆಚ್ಚಳವಾಗಿ ₹77,400 ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಕೆ ಆಗಿದ್ದರಿಂದ ದೇಶಿಯ ಮಾರುಕಟ್ಟೆಯಲ್ಲೂ ಬೆಲೆ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,926
ಇಂದಿನ ಅಂತ್ಯ	21,182
▲	256
ದಿನದ ಗರಿಷ್ಠ	21,210

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹600
12 ಮೊಟ್ಟೆಗೆ	₹80

ಮೈಸೂರು

100 ಮೊಟ್ಟೆಗೆ	₹604

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1640 (1640)
ಸೋಯಾ (ರಿಫೈಂಡ್)	₹905 (910)
ಸೂರ್ಯಕಾಂತಿ (ರಿಫೈಂಡ್)	₹925 (925)
ಪಾಮೋಲಿನ್	₹822 (820)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹239-465

ದ್ವಿತಳಿ (ಬಿ.ವಿ) ₹235-572

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹148

ಆರ್‌ಎಸ್‌ಎಸ್-5 ₹144

ಗುಡ್ ಲಾಟ್ ₹127

28.69 ಲಕ್ಷ ಮಹಿಳೆಯರು ಹೊಸ ಸೇರ್ಪಡೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆಗೆ ಹೊಸದಾಗಿ 28.69 ಲಕ್ಷ ಮಹಿಳಾ ಉದ್ಯೋಗಿಗಳು ಸೇರ್ಪಡೆಯಾಗಿದ್ದಾರೆ.

2019–20ರ ಕೋವಿಡ್ ಸಾಂಕ್ರಾಮಿಕದ ವೇಳೆ ಹೊಸದಾಗಿ ಮಹಿಳಾ ಉದ್ಯೋಗಿಗಳ ಸೇರ್ಪಡೆಯು 15.93 ಲಕ್ಷ ಇತ್ತು ಎಂದು ಕೇಂದ್ರ ಸರ್ಕಾರವು, ರಾಜ್ಯಸಭೆಗೆ ತಿಳಿಸಿದೆ.

'ಈ ಹೊಸ ಸೇರ್ಪಡೆಯು ಉದ್ಯೋಗ ಸೃಷ್ಟಿ, ಉದ್ಯೋಗ ಮಾರುಕಟ್ಟೆಯ ಔಪಚಾರಿಕತೆ ಮತ್ತು ಸಂಘಟಿತ, ಅರೆ-ಸಂಘಟಿತ ವಲಯದ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆಯ ಪ್ರಯೋಜನ ಲಭಿಸುತ್ತಿರುವ ಸೂಚಕವಾಗಿದೆ' ಎಂದು ಕೇಂದ್ರ ಕಾರ್ಮಿಕ ಖಾತೆಯ ರಾಜ್ಯ ಸಚಿವ ರಾಮೇಶ್ವರ್ ತೇಲಿ ತಿಳಿಸಿದ್ದಾರೆ.

ಗರಿಷ್ಠ ಪಿಂಚಣಿ: ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸಿದ ನೌಕರರ ಭವಿಷ್ಯ ನಿಧಿ ಸಂಘಟನೆ

ಏಕಾಏಕಿ ಅರ್ಜಿ ಅಮಾನ್ಯಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರಿಷ್ಠ ಪಿಂಚಣಿಗೆ ಸಂಬಂಧಿಸಿದಂತೆ ಉದ್ಯೋಗಿಗಳು, ಕಾರ್ಮಿಕ ಸಂಘಟನೆಗಳು ಹಾಗೂ ಉದ್ಯೋಗದಾತ ಸಂಸ್ಥೆಗಳು ಸ್ಪಷ್ಟನೆ ಬಯಸಿ ಕೇಳಿದ ಸಾಮಾನ್ಯ ಪ್ರಶ್ನೆಗಳಿಗೆ, ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಉತ್ತರಿಸಿದೆ.

ಉದ್ಯೋಗಿಗಳ ಪಿಂಚಣಿ (ತಿದ್ದುಪಡಿ) 2014ರ ಯೋಜನೆಯ (ಇಪಿಎಸ್) ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದ ಒಂದು ವರ್ಷದ ಬಳಿಕ ತನ್ನ ವೆಬ್‌ಸೈಟ್‌ನಲ್ಲಿ ಈ ಪರಿಷ್ಕೃತ ಉತ್ತರ ಪ್ರಕಟಿಸಿದೆ.

ಹೆಚ್ಚಿನ ವೇತನ ಆಧಾರದ ಮೇಲೆ ಗರಿಷ್ಠ ಪಿಂಚಣಿ ಪಡೆಯುವ ಸಂಬಂಧ ಉದ್ಯೋಗಿಗಳು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅದಕ್ಕೆ ಲಗತ್ತಿಸಿರುವ ದಾಖಲೆಗಳ (ಉದ್ಯೋಗಿ ಮತ್ತು ಉದ್ಯೋಗದಾತ ಸಂಸ್ಥೆಯ ಜಂಟಿ ಘೋಷಣೆ ಸಹಿತ) ಮೌಲ್ಯಮಾಪನದ ವೇಳೆ ತಲೆದೋರಿದ್ದ ಗೊಂದಲ ಪರಿಹರಿಸುವ ಪ್ರಯತ್ನ ಮಾಡಿದೆ.

ಯಾವೆಲ್ಲಾ ದಾಖಲೆ ಸಲ್ಲಿಸಬೇಕು?: ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) 1952ರ ಯೋಜನೆಯ 26(6)ರ ಅನ್ವಯ ₹15 ಸಾವಿರ ಮಿತಿಗಿಂತಲೂ ಹೆಚ್ಚಿನ ಪಿಂಚಣಿ ಕೋರಿ ಉದ್ಯೋಗಿಯು, ಸಂಬಂಧಪಟ್ಟ ಉದ್ಯೋಗದಾತ ಸಂಸ್ಥೆಯಲ್ಲಿ ಕೋರಿಕೆ ಸಲ್ಲಿಸಬೇಕಿದೆ. ಆ ಬಳಿಕ ಸಂಸ್ಥೆಯು ತನ್ನ ಮೊಹರಿನೊಂದಿಗೆ ನೀಡಿದ ದಾಖಲೆಗಳ ಸಹಿತ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಿದೆ. ಈ ಮಾಹಿತಿಯನ್ನು ಪರಿಶೀಲನೆ ನಡೆಸುವುದು ಭವಿಷ್ಯ ನಿಧಿ ಕಚೇರಿಯ ಕ್ಷೇತ್ರ ಅಧಿಕಾರಿಗಳ ಹೊಣೆಯಾಗಿದೆ.

ಈ ಅರ್ಜಿಯೊಂದಿಗೆ ಉದ್ಯೋಗಿಯು ಸಂಸ್ಥೆಯಿಂದ ನೀಡಿರುವ ವೇತನದ ವಿವರ ಸಲ್ಲಿಸಿರಬೇಕಿದೆ. ತಿಂಗಳವಾರು ವೇತನದ ಪಟ್ಟಿಯೂ ಇರಬೇಕು. ಜಂಟಿ ಘೋಷಣೆಗೆ ಸಂಬಂಧಿಸಿದಂತೆ ಸಂಸ್ಥೆ ನೀಡಿರುವ ಪತ್ರವನ್ನು ಲಗತ್ತಿಸಿರುವುದು ಕಡ್ಡಾಯ.

ಇದರೊಟ್ಟಿಗೆ ಗರಿಷ್ಠ ಪಿಂಚಣಿ ಸಂಬಂಧ 2022ರ ನವೆಂಬರ್ 4ರಂದು ಭವಿಷ್ಯ ನಿಧಿ ಕಚೇರಿಯಿಂದ ಸಂಸ್ಥೆಗೆ ನೀಡಿರುವ ಪತ್ರವನ್ನೂ ಲಗತ್ತಿಸಬೇಕಿದೆ. ಅಲ್ಲದೇ, ಉದ್ಯೋಗಿಯು ನೌಕರರ ಭವಿಷ್ಯ ನಿಧಿಗೆ ತಿಂಗಳುವಾರು ನೀಡಿರುವ ಕೊಡುಗೆಯ ವಿವರವನ್ನೂ ನೀಡಬೇಕಿದೆ.

ತಿರಸ್ಕಾರಕ್ಕೆ ಅವಕಾಶವಿಲ್ಲ: ಆನ್‌ಲೈನ್‌ನಲ್ಲಿ ಉದ್ಯೋಗಿಯು ಸೂಕ್ತ ದಾಖಲೆಗಳನ್ನು ಅಪ್‌ಲೋಡ್ ಮಾಡಿಲ್ಲ ಎಂಬ ಆಧಾರದ ಮೇಲೆ ಅರ್ಜಿಯನ್ನು ಏಕಾಏಕಿ ತಿರಸ್ಕರಿಸುವ ಅಧಿಕಾರ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಗೆ ಇಲ್ಲ ಎಂದು ಇಪಿಎಫ್‌ಒ ಸ್ಪಷ್ಟಪಡಿಸಿದೆ.

ಉದ್ಯೋಗಿಗೆ ಸಂಬಂಧಪಟ್ಟ ಅಗತ್ಯ ದಾಖಲೆಗಳನ್ನು ಉದ್ಯೋಗದಾತ ಸಂಸ್ಥೆಯಿಂದ ಸಂಗ್ರಹಿಸುವುದು ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ಆಯುಕ್ತರ ಹೊಣೆಯಾಗಿದೆ. ಸಂಬಳದ ವಿವರ ಸೇರಿದಂತೆ ಅಗತ್ಯ ದಾಖಲೆಗಳನ್ನು ಸಂಸ್ಥೆಯು ಸಲ್ಲಿಸದಿದ್ದರೆ ಮಾತ್ರ ಅರ್ಜಿ ತಿರಸ್ಕಾರವಾಗುತ್ತದೆ ಎಂದು ಹೇಳಿದೆ.

ಪಿಂಚಣಿ ಲೆಕ್ಕಾಚಾರ ಹೇಗೆ?

ಇಪಿಎಸ್ 1995ರಲ್ಲಿ ನಿಗದಿಪಡಿಸಿರುವ ಸೂತ್ರವನ್ನೇ ಪಿಂಚಣಿ ಲೆಕ್ಕಾಚಾರಕ್ಕೆ ಪರಿಗಣಿಸಲಾಗುತ್ತದೆ. ಪಿಂಚಣಿಗೆ ಅರ್ಹವಾದ ವೇತನವನ್ನು ಪಿಂಚಣಿಗೆ ಅರ್ಹವಾದ ಸೇವಾವಧಿಯೊಂದಿಗೆ ಗುಣಿಸಲಾಗುತ್ತದೆ. ಬರುವ ಮೊತ್ತವನ್ನು 70ರಿಂದ ಭಾಗಿಸಲಾಗುತ್ತದೆ. ಆಗ ಉಳಿಯುವ ಮೊತ್ತವೇ ಇಪಿಎಸ್ ಪಿಂಚಣಿಯಾಗಿರುತ್ತದೆ.

ಅಂದರೆ ನೌಕರ ನಿವೃತ್ತಿಯಾದ ದಿನದ ಹಿಂದಿನ 60 ತಿಂಗಳ ಸರಾಸರಿ ವೇತನ ಹಾಗೂ ನೌಕರ ಸಲ್ಲಿಸಿದ ಸೇವಾವಧಿಗೆ ಎರಡು ಹೆಚ್ಚುವರಿ ವರ್ಷಗಳ ಕೃಪಾಂಕವನ್ನು ಪಿಂಚಣಿ ಲೆಕ್ಕಾಚಾರಕ್ಕೆ ಪರಿಗಣಿಸಲಾಗುತ್ತದೆ.

2014ರ ಸೆಪ್ಟೆಂಬರ್ 1ರ ನಂತರ ನಿವೃತ್ತಿ ಹೊಂದಿದ ಉದ್ಯೋಗಿಗಳು ಹೊಸ ಪಿಂಚಣಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಅಂತಹವರು ಪಿಂಚಣಿ ನಿಧಿಯ ಸದಸ್ಯತ್ವದಿಂದ ನಿರ್ಗಮಿಸಿದ ಹಿಂದಿನ 60 ತಿಂಗಳ ಸೇವಾವಧಿಯಲ್ಲಿ ಪಡೆದ ಸರಾಸರಿ ಮಾಸಿಕ ವೇತನ ಆಧರಿಸಿ, ಅವರ ಪಿಂಚಣಿಯನ್ನು ಲೆಕ್ಕ ಹಾಕಲಾಗುತ್ತದೆ ಎಂದು ವಿವರಿಸಿದೆ.

ಬಾಕಿ ಪಿಂಚಣಿ ಮೊತ್ತವನ್ನು ಅಸ್ತಿತ್ವದಲ್ಲಿರುವ ಆದಾಯ ತೆರಿಗೆ ನಿಬಂಧನೆಯ ಅನುಸಾರ ಪಾವತಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

ಹೂಡಿಕೆದಾರರ ಸಂಪತ್ತು ₹3.83 ಲಕ್ಷ ಕೋಟಿ ವೃದ್ಧಿ



ನವದೆಹಲಿ (ಪಿಟಿಐ): ಮುಂಬೈ ಷೇರು ಸೂಚ್ಯಂಕದಲ್ಲಿನ (ಬಿಎಸ್‌ಇ) ನೋಂದಾಯಿತ ಕಂಪನಿಗಳ ಮಾರುಕಟ್ಟೆಯ ಒಟ್ಟು ಬಂಡವಾಳವು (ಎಂ–ಕ್ಯಾಪ್) ಗುರುವಾರ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹355 ಲಕ್ಷ ಕೋಟಿಯಷ್ಟು ಏರಿಕೆಯಾಗಿದೆ.

ಸೆನ್ಸೆಕ್ಸ್ ಸೂಚ್ಯಂಕ ತನ್ನ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದರಿಂದ ಹೂಡಿಕೆದಾರರು ₹3.83 ಲಕ್ಷ ಕೋಟಿಯಷ್ಟು ಗಳಿಕೆ ಕಂಡಿದ್ದಾರೆ.

ಅಮೆರಿಕ ಫೆಡರಲ್ ರಿಸರ್ವ್ ಬ್ಯಾಂಕ್ ತನ್ನ ಬಡ್ಡಿದರವನ್ನು ಬದಲಾಯಿಸಿಲ್ಲ. ಮುಂದಿನ ವರ್ಷ ಬಡ್ಡಿದರಕ್ಕೆ ಮೂರು ತ್ರೈಮಾಸಿಕ ಕಡಿತ ಮಾಡುವ ನಿರೀಕ್ಷೆಯಿದೆ. ಹಾಗಾಗಿ ಸೂಚ್ಯಂಕ ಏರಿಕೆಯಾಗಿದೆ.

30 ಷೇರುಗಳ ಬಿಎಸ್‌ಇ ಸೆನ್ಸೆಕ್ಸ್ 929 ಅಂಶ ಏರಿಕೆಯಾಗಿ, ಮುಕ್ತಾಯದ ವೇಳೆಗೆ 70,514 ಅಂಶಗಳಿಗೆ ಸ್ಥಿರವಾಯಿತು. ದಿನದ ನಡುವೆ 1,018 ಅಂಶ ಏರಿಕೆಯಾಗಿ 70,602 ಅಂಶಕ್ಕೆ ಮುಟ್ಟಿತ್ತು.

ಹೂಡಿಕೆದಾರರ ಸಂಪತ್ತು ₹3.51 ಲಕ್ಷ ಕೋಟಿಯಿಂದ ₹3.83 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಸೆನ್ಸೆಕ್ಸ್ ಸಂಸ್ಥೆಗಳಲ್ಲಿ ಟೆಕ್ ಮಹೀಂದ್ರ, ಇನ್ಫೊಸಿಸ್, ವಿಪ್ರೊ, ಎಚ್‌ಸಿಎಲ್ ಟೆಕ್ನಾಲಜೀಸ್, ಇಂಡಸ್ ಇಂಡ್ ಬ್ಯಾಂಕ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಗಳು ಗಳಿಕೆ ಕಂಡಿವೆ. ಪವರ್ ಗ್ರಿಡ್, ನೆಸ್ಲೆ, ಟೈಟನ್, ಜೆಎಸ್‌ಡಬ್ಲ್ಯು ಸ್ಟೀಲ್, ಮಾರುತಿ ಮತ್ತು ಟಾಟಾ ಮೋಟರ್ಸ್ ಇಳಿಕೆ ಕಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ₹4,710 ಕೋಟಿ ಮೌಲ್ಯದ ಈಕ್ವಿಟಿಗಳನ್ನು ಖರೀದಿಸಿದ್ದಾರೆ ಎಂದು ಷೇರುಪೇಟೆ ತಿಳಿಸಿದೆ. ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.06 ಮತ್ತು ಸ್ಮಾಲ್‌ಕ್ಯಾಪ್ ಶೇ 0.62ರಷ್ಟು ಏರಿಕೆ ಕಂಡಿದೆ.

ಸೂಚ್ಯಂಕಗಳ ಪೈಕಿ ರಿಯಾಲ್ಟಿ ಶೇ 3.80, ಐ.ಟಿ ಶೇ 3.21, ಟೆಕ್ ಶೇ 2.72, ಟೆಲಿ ಕಮ್ಯುನಿಕೇಷನ್ ಶೇ 2.14 ಏರಿಕೆ ಕಂಡಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	585-590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42500-45500
ಹೊನ್ನಾವರ	
ಹಳೆಚಾಲಿ	36000-38000
ಕಾರ್ಕಳ	
ಹೊಸತು	25000-36500
ಹಳತು	30000-46000
ಕುಮಟ	
ಚಿಪ್ಪು	22111-35969
ಕೋಕ	17099-31499
ಹಳೆಚಾಲಿ	37069-39109
ಹೊಸಚಾಲಿ	32869-35101
ಪುತ್ತೂರು	
ಹೊಸತು	27000-36500
ಸಾಗರ	
ಬಿಳಿಗೋಟು	19699-33861
ಚಾಲಿ	35099-38709
ಕೋಕ	26399-35499
ಕೆಂಪುಗೋಟು	30000-35300
ರಾಶಿ	40000-47699
ಸಿಪ್ಪೆಗೋಟು	14299-21009
ಶಿವಮೊಗ್ಗ	
ಬೆಟ್ಟೆ	36009-53299
ಗೊರಬಲು	19058-37279
ಹೊಸತು	43669-47599
ರಾಶಿ	36669-47809
ಸರಕು	40500-79009
ಸಿದ್ದಾಪುರ	
ಬಿಳಿಗೋಟು	31469-34000
ಚಾಲಿ	37589-39239
ಕೋಕ	29119-32899
ಕೆಂಪುಗೋಟು	30000-32809
ರಾಶಿ	43599-46949
ತಟ್ಟಿಬೆಟ್ಟೆ	38899-46399
ಶಿರಸಿ	
ಬೆಟ್ಟೆ	40018-42799
ಬಿಳಿಗೋಟು	32191-36519
ಚಾಲಿ	37200-39671
ಕೆಂಪುಗೋಟು	33231-34699
ರಾಶಿ	45198-47099
ಯಲ್ಲಾಪುರ	
ಅಪಿ	57669-57669
ಬಿಳಿಗೋಟು	25916-35899
ಚಾಲಿ	36970-39640
ಕೋಕ	26009-31769
ಕೆಂಪುಗೋಟು	27899-34560
ರಾಶಿ	44890-56299
ತಟ್ಟಿಬೆಟ್ಟೆ	37509-44110

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	13400	-	188.65
ಎಸಿ	-	7100	-	
ಆರ್‌ಪಿ	-	10800	-	ಲಂಡನ್-
ಆರ್‌ಸಿ	-	6300	-	2769 ಡಾಲರ್ಸ್

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ನವೆಂಬರ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 0.26ಕ್ಕೆ ಏರಿಕೆಯಾಗುವ ಮೂಲಕ ಎಂಟು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಪ್ರಮುಖವಾಗಿ ಈರುಳ್ಳಿ, ತರಕಾರಿಗಳು ಸೇರಿದಂತೆ ಆಹಾರ ಪದಾರ್ಥಗಳ ದರ ಏರಿಕೆಯೇ ಇದಕ್ಕೆ ಕಾರಣವಾಗಿದೆ.

ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರ ಪ್ರಮಾಣವು ಆಗಸ್ಟ್ ತಿಂಗಳಿನಿಂದಲೂ ಇಳಿಕೆಯ ಹಾದಿಯಲ್ಲಿತ್ತು. ಅಕ್ಟೋಬರ್‌ನಲ್ಲಿ ಈ ಪ್ರಮಾಣವು ಶೇ (-) 0.52ರಷ್ಟು ದಾಖಲಾಗಿತ್ತು. ಏಳು ತಿಂಗಳ ಕಾಲ ಸ್ಥಿರವಾಗಿದ್ದ ಹಣದುಬ್ಬರ ಈಗ ಏರುತ್ತಿದೆ ಎಂದು ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ.

'ನವೆಂಬರ್‌ನಲ್ಲಿ ಆಹಾರ, ಖನಿಜ ಪದಾರ್ಥಗಳು, ಯಂತ್ರೋಪಕರಣಗಳು, ಕಂಪ್ಯೂಟರ್, ಎಲೆಕ್ಟ್ರಿಕಲ್ ಮತ್ತು ಆಪ್ಟಿಕಲ್ ಉತ್ಪನ್ನಗಳು, ವಾಹನಗಳು, ಸಾರಿಗೆ ಉಪಕರಣ ಮತ್ತು ಇತರೆ ತಯಾರಕಾ ವಸ್ತುಗಳ ಬೆಲೆ ಏರಿಕೆಯಿಂದಾಗಿ ಸಗಟು ಹಣದುಬ್ಬರ ಏರಿಕೆಯಾಗಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ವಿವರಿಸಿದೆ. ತಯಾರಿಕಾ ವಲಯದ ಉತ್ಪನ್ನಗಳ ಹಣದುಬ್ಬರ ಶೇ (-) 0.64, ಇಂಧನ ಮತ್ತು ವಿದ್ಯುತ್ ಶೇ (-)4.61 ಹಾಗೂ ಆಹಾರೇತರ ಉತ್ಪನ್ನಗಳ ಹಣದುಬ್ಬರವು ಶೇ (-) 3.20ರಷ್ಟು ದಾಖಲಾಗಿದೆ.

ಸಗಟು ಹಣದುಬ್ಬರ ಪ್ರಮಾಣ (%)

ಸರಕು	ನವೆಂಬರ್	ಅಕ್ಟೋಬರ್
ಆಹಾರ	8.18	2.53
ಈರುಳ್ಳಿ	101.24	62.60
ತರಕಾರಿ	10.44	(-)21.04.
ಭತ್ತ ಮತ್ತು ಹಣ್ಣುಗಳು	10.44	8.37



ಅಂತರರಾಷ್ಟ್ರೀಯ ಒತ್ತಡಕ್ಕೆ ಮಣಿಯದ ಇಸ್ರೇಲ್ ಪ್ರಧಾನಿ ನೆತನ್ಯಾಹು

ಗಾಜಾ ಮೇಲೆ ಬಾಂಬ್ ದಾಳಿ

ಗಾಜಾ ಪಟ್ಟಿ (ಪ್ಯಾಲೆಸ್ಟೀನ್) (ಎಎಫ್‌ಪಿ): ಕದನ ವಿರಾಮ ಘೋಷಿಸುವಂತೆ ಹೆಚ್ಚುತ್ತಿರುವ ಅಂತರ-ರಾಷ್ಟ್ರೀಯ ಒತ್ತಡಕ್ಕೆ ಮಣಿಯದೆ ಮತ್ತು ಸಂಯಮ ಕಾಯ್ದುಕೊಳ್ಳಲು ತನ್ನ ಮಿತ್ರ ರಾಷ್ಟ್ರ ಅಮೆರಿಕ ನೀಡಿದ ಸಲಹೆಗೂ ಸೊಪ್ಪುಹಾಕದ ಇಸ್ರೇಲ್ ಗುರುವಾರ ಗಾಜಾ ಮೇಲೆ ಬಾಂಬ್ ದಾಳಿ ನಡೆಸಿತು.

ಇಸ್ರೇಲ್‌ಗೆ ಮನವರಿಕೆ ಮಾಡಿಕೊಡಲು ಶ್ವೇತಭವನದ ಉನ್ನತ ಸಲಹೆಗಾರರು ಜೆರುಸಲೇಂಗೆ ಗುರುವಾರದಿಂದ ಎರಡು ದಿನಗಳ ಭೇಟಿ ಕೈಗೊಂಡಿದ್ದಾರೆ. ಪ್ರಧಾನಿ ನೆತನ್ಯಾಹು ಮತ್ತು ಅವರ ಯುದ್ಧ ಕ್ಯಾಬಿನೆಟ್ ಸಚಿವರೊಂದಿಗೆ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಹಾಗೂ ಇತರ ಉನ್ನತ ಅಧಿಕಾರಿಗಳು ಮಾತುಕತೆ ನಡೆಸಲಿದ್ದಾರೆ. ಈ ಭೇಟಿಗೂ ಮುನ್ನ ಇಸ್ರೇಲ್ ಭಾರಿ ವೈಮಾನಿಕ ದಾಳಿಯನ್ನು ಗಾಜಾ ಮೇಲೆ ನಡೆಸಿದೆ.

ಇಸ್ರೇಲ್ ವಾಯುಪಡೆ ಗುರುವಾರ ನಸುಕಿನಲ್ಲಿ ಗಾಜಾ ಪಟ್ಟಿ ಮೇಲೆ ನಡೆಸಿದ ಬಾಂಬ್ ದಾಳಿಗೆ ಒಂದೇ ದಿನ ಸುಮಾರು 19 ಮಂದಿ ಸಾವನ್ನಪ್ಪಿದ್ದಾರೆ. ಅಲ್ಲದೆ, ಹಲವು ಮಂದಿ ಗಾಯಗೊಂಡಿದ್ದಾರೆ. ವೆಸ್ಟ್ ಬ್ಯಾಂಕ್‌ನ ಜೆನಿನ್ ನಗರದಲ್ಲೂ ಇಸ್ರೇಲ್ ದಾಳಿಗೆ ಮೂವರು ನಾಗರಿಕರು ಸತ್ತಿದ್ದಾರೆ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ರಫಾದಲ್ಲಿ ಎರಡು ಮನೆಗಳ ಮೇಲೆ ಇಸ್ರೇಲ್ ನಡೆಸಿದ ಬಾಂಬ್ ದಾಳಿಯಲ್ಲಿ 24 ಜನರು ಸತ್ತಿರುವುದಾಗಿ ಹಮಾಸ್ ಮಾಧ್ಯಮ ವಿಭಾಗ ಗುರುವಾರ ತಿಳಿಸಿದೆ.

ಹಮಾಸ್ ವಿರುದ್ಧದ ಇಸ್ರೇಲ್ ಯುದ್ಧಕ್ಕೆ ಸೇನೆ ಹಾಗೂ ರಾಜತಾಂತ್ರಿಕ ಬೆಂಬಲ ನೀಡಿದ್ದ ಅಮೆರಿಕದ ಮಾತಿಗೆ ಇಸ್ರೇಲ್ ಈಗ ಕಿವಿಗೊಡದಿರುವುದರಿಂದ ಅಧ್ಯಕ್ಷ ಜೋ ಬೈಡನ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆಗೆ ಅಸಮಾಧಾನಗೊಂಡಂತೆ ಕಾಣಿಸುತ್ತಿದೆ. ಪ್ಯಾಲೆಸ್ಟೀನ್ ನಾಗರಿಕರ ರಕ್ಷಣೆಗೆ ಒತ್ತು ನೀಡುವಂತೆ ಬೈಡನ್ ಆಡಳಿತ ಪದೇ ಪದೇ ನೀಡಿದ ಎಚ್ಚರಿಕೆಯನ್ನು ನೆತನ್ಯಾಹು ಅವರು ಪರಿಗಣಿಸದಿರುವುದು ಈಗ ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯದಲ್ಲಿ ಬಿರುಕಿಗೆ ಕಾರಣವಾಗುತ್ತಿದೆ.

ಇಸ್ರೇಲ್‌ಗೆ ಶತಕೋಟಿ ಡಾಲರ್‌ಗಳಷ್ಟು ಮೊತ್ತದ ಸೇನಾ ನೆರವು ಒದಗಿಸಿರುವ ಜೋ ಬೈಡನ್ ಅವರ ಆಡಳಿತ ಇದೇ ಮೊದಲ ಬಾರಿಗೆ ಎನ್ನುವಂತೆ, ಗಾಜಾದ ಮೇಲೆ ಇಸ್ರೇಲ್‌ನ 'ವಿವೇಚನಾರಹಿತ ಬಾಂಬ್ ದಾಳಿ'ಯು ಅಂತರರಾಷ್ಟ್ರೀಯ ಬೆಂಬಲವನ್ನು ದುರ್ಬಲಗೊಳಿಸುತ್ತಿದೆ ಎಂದು ಬುಧವಾರ ತೀಕ್ಷ್ಣವಾಗಿ ಕುಟುಕಿದ್ದರು.

ಇದಕ್ಕೆ ಸೊಪ್ಪು ಹಾಕದ ನೆತನ್ಯಾಹು ಅವರು, 'ನಾವು ಹಮಾಸ್ ವಿರುದ್ಧ ವಿಜಯ ಸಾಧಿಸುವವರೆಗೂ ವಿರಮಿಸುವುದಿಲ್ಲ' ಎಂದು ಬುಧವಾರ ಗುಡುಗಿದ್ದಾರೆ.



ದಕ್ಷಿಣ ಗಾಜಾದ ರಫಾ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಿಂದ ಧ್ವಂಸಗೊಂಡ ಕಟ್ಟಡಗಳ ಅವಶೇಷಗಳಡಿಯಲ್ಲಿ ಬದುಕುಳಿದವರಿಗಾಗಿ ಪ್ಯಾಲೆಸ್ಟೀನಿಯರು ಹುಡುಕಾಟ ನಡೆಸುತ್ತಿರುವುದು –ಎಎಫ್‌ಪಿ ಚಿತ್ರ

ಜೆರುಸಲೇಂ ರಾಜಧಾನಿಯಾಗಿಸಿ ಪ್ಯಾಲೆಸ್ಟೀನ್ ಜನರ ಸ್ವತಂತ್ರ ರಾಷ್ಟ್ರದ ಹಕ್ಕು ರಕ್ಷಿಸುವ ರಾಜಕೀಯ ಮಾರ್ಗಕ್ಕೆ ಕಾರಣವಾಗುವ ಮಾತುಕತೆಗೆ ಹಮಾಸ್ ಸಿದ್ಧವಿದೆ

ಇಸ್ಮಾಯಿಲ್ ಹನಿಯೆಹ್, ಹಮಾಸ್ ಮುಖ್ಯಸ್ಥ

ಅಂತರರಾಷ್ಟ್ರೀಯ ಬೆಂಬಲ ಇರಲಿ, ಬಿಡಲಿ. ಹಮಾಸ್ ವಿರುದ್ಧ ಈಗ ನಡೆಯುತ್ತಿರುವ ಯುದ್ಧವು ಮುಂದುವರಿಯುತ್ತದೆ

ಎಲಿ ಕೊಹೆನ್ ಇಸ್ರೇಲ್ ವಿದೇಶಾಂಗ ಸಚಿವ

ಭದ್ರತಾಮಂಡಳಿ: ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುತ್ತಿಲ್ಲ– ಫ್ರಾನ್ಸಿಸ್

ವಿಶ್ವಸಂಸ್ಥೆ(ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ನಿಷ್ಪಕ್ಷಪಾತದಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗದ ಸ್ಥಿತಿಯಲ್ಲಿದೆ. ಭೌಗೋಳಿಕವಾಗಿ ಉತ್ತರದಲ್ಲಿರುವ ರಾಷ್ಟ್ರಗಳ ಅಗತ್ಯಗಳನ್ನು ಪೂರೈಸುವುದೇ ಮಂಡಳಿಯ ಗುರಿಯಾಗಿದೆ ಎಂದು ವಿಶ್ವಸಂಸ್ಥೆಯ ಸಾಮಾನ್ಯಸಭೆ ಅಧ್ಯಕ್ಷ ಡೆನಿಸ್ ಫ್ರಾನ್ಸಿಸ್ ಹೇಳಿದ್ದಾರೆ.

'ನಿರ್ಧಾರಕೈಗೊಳ್ಳುವಪ್ರಕ್ರಿಯೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಎಲ್ಲ ದೇಶಗಳಿಗೂ ಪ್ರಾತಿನಿಧ್ಯ ಹಾಗೂ ಸಮಾನ ಅವಕಾಶ ನೀಡುವುದು ಇಂದಿನ ಅಗತ್ಯ' ಎಂದು ಪ್ರತಿಪಾದಿಸಿದ್ದಾರೆ.


ವಿಶ್ವಸಂಸ್ಥೆಯಲ್ಲಿನ ಭಾರತದ ರಾಯಭಾರಿ ಕಚೇರಿ ಹಾಗೂ 'ಅಬ್ಸರ್ವರ್ ರಿಸರ್ಚ್ ಫೌಂಡೇಷನ್'(ಒಆರ್‌ಎಫ್) ಸಂಯುಕ್ತವಾಗಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭದ್ರತಾ ಮಂಡಳಿಯು ಹೆಚ್ಚು ಸಮತೋಲನದಿಂದ ಕೂಡಿರಬೇಕು. ಪ್ರಾತಿನಿಧಿಕ, ಸ್ಪಂದನಶೀಲ, ಪ್ರಜಾ-ಸತ್ತಾತ್ಮಕ ಹಾಗೂ ಪಾರದರ್ಶಕತೆ-ಯನ್ನು ಎತ್ತಿ ಹಿಡಿಯುವಂತೆಯೂ ಇರಬೇಕು ಎಂಬುದು ನನ್ನ ನಂಬಿಕೆ' ಎಂದು ಫ್ರಾನ್ಸಿಸ್ ಹೇಳಿದರು.

'ಪ್ರಸ್ತುತ ಸನ್ನಿವೇಶದಲ್ಲಿ ಜಗತ್ತಿನೆಲ್ಲೆಡೆ ಸಂಘರ್ಷಗಳನ್ನೇ ಕಾಣುತ್ತಿದ್ದೇವೆ. ಆದರೆ, ಜಾಗತಿಕವಾಗಿ ಶಾಂತಿ, ಸುರಕ್ಷತೆಯನ್ನು ಖಾತ್ರಿಪಡಿಸುವುದು ಭದ್ರತಾ ಮಂಡಳಿಯ ಮುಖ್ಯ ಜವಾಬ್ದಾರಿ. ಆದರೆ, ಈಗಿನ ಪರಿಸ್ಥಿತಿಯನ್ನು ನೋಡಿದರೆ ತನ್ನ ಈ ಹೊಣೆಗಾರಿಕೆಯನ್ನು ನಿಭಾಯಿಸಲಾಗದ ಮಂಡಳಿಯು ಪಕ್ಷಪಾತದಿಂದ ವರ್ತಿಸುತ್ತಿದೆ' ಎಂದು ವಿಶ್ಲೇಷಿಸಿದರು.

ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಮಾತನಾಡಿ, 'ಆಯಾ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುವಲ್ಲಿ ಭದ್ರತಾ ಮಂಡಳಿ ವಿಫಲವಾಗಿದೆ. ಅದರಲ್ಲೂ, ಕಳೆದ ಕೆಲ ದಶಕಗಳಲ್ಲಿ ಅಂತರ ರಾಷ್ಟ್ರೀಯ ಸಂಬಂಧಗಳಲ್ಲಿ ಆಗಿರುವ ಸ್ಥಿತ್ಯಂತರಕ್ಕೆ ತಕ್ಕಂತೆ ಬದಲಾಗಿಲ್ಲ' ಎಂದರು.

ಗುರಿ ಸಾಧಿಸುವವರೆಗೆ ಉಕ್ರೇನ್‌ನಲ್ಲಿ ಶಾಂತಿ ನೆಲೆಸದು: ಪುಟಿನ್ ಹೇಳಿಕೆ



ವ್ಲಾಡಿಮಿರ್ ಪುಟಿನ್

ಮಾಸ್ಕೊ (ಎಪಿ): 'ನಮ್ಮ ಗುರಿಗಳನ್ನು ಸಾಧಿಸುವವರೆಗೆ ಉಕ್ರೇನ್‌ನಲ್ಲಿ ಶಾಂತಿ ನೆಲೆಸದು' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗುರುವಾರ ವರ್ಷಾಂತ್ಯದ ಸುದ್ದಿಗೋಷ್ಠಿಯಲ್ಲಿ ಪ್ರತಿಜ್ಞೆ ಮಾಡಿದರು.

ಉಕ್ರೇನ್ ಮೇಲಿನ ಆಕ್ರಮಣದ ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಮತ್ತು ಅಧಿಕಾರದ ಹಿಡಿತವನ್ನು ತಾನು ಬಿಟ್ಟುಕೊಡುವುದಿಲ್ಲ ಎನ್ನುವ ಸಂದೇಶ ಅವರ ಮಾತಿನಲ್ಲಿ ವ್ಯಕ್ತವಾಯಿತು.

ಉಕ್ರೇನ್ ಮೇಲಿನ ಆಕ್ರಮಣವನ್ನು ವಿಶೇಷ ಸೇನಾ ಕಾರ್ಯಾಚರಣೆ ಎಂದು ರಷ್ಯಾ ಪ್ರತಿಪಾದಿಸಿರುವ ಈ ಯುದ್ಧದಲ್ಲಿ, ಉಕ್ರೇನ್‌ನಲ್ಲಿ ಹೋರಾಡಲು ಮೀಸಲು ಸೈನಿಕರ ಎರಡನೇ ಅಲೆ ಒಟ್ಟುಗೂಡಿಸುವ ಅಗತ್ಯವನ್ನು ಪುಟಿನ್ ತಳ್ಳಿ ಹಾಕಿದರು.

ರಷ್ಯಾದ ವೃತ್ತಿಪರ ಸೇನಾ ಪಡೆಗಳೊಂದಿಗೆ ಕೈಜೋಡಿಸಲು ಕರೆಸಿಕೊಂಡ ಸುಮಾರು 2.44 ಲಕ್ಷ ಸೈನಿಕರು ಸೇರಿ ಸುಮಾರು 6.17 ಲಕ್ಷ ರಷ್ಯಾ ಸೈನಿಕರು ಪ್ರಸ್ತುತ ಕಾರ್ಯಾ-ಚರಣೆಯಲ್ಲಿ ತೊಡಗಿಕೊಂಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

'ಮೀಸಲು ಪಡೆಗಳನ್ನು ಒಟ್ಟುಗೂಡಿಸುವ ಅವಶ್ಯಕತೆ ಇಲ್ಲ. ದೇಶದಾದ್ಯಂತ ಪ್ರತಿದಿನ 1,500 ಜನರನ್ನು ಸೇನೆಗೆ ನೇಮಿಸಿಕೊಳ್ಳಲಾಗುತ್ತಿದೆ. ಬುಧವಾರ ಸಂಜೆಯ ಹೊತ್ತಿಗೆ ಒಟ್ಟು 4.86 ಲಕ್ಷ ಸೈನಿಕರು ರಷ್ಯಾ ಸೇನೆ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ' ಎಂದು ಅವರು ಹೇಳಿದರು.

'ಉಕ್ರೇನ್‌ನಲ್ಲಿ ಮಾಸ್ಕೊ ಸಾಧಿಸಲು ಹೊರಟಿರುವ ಗುರಿಗಳೆಂದರೆ ನಾಜಿಮುಕ್ತ, ನಿಶ್ಶಸ್ತ್ರೀಕರಣ ಮತ್ತು ತಟಸ್ಥ ನಿಲುವಿನ ದೇಶವಾಗಿರಿಸುವುದು. ಉಕ್ರೇನ್ ನ್ಯಾಟೊ ಸೇರಬಾರದು. ಈ ನಮ್ಮ ಗುರಿಗಳನ್ನು ಸಾಧಿಸುವವರೆಗೂ ಉಕ್ರೇನ್‌ನಲ್ಲಿ ಶಾಂತಿ ನೆಲಸದು' ಎಂದು ಪುಟಿನ್ ಹೇಳಿದರು.

ಮಹಿಳಾ ಟೆಸ್ಟ್ ಕ್ರಿಕೆಟ್: ಕನ್ನಡತಿ ಶುಭಾ ಸತೀಶ್ ಮಿಂಚು, ನಾಲ್ವರ ಅರ್ಧಶತಕ

ಮೊದಲ ದಿನ ಭಾರತ ದಾಖಲೆ ಮೊತ್ತ

ನವಿ ಮುಂಬೈ (ಪಿಟಿಐ): ಕರ್ನಾಟಕದ ಶುಭಾ ಸತೀಶ್ ಸೇರಿದಂತೆ ನಾಲ್ವರು ಬ್ಯಾಟರ್‌ಗಳು ಅರ್ಧಶತಕ ಗಳಿಸಿದ ಫಲವಾಗಿ ಭಾರತ ಮಹಿಳಾ ಕ್ರಿಕೆಟ್ ತಂಡವು ಗುರುವಾರ ಇಂಗ್ಲೆಂಡ್ ವಿರುದ್ಧ ಆರಂಭವಾದ ಟೆಸ್ಟ್ ಪಂದ್ಯದ ಮೊದಲ ದಿನವೇ ದಾಖಲೆಯ ಮೊತ್ತ ಪೇರಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದ-ಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ತಂಡವು ದಿನದಾಟದ ಮುಕ್ತಾಯಕ್ಕೆ 94 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 410 ರನ್ ಗಳಿಸಿತು. ಪಂದ್ಯದ ಮೊದಲ ದಿನವೇ ದೊಡ್ಡ ಮೊತ್ತ ಗಳಿಸಿದ ಎರಡನೇ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. 1935ರಲ್ಲಿ ಕ್ರೈಸ್ಟ್‌ಚರ್ಚ್‌ನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ ತಂಡವು ಇಂಗ್ಲೆಂಡ್ ವಿರುದ್ಧ 475 ರನ್ ಗಳಿಸಿತ್ತು. ಅಲ್ಲದೇ ನಾಲ್ಕನೂರಕ್ಕೂ ಹೆಚ್ಚು ರನ್ ಪೇರಿಸಿದ ಎರಡನೇ ತಂಡವೂ ಭಾರತ.

ಆಸ್ಟ್ರೇಲಿಯ ಆಟಗಾರ್ತಿಯರ ಫೀಲ್ಡಿಂಗ್ ಲೋಪಗಳನ್ನು ಸಮರ್ಥವಾಗಿ ಬಳಸಿಕೊಂಡ ಆತಿಥೇಯ ತಂಡವು ದೊಡ್ಡ ಮೊತ್ತ ಪೇರಿಸಿದರು. ಪ್ರವಾಸಿ ತಂಡದ ಫೀಲ್ಡರ್‌ಗಳು 4 ಕ್ಯಾಚ್ ಕೈಚೆಲ್ಲಿದರು. ಅದರಲ್ಲಿ ಜೀವದಾನ ಪಡೆದ ಶುಭಾ, ಜೆಮಿಮಾ ಮತ್ತು ಯಷ್ಟಿಕಾ ತಂಡಕ್ಕೆ ಮಹತ್ವದ ಕಾಣಿಕೆ ನೀಡಿದರು.

ಪಂದ್ಯದ ಮೊದಲ ಹತ್ತು ಓವರ್‌ಗಳಾಗುವಷ್ಟರಲ್ಲಿಯೇ ಆರಂಭಿಕ ಬ್ಯಾಟರ್‌ಗಳಾದ ಸ್ಮೃತಿ ಮಂದಾನ (17 ರನ್) ಮತ್ತು ಶಫಾಲಿ ವರ್ಮಾ (19 ರನ್) ಅವರು ಔಟಾದರು. ಎರಡನೇ ಓವರ್‌ನಲ್ಲಿ ಸ್ಮೃತಿಗೂ ಒಂದು ಜೀವದಾನ ಲಭಿಸಿತ್ತು.

ಸಂಕಷ್ಟದ ಸಂದರ್ಭದಲ್ಲಿ ಜೊತೆಯಾದ ಶುಭಾ (69; 76ಎ, 4X13) ಮತ್ತು ಜೆಮಿಮಾ ರಾಡ್ರಿಗಸ್ (68; 99ಎ, 4X11) ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಇವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 125 ರನ್ ಸೇರಿಸಿದರು. 33ನೇ ಓವರ್‌ನಲ್ಲಿ ಶುಭಾ ವಿಕೆಟ್ ಉರುಳಿಸಿದ ಎಕ್ಲೆಸ್ಟೋನ್ ಅವರು ಜೊತೆಯಾಟ ಮುರಿದರು. ಐದು ಓವರ್‌ಗಳ ನಂತರ ಜೆಮಿಮಾ ಕೂಡ ಔಟಾದರು.


ಅರ್ಧಶತಕ ಗಳಿಸಿದ ಜೆಮಿಮಾ ರಾಡ್ರಿಗಸ್ –ಪಿಟಿಐ ಚಿತ್ರ

ಟೆಸ್ಟ್ ಪಂದ್ಯದ ಮೊದಲ ದಿನ ಗರಿಷ್ಠ ಮೊತ್ತ

ರನ್	ಪಂದ್ಯ	ಸ್ಥಳ	ವರ್ಷ
475	ನ್ಯೂಜಿಲೆಂಡ್–ಇಂಗ್ಲೆಂಡ್	ಕ್ರೈಸ್ಟ್‌ಚರ್ಚ್	1935
410	ಭಾರತ–ಇಂಗ್ಲೆಂಡ್	ನವೀ ಮುಂಬೈ	2023
376	ದ.ಆಫ್ರಿಕಾ–ಇಂಗ್ಲೆಂಡ್	ಜೋಹಾನ್ಸ್‌ಬರ್ಗ್	1960
362	ಇಂಗ್ಲೆಂಡ್–ನ್ಯೂಜಿಲೆಂಡ್	ಗಿಲ್ಡ್‌ಫೋರ್ಡ್	1996
332	ಇಂಗ್ಲೆಂಡ್–ಭಾರತ	ವೂರ್ಸೆಸ್ಟರ್	1986

ಈ ಹಂತದಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್ (49; 81ಎ) ಮತ್ತು ಯಷ್ಟಿಕಾ ಭಾಟಿಯಾ (66; 88ಎ, 4X10, 6X1) ಶತಕದ ಜೊತೆ-ಯಾಟವಾಡಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 116 ರನ್ ಸೇರಿಸಿ ತಂಡದ ಮೊತ್ತವನ್ನು ಮುನ್ನೂರರ ಗಡಿ ದಾಟಿಸಿದರು. ರನ್ ಔಟ್ ಆದ ಹರ್ಮನ್‌ಪ್ರೀತ್, ಕೇವಲ ಒಂದು ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಕೆಲಹೊತ್ತಿನ ನಂತರ ಯಷ್ಟಿಕಾ ಅವರ ವಿಕೆಟ್ ಕಬಳಿಸಿದ ಚಾರ್ಲಿ ಡೀನ್ ಸಂಭ್ರಮಿಸಿದರು.

ಆದರೆ ಇನಿಂಗ್ಸ್ ಕಟ್ಟುವ ಹೊಣೆ ಹೊತ್ತ ದೀಪ್ತಿ ಶರ್ಮಾ (ಬ್ಯಾಟಿಂಗ್ 60; 95ಎ, 4X9, 6X1) ಕೂಡ ಅರ್ಧಶತಕ ಬಾರಿಸಿದರು. ಅವರಿಗೆ ಸ್ನೇಹ ರಾಣ (30; 73ಎ) ಉತ್ತಮ ಜೊತೆ ನೀಡಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು. ನಾಲ್ಕನೂರರ ಗಡಿ ದಾಟಿಸಿದರು. ದಿನದಾಟದ ಮುಕ್ತಾಯಕ್ಕೆ ದೀಪ್ತಿ ಮತ್ತು ಪೂಜಾ ವಸ್ತ್ರಕರ್ (ಬ್ಯಾಟಿಂಗ್ 4) ಕ್ರೀ-ಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 94 ಓವರ್‌ಗಳಲ್ಲಿ 7 ವಿಕೆಟ್ ಗಳಿಗೆ 410 (ಶುಭಾ ಸತೀಶ್ 69, ಜೆಮಿಮಾ ರಾಡ್ರಿಗಸ್ 68, ಹರ್ಮನ್‌ಪ್ರೀತ್ ಕೌರ್ 49, ಯಷ್ಟಿಕಾ ಭಾಟಿಯಾ 66, ದೀಪ್ತಿ ಶರ್ಮಾ ಬ್ಯಾಟಿಂಗ್ 60, ಸ್ನೇಹಾ ರಾಣಾ 30, ಲಾರೆನ್ ಬೆಲ್ 64ಕ್ಕೆ2)


ಪೋಷಕರಾದ ಎಸ್‌.ಸತೀಶ್– ಕೆ.ತಾರಾ ಅವರೊಂದಿಗೆ ಶುಭಾ ಸತೀಶ್

ಮೈಸೂರು ಹುಡುಗಿಯ 'ಶುಭಾರಂಭ'

● ಮೋಹನ್ ಕುಮಾರ ಸಿ.

ಮೈಸೂರು: ಅರಮನೆ ನಗರಿಯ ಹುಡುಗಿ ಶುಭಾ ಸತೀಶ್ ಭಾರತದ ಕ್ರಿಕೆಟ್ ಕ್ಷೇತ್ರದಲ್ಲಿ ತಮ್ಮ ಮೊದಲ ಹೆಜ್ಜೆ ಇಟ್ಟಿದ್ದಾರೆ. ತಮ್ಮ ಟೆಸ್ಟ್ ಕ್ರಿಕೆಟ್ ಪದಾರ್ಪಣೆಯನ್ನು ಚೆಂದದ ಅರ್ಧಶತಕದ ಮೂಲಕ ಅವಿಸ್ಮರಣೀಯಗೊಳಿಸಿಕೊಂಡರು.

ನವಿ ಮುಂಬೈನ ಡಿ.ವೈ.ಪಾಟೀಲ್ ಕ್ರಿಕೆಟ್ ಅಂಗಳದಲ್ಲಿ ಗುರುವಾರ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಈ ಎಡಗೈ ಬ್ಯಾಟರ್ ಅವರ ಭಾರತದ ಇನ್ನಿಂಗ್ಸ್ ಬಲಗೊಳಿಸಲು ಮಹತ್ವದ ಕಾಣಿಕೆ ನೀಡಿದರು. ಇಲ್ಲಿಯ ರಾಜರಾಜೇಶ್ವರಿ ನಗರ ನಿವಾಸಿ, ಬೆಮೆಲ್ ಉದ್ಯೋಗಿ ಎಸ್.ಸತೀಶ್ ಹಾಗೂ ಕೆ.ತಾರಾ ದಂಪತಿಯ ಪುತ್ರಿ ಶುಭಾ. ಪ್ರಾದೇಶಿಕ ಶಿಕ್ಷಣ ಕೇಂದ್ರದ ಆವರಣದಲ್ಲಿ-ರುವ ಡಿಎಂಎಸ್ ಶಾಲೆಯಲ್ಲಿ ಪಿಯುವರೆಗೆ ಶಿಕ್ಷಣ ಪಡೆದರು. ಲಕ್ಷ್ಮಿ ಹಯಗ್ರೀವ ಕಾಲೇಜಿನಲ್ಲಿ ಬಿ.ಕಾಂ ಓದುತ್ತಿದ್ದಾರೆ. ಅವರು ತಿಂಗಳ ಹಿಂದಷ್ಟೇ ನೈರುತ್ಯ ರೈಲ್ವೆ ಉದ್ಯೋಗಿಯಾಗಿದ್ದಾರೆ.

'ಮನೆ ಮುಂದೆ ಟೆನಿಸ್ ಬಾಲ್ ಕ್ರಿಕೆಟ್‌ನಲ್ಲಿ ಗಂಟೆಗಟ್ಟಲೆ ಬಿಡಾಗದೆ ಆಡುತ್ತಿದ್ದನ್ನು ನೋಡಿದ ತಂದೆ, ಕ್ರಿಕೆಟ್ ತರಬೇತಿ ಕ್ಲಬ್‌ಗೆ ಸೇರಿಸಿದರು. 12ನೇ ವರ್ಷದಿಂದಲೇ ಆಕೆ ಕ್ರಿಕೆಟ್ ಪಯಣ ಆರಂಭವಾಯಿತು. ಇಂದು ದೇಶವನ್ನು ಪ್ರತಿನಿಧಿಸಿದ್ದಾಳೆ. ಅಪ್ಪ- ಅಮ್ಮ ಬೆಳಿಗ್ಗಿನಿಂದಲೂ ಖುಷಿಯಲ್ಲಿದ್ದೇವೆ' ಎಂದು ಶುಭಾ ಸಹೋದರಿ ಸಂಧ್ಯಾ ಸಂತಸ ವ್ಯಕ್ತಪಡಿಸಿದರು.

ಮಹಾರಾಜ ಕಾಲೇಜು ಮೈದಾನದಲ್ಲಿ ಕ್ರಿಕೆಟ್ ನೆಟ್‌ನಲ್ಲಿ ಅಭ್ಯಾಸ ನಡೆಸಿ, ನಂತರ ಜಯಲಕ್ಷ್ಮೀಪುರಂನ ಮಹಾಜನ ಕಾಲೇಜಿನಲ್ಲಿರುವ ಜಗದೀಶ್ ಪ್ರಸಾದ್ ಕ್ರಿಕೆಟ್ ಕ್ರೀಡಾಂಗಣದ ರಾಜೇಶ್ ಅವರ ಬೌಲ್‌ಔಟ್ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಶುಭಾ, ಪ್ರತಿನಿಧಿಸಿದ ತಂಡಗಳನ್ನು ಗೆಲ್ಲಿಸಿದ್ದಾರೆ.

'ಅತ್ಯಮೋಘವಾಗಿ ಆಡುವ, ಗುರಿ ಬೆನ್ನಟ್ಟುವ ಛಾತಿಯ ಆಟಗಾರ್ತಿ. ಇಂಡಿಯಾ 'ಎ' ಅಭ್ಯಾಸ ಪಂದ್ಯದಲ್ಲಿ 99 ಹಾಗೂ 49 ರನ್ ಬಾರಿಸಿ ನೇರವಾಗಿ ಭಾರತ ತಂಡಕ್ಕೆ ಆಯ್ಕೆಯಾದರು. ಚೊಚ್ಚಲ ಪಂದ್ಯದಲ್ಲಿ ಅಮೋಘ ಪ್ರದರ್ಶನ ನೀಡಿರುವುದು ಹೆಮ್ಮೆ ಎನಿಸುತ್ತಿದೆ' ಎಂದು ಬೌಲ್‌ಔಟ್ ಅಕಾಡೆಮಿಯ ಕೋಚ್ ರಾಜೇಶ್ ಸತೀಶ್ 'ಪ್ರಜಾವಾಣಿ' ಜೊತೆ ಸಂತಸ ಹಂಚಿಕೊಂಡರು.

'ರಾಜ್ಯದ 16, 19, 23 ವರ್ಷದೊಳಗಿನ ಹಾಗೂ ಹಿರಿಯರ ತಂಡದಲ್ಲೂ ಸ್ಥಾನ ಪಡೆದು ಅತ್ಯುತ್ತಮ ಪ್ರದರ್ಶನದೊಂದಿಗೆ ಅಕಾಡೆಮಿಗೂ ಹೆಸರು ತಂದುಕೊಟ್ಟಿದ್ದಾರೆ. ಇಂದು ಬ್ಯಾಟಿಂಗ್ ಅಷ್ಟೇ ನೋಡಿದ್ದೀರಿ, ಇನ್ನು ಮೂರು ದಿನ ಫೀಲ್ಡಿಂಗ್ ಹೇಗೆ ಮಾಡುತ್ತಾರೆಂದು ನೀವೇ ನೋಡಿ' ಎಂದರು.

ಸೆಮಿಯಲ್ಲಿ ಮುಗ್ಗರಿಸಿದ ಕರ್ನಾಟಕ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಫೈನಲ್‌ಗೆ ರಾಜಸ್ಥಾನ

ರಾಜ್‌ಕೋಟ್: ದೀಪಕ್ ಹೂಡಾ ಶತಕದ ಅಬ್ಬರದಲ್ಲಿ ಕರ್ನಾಟಕ ತಂಡದ ಫೈನಲ್ ಕನಸು ಕಮರಿತು. ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ರಾಜಸ್ಥಾನ ತಂಡವು ಫೈನಲ್‌ಗೆ ಅರ್ಹತೆ ಗಿಟ್ಟಿಸಿತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ರಾಜಸ್ಥಾನ ತಂಡವು 6 ವಿಕೆಟ್‌ಗಳಿಂದ ಮಯಂಕ್ ಅಗರವಾಲ್ ಬಳಗವನ್ನು ಮಣಿಸಿತು. ಮೂರು ವರ್ಷಗಳ ನಂತರ ಪ್ರಶಸ್ತಿ ಗಳಿಸುವ ಕರ್ನಾಟಕದ ಗುರಿ ಈ ಬಾರಿಯೂ ಈಡೇರಲಿಲ್ಲ. ಇದೇ 16ರಂದು ನಡೆಯುವ ಫೈನಲ್‌ನಲ್ಲಿ ರಾಜಸ್ಥಾನವು ಹರಿಯಾಣ ತಂಡವನ್ನು ಎದುರಿಸಲಿದೆ.

ಟಾಸ್ ಗೆದ್ದ ಕರ್ನಾಟಕ ಮೊದಲು ಬ್ಯಾಟಿಂಗ್ ಮಾಡಿತು. ಆದರೆ ರಾಜಸ್ಥಾನದ ಬೌಲರ್‌ಗಳಾದ ಖಲೀದ್ ಅಹಮದ್ ಮತ್ತು ಅಂಕಿತ್ ಚೌಧರಿ ಅವರ ಬೌಲಿಂಗ್ ಮುಂದೆ ಅಗ್ರ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಆದರೆ ಐದನೇ ಕ್ರಮಾಂಕದ ಬ್ಯಾಟರ್ ಅಭಿನವ್ ಮನೋಹರ್ (91; 80ಎ, 4X10, 6X3) ಮತ್ತು ಮನೋಜ್ ಬಾಂಢಗೆ (63; 39ಎ, 4X3, 6X5) ಅವರ ಬ್ಯಾಟಿಂಗ್‌ನಿಂದಾಗಿ ಕರ್ನಾಟಕ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 282 ರನ್ ಗಳಿಸಿತು.

ಟೂರ್ನಿಯುದ್ದಕ್ಕೂ ಅಮೋಘ ಆಟದ ಮೂಲಕ ತಂಡದ ಶಕ್ತಿಯಾಗಿದ್ದ ಬೌಲರ್‌ಗಳು ಈ ಮೊತ್ತವನ್ನು ರಕ್ಷಿಸುವ ಭರವಸೆ ಮೂಡಿತ್ತು. ಅದಕ್ಕೆ ತಕ್ಕಂತೆ ವೇಗಿ ವೈಶಾಖ ಮತ್ತು ಕೌಶಿಕ್ ಅವರ ಅಮೋಘ ದಾಳಿಗೆ ರಾಜಸ್ಥಾನದ ಇಬ್ಬರೂ ಆರಂಭಿಕ ಬ್ಯಾಟರ್‌ಗಳು ಸೊನ್ನೆ ಸುತ್ತಿದರು. ಮಹಿಪಾಲ್ ಲೊಮ್ರೊರ್ (14 ರನ್) ಅವರಿಗೆ ಮನೋಜ್ ಬಾಂಢಗೆ ಪೆವಿಲಿಯನ್ ದಾರಿ ತೋರಿಸಿದರು. 23 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡ ರಾಜಸ್ಥಾನ ಸೋಲಿನ ಭೀತಿಯಲ್ಲಿತ್ತು.

ಆದರೆ ದೀಪಕ್ ಹೂಡಾ (180; 128ಎ) ಮತ್ತು ಕರಣ್ ಲಂಬಾ (ಅಜೇಯ 73; 112ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 255 ರನ್ ಸೇರಿಸಿದರು. ಕರ್ನಾಟಕದ ಕೈಯಿಂದ ಗೆಲುವನ್ನು ಕಿತ್ತುಕೊಂಡರು. ಪಂದ್ಯದಲ್ಲಿ ಇನ್ನೂ 38 ಎಸೆತಗಳು ಬಾಕಿ ಇದ್ದಾಗಲೇ ರಾಜಸ್ಥಾನವು 4 ವಿಕೆಟ್‌ಗಳಿಗೆ 283 ರನ್ ಗಳಿಸಿ ಗೆದ್ದಿತು. ಹೂಡಾ ಹತ್ತು ಅಂತರರಾಷ್ಟ್ರೀಯ ಏಕದಿನ ಮತ್ತು 21 ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.


ಶತಕ ಗಳಿಸಿದ ದೀಪಕ್ ಹೂಡಾ

ಹೂಡಾ 19 ಬೌಂಡರಿ ಮತ್ತು ಐದು ಸಿಕ್ಸರ್ ಸಿಡಿಸಿ ರಾಜ್ಯದ ಬೌಲರ್‌ಗಳ ಬೆವರಿಳಿಸಿದರು. ಕೌಶಿಕ್ (8–1–28–1) ಬಿಟ್ಟರೆ ಉಳಿದೆಲ್ಲ ಬೌಲರ್‌ಗಳೂ ದುಬಾರಿಯಾದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 282 (ನಿಕಿನ್ ಜೋಸ್ 21, ಕೃಷ್ಣನ್ ಶ್ರೀಜಿತ್ 37, ಮನೀಷ್ ಪಾಂಡೆ 28, ಅಭಿನವ್ ಮನೋಹರ್ 91, ಮನೋಜ್ ಬಾಂಢಗೆ 63, ಅಂಕಿತ್ ಚೌಧರಿ 43ಕ್ಕೆ2, ಕೆ. ಅಜಯ್ ಸಿಂಗ್ 43ಕ್ಕೆ2) ರಾಜಸ್ಥಾನ: 43.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 283 (ದೀಪಕ್ ಹೂಡಾ 180, ಕರಣ್ ಲಾಂಬಾ ಔಟಾಗದೆ 73, ವಿ ಕೌಶಿಕ್ 28ಕ್ಕೆ1, ವೈಶಾಖ ವಿಜಯಕುಮಾರ್ 58ಕ್ಕೆ1, ಮನೋಜ್ ಬಾಂಢಗೆ 49ಕ್ಕೆ1) **ಫಲಿತಾಂಶ:** ರಾಜಸ್ಥಾನ ತಂಡಕ್ಕೆ 6 ವಿಕೆಟ್‌ಗಳ ಜಯ. ಫೈನಲ್‌ಗೆ ಅರ್ಹತೆ.

ಡೇವಿಡ್ ವಾರ್ನರ್ ಭರ್ಜರಿ ಶತಕ

ಟೆಸ್ಟ್: ಮೊದಲ ದಿನ ದೊಡ್ಡ ಮೊತ್ತ ಪೇರಿಸಿದ ಆಸ್ಟ್ರೇಲಿಯಾ

ಪರ್ತ್ (ಎಪಿ): ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ತಮ್ಮ ವಿದಾಯದ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭರ್ಜರಿ ಶತಕ ದಾಖಲಿಸಿದರು.

ಗುರುವಾರ ಆರಂಭವಾದ ಪಾಕಿಸ್ತಾನ ಎದುರಿನ ಮೂರು ಪಂದ್ಯಗಳ ಸರಣಿಯ ಮೊದಲ ಟೆಸ್ಟ್‌ನಲ್ಲಿ ವಾರ್ನರ್ 211 ಎಸೆತಗಳಲ್ಲಿ 164 ರನ್ ಗಳಿಸಿದರು. ಇದರಿಂದಾಗಿ ಪಂದ್ಯದ ಮೊದಲ ದಿನವೇ ಆಸ್ಟ್ರೇಲಿಯಾ ತಂಡವು 84 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 346 ರನ್‌ಗಳ ದೊಡ್ಡ ಮೊತ್ತ ದಾಖಲಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನಾಯಕ ಪ್ಯಾಟ್ ಕಮಿನ್ಸ್ ನಿರ್ಧಾರವನ್ನು ವಾರ್ನರ್ ಸಮರ್ಥಿಸಿ-ಕೊಂಡರು.

37 ವರ್ಷದ ವಾರ್ನರ್ ಅವರು ಈ ಸರಣಿಯ ಕೊನೆಯ ಪಂದ್ಯದ ನಂತರ ವಿದಾಯ ಹೇಳಲಿದ್ದಾರೆ. ಪ್ರಸಕ್ತ ವರ್ಷದಲ್ಲಿ ಇದು ಅವರಿಗೆ ಮೊದಲ ಶತಕ. ಒಟ್ಟಾರೆ ಟೆಸ್ಟ್ ಮಾದರಿಯಲ್ಲಿ ಅವರಿಗೆ ಇದು 26ನೇ ಶತಕವಾಗಿದೆ.

200ನೇ ಇನಿಂಗ್ಸ್ ಆಡಿದ ವಾರ್ನರ್, ಪಾಕ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು.


ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ –ಎಎಫ್‌ಪಿ ಚಿತ್ರ

ಉಸ್ಮಾನ್ ಖ್ವಾಜಾ (41 ರನ್) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 126 ರನ್ ಸೇರಿಸಿ ಭದ್ರ ಬುನಾದಿ ಹಾಕಿದರು. ವೇಗಿ ಶಾಹೀನ್ ಆಫ್ರಿದಿ ಅವರು ಉಸ್ಮಾನ್ ವಿಕೆಟ್ ಗಳಿಸಿ ಜೊತೆಯಾಟವನ್ನು ಮುರಿದರು. ಮಾರ್ನಸ್ ಲಾಬುಷೇನ್ 25 ಎಸೆತಗಳಲ್ಲಿ 16 ರನ್ ಗಳಿಸಿ ಅಹೀಮ್ ಅಶ್ರಫ್ ಬೌಲಿಂಗ್‌ನಲ್ಲಿ ಔಟಾದರು. ಈ ಹಂತದಲ್ಲಿ ವಾರ್ನರ್ ಜೊತೆಗೂಡಿದ ಸ್ಟೀವ್ ಸ್ಮಿತ್ (31; 60ಎ) ಲಯ ಕಂಡುಕೊಳ್ಳಲು ಪ್ರಯಾ-ಸಪಟ್ಟರು. ಇವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 79 ರನ್ ಸೇರಿಸಿದರು.

ಸ್ಮಿತ್ ಔಟಾದ ನಂತರ ಮೇಲೆ ಟ್ರಾವಿಸ್ ಹೆಡ್ (40; 53ಎ) ಅರ್ಧಶತಕದ ಸನಿಹ ಔಟಾದರು. ಹೆಡ್ ಮತ್ತು ವಾರ್ನರ್ 66 ರನ್ ಸೇರಿಸಿದರು. ಹೆಡ್ ಔಟಾಗಿ ಮೂರು ಓವರ್‌ಗಳ ನಂತರ ವಾರ್ನರ್ ಕೂಡ ಪೆವಿಲಿಯನ್‌ಗೆ ಮರಳಿದರು. ಪಾಕ್ ತಂಡದಲ್ಲಿ ಪದಾರ್ಪಣೆ ಮಾಡಿದ ವೇಗಿ ಅಮಿರ್ ಜಮಾಲ್ ಅವರು ವಾರ್ನರ್ ಮತ್ತು ಹೆಡ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಇದೇ ಪಂದ್ಯದಲ್ಲಿ ಖುರ್ರಂ ಶೆಹಜಾದ್ ಕೂಡ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಆಸ್ಟ್ರೇಲಿಯಾ:** 84 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 346 (ಡೇವಿಡ್ ವಾರ್ನರ್ 164, ಉಸ್ಮಾನ್ ಖ್ವಾಜಾ 41, ಸ್ಟೀವ್ ಸ್ಮಿತ್ 31, ಟ್ರಾವಿಸ್ ಹೆಡ್ 40, ಆಮೀರ್ ಜಮಾಲ್ 63ಕ್ಕೆ2).

ಜೂನಿಯರ್ ಹಾಕಿ: ಭಾರತಕ್ಕೆ ನಿರಾಸೆ

ಕ್ವಾಲಾಲಂಪುರ (ಪಿಟಿಐ): ಸತತವಾಗಿ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ವಿಫಲವಾದ ಭಾರತ ತಂಡವು ಇಲ್ಲಿ ಗುರುವಾರ ನಡೆದ ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ 1–4 ರಿಂದ ಜರ್ಮನಿಗೆ ಮಣಿಯಿತು. ಈ ಮೂಲಕ ನಾಲ್ಕನೇ ಬಾರಿ ಫೈನಲ್‌ಗೆ ಏರುವ ಭಾರತದ ಕನಸು ಕಮರಿತು.

ಆರು ಬಾರಿಯ ಚಾಂಪಿಯನ್ ಜರ್ಮನಿ ಇಡೀ ಪಂದ್ಯದಲ್ಲಿ ಕೇವಲ ಎರಡು ಪೆನಾಲ್ಟಿ ಕಾರ್ನರ್ ಅವಕಾಶ ಪಡೆಯಿತು. ಎರಡೂ ಬಾರಿಯೂ ಚೆಂಡನ್ನು ಗುರಿ ಸೇರಿಸಿತು. ಆದರೆ, ಭಾರತದ ಆಟಗಾರರಿಗೆ 12 ಪೆನಾಲ್ಟಿ ಕಾರ್ನರ್ ಅವಕಾಶಗಳು ಅರಸಿ ಬಂದರೂ, ಅವುಗಳನ್ನು ಗೋಲುಗಳನ್ನಾಗಿ ಪರಿವರ್ತಿಸುವಲ್ಲಿ ಎಡವಿತು.

ಪಂದ್ಯದ ಎಂಟನೇ ನಿಮಿಷದಲ್ಲೇ ಬೆನ್ ಹ್ಯಾಸ್ಬಾಚ್ ಜರ್ಮನಿಗೆ ಆರಂಭಿಕ ಮುನ್ನಡೆ ಒದಗಿಸಿದರು. ಅದಾದ ಮೂರು ನಿಮಿಷಕ್ಕೆ ಸುದೀಪ್ ಚಿರ್ಮಾಕೊ (11ನೇ ನಿ) ಭಾರತದ ಪರ ಗೋಲು ಗಳಿಸಿ ಸಮಬಲ ಸಾಧಿಸಿದರು. ಆದರೆ, ಎರಡನೇ ಕ್ವಾರ್ಟರ್‌ನ ಕೊನೆಗೆ ಪೆನಾಲ್ಟಿ ಕಾರ್ನರ್‌ನಲ್ಲಿ ಬೆನ್ (30ನೇ) ಮತ್ತೊಮ್ಮೆ ಚೆಂಡನ್ನು ಗುರಿ ಸೇರಿಸಿ, ಮಧ್ಯಂತರದ ವೇಳೆಗೆ ಜರ್ಮನಿಗೆ 2–1 ಮುನ್ನಡೆ ತಂದಿತ್ತರು. ನಂತರದಲ್ಲಿ ಗ್ಲಾಂಡರ್ ಪಾಲ್ (41ನೇ) ಮತ್ತು ಲೋರಿಯನ್ ಸ್ಪೆರ್ಲಿಂಗ್ (58ನೇ) ಗೋಲು ಗಳಿಸಿ ಜರ್ಮನಿಯ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಮಂಗಳವಾರ ನಡೆದಿದ್ದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅದ್ಭುತ ಆಟದ ಮೂಲಕ 4–3 ರಿಂದ ವಿಶ್ವದ ನಾಲ್ಕನೇ ರ‍್ಯಾಂಕ್‌ನ ನೆದರ್ಲೆಂಡ್ಸ್ ತಂಡವನ್ನು ಮಣಿಸಿದ್ದ ಉತ್ತಮ್ ಸಿಂಗ್ ಪಡೆ ನಾಲ್ಕರ ಘಟ್ಟದಲ್ಲಿ ನಿರಾಸೆ ಅನುಭವಿಸಿತು.


ಜರ್ಮನಿ ಮತ್ತು ಭಾರತ ಆಟಗಾರರ ನಡುವೆ ಪೈಪೋಟಿ

ಭಾರತ ಜೂನಿಯರ್ ಪುರುಷರ ತಂಡ ಈ ವರ್ಷ ಜರ್ಮನಿಯೊಂದಿಗೆ ಐದು ಬಾರಿ ಮುಖಾಮುಖಿಯಾಗಿದ್ದು, ಎಲ್ಲಾ ಪಂದ್ಯಗಳಲ್ಲಿಯೂ ಭಾರತ ಸೋತಿದೆ. ಭುವನೇಶ್ವರದಲ್ಲಿ ನಡೆದಿದ್ದ 2021ರ ಆವೃತ್ತಿಯ ಸೆಮಿಫೈನಲ್‌ನಲ್ಲೂ ಭಾರತವು 2–4ರಿಂದ ಜರ್ಮನಿಗೆ ಮಣಿದಿತ್ತು.

ಮತ್ತೊಂದು ಸೆಮಿಫೈನಲ್‌ನಲ್ಲಿ ಸ್ಪೇನ್ ತಂಡವನ್ನು 1–3 ರಿಂದ ಮಣಿಸಿದ ಫ್ರಾನ್ಸ್, ಫೈನಲ್‌ನಲ್ಲಿ ಜರ್ಮನಿಯನ್ನು ಎದುರಿಸಲಿದೆ. ಭಾರತವು ಶನಿವಾರ ಕಂಚಿನ ಪದಕಕ್ಕಾಗಿ ಸ್ಪೇನ್ ಜತೆ ಪೈಪೋಟಿ ನಡೆಸಲಿದೆ.

ಮೂತ್ರಪಿಂಡದ ಕಾಯಿಲೆಯಿದ್ದರೂ ಕ್ಯಾಮರಾನ್ ಗ್ರೀನ್ ಉನ್ನತ ಸಾಧನೆ



ಪರ್ತ್ (ಪಿಟಿಐ): ಆಸ್ಟ್ರೇಲಿಯಾ ಆಟಗಾರ ಕ್ಯಾಮರಾನ್ ಗ್ರೀನ್ ಅವರು ಹುಟ್ಟಿನಿಂದಲೇ ಮೂತ್ರಪಿಂಡದ ಕಾಯಿಲೆಯಿಂದ ಬಳಲು-ತ್ತಿದ್ದಾರೆ. ಅವರು ಕೇವಲ 12 ವರ್ಷ ಮಾತ್ರ ಬದುಕುತ್ತಾರೆಂದು ವೈದ್ಯರು ಹೇಳಿದ್ದರು. ಆದರೆ ಆ ಸವಾಲು ಮೀರಿದ ಗ್ರೀನ್ ದೊಡ್ಡ ಕ್ರಿಕೆಟಿಗ ಆಟಗಾರನಾಗಿ ಬೆಳೆದಿದ್ದಾರೆ.

ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಪ್ರಮುಖ ಆಲ್‌ರೌಂಡರ್ ಆಗಿರುವ ಅವರು, 'ಈ ರೋಗಕ್ಕೆ ಯಾವುದೇ ಲಕ್ಷಣಗಳಿಲ್ಲ ಮತ್ತು ಪೂರ್ಣ ಗುಣಮುಖವಾಗದು. ನನ್ನ ಮೂತ್ರಪಿಂಡವು ಶೇ 60ರಷ್ಟು ಮಾತ್ರ ಕಾರ್ಯ-ನಿರ್ವಹಿಸುತ್ತಿದೆ. ಇದು ಈ ಕಾಯಿಲೆಯ ಎರಡನೇ ಹಂತವಾಗಿದೆ. ಐದನೇ ಹಂತಕ್ಕೆ ಕಸಿ ಅಥವಾ ಡಯಾಲಿಸಿಸ್ ಅಗತ್ಯವಿದೆ' ಎಂದು 24 ವರ್ಷದ ಗ್ರೀನ್ ಬಹಿರಂಗಪಡಿಸಿದರು.

'ನಾನು ಹುಟ್ಟಿದಾಗ ದೀರ್ಘಕಾಲದ ಮೂತ್ರಪಿಂಡದ ಕಾಯಿಲೆ ಇದೆ ಎಂದು ನನ್ನ ತಂದೆ, ತಾಯಿಗೆ ವೈದ್ಯರು ಹೇಳಿದರು. ಮೂಲತಃ ಯಾವುದೇ ರೋಗಲಕ್ಷಣಗಳಿರಲಿಲ್ಲ. ಅದು ಅಲ್ಟ್ರಾಸೌಂಡ್ ಮೂಲಕ ಗೊತ್ತಾಯಿತು' ಎಂದು ಗ್ರೀನ್ ಅವರು ಚಾನೆಲ್ ಸೆವೆನ್ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ದೀರ್ಘಕಾಲದ ಕಾಯಿಲೆಯಿಂದಾಗಿ ರಕ್ತದ ಶುದ್ಧೀಕರಣ ಕಾರ್ಯವು ಪೂರ್ಣ ಪ್ರಮಾಣದಲ್ಲಿ ಆಗುತ್ತಿಲ್ಲ. ಶೇ 60ರಷ್ಟು ಮಾತ್ರ ಕಾರ್ಯನಿರ್ವಹಣೆ ಇದೆ. ಅದೃಷ್ಟವಶಾತ್ ನಾನು ಎರಡನೇ ಹಂತದಲ್ಲಿದ್ದೇನೆ. ಆದರೆ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ಇಲ್ಲವಾದರೆ ಸಮಸ್ಯೆ ಉಂಟಾಗುತ್ತದೆ. ಮೂತ್ರಪಿಂಡಗಳು ಉತ್ತಮಗೊಳ್ಳಲು ಸಾಧ್ಯವಿಲ್ಲ. ಉಪ್ಪು ಮತ್ತು ಪ್ರೋಟೀನ್ ಆಹಾರಗಳನ್ನು ತುಂಬಾ ಕಡಿಮೆ ಪ್ರಮಾಣದಲ್ಲಿ ಸೇವಿಸಬೇಕು' ಎಂದು ಗ್ರೀನ್ ಹೇಳಿದ್ದಾರೆ.

2020ರಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಪದಾರ್ಪಣೆ ಮಾಡಿದಾಗಿನಿಂದ 24 ಟೆಸ್ಟ್, 23 ಏಕದಿನ ಮತ್ತು ಎಂಟು ಟಿ20 ಪಂದ್ಯಗಳಲ್ಲಿ ಗ್ರೀನ್ ಆಡಿದ್ದಾರೆ.

ಏಷ್ಯನ್ ಯೂತ್ ರ‍್ಯಾಪಿಡ್ ಚೆಸ್: ಭಾರತಕ್ಕೆ 4 ಚಿನ್ನ

ನವದೆಹಲಿ (ಪಿಟಿಐ): ಯುಎಇಯ ಅಲ್ ಐಯಿನ್‌ನಲ್ಲಿ ನಡೆದ ಏಷ್ಯನ್ ಯೂತ್ ರ‍್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ನಾಲ್ಕು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದಿದೆ.

ಭಾಗ್ಯಶ್ರೀ ಪಾಟೀಲ (18 ವರ್ಷದೊಳಗಿನ ಬಾಲಕಿಯರು), ಸಪರಿಯಾ ಘೋಷ್ (14 ವರ್ಷದೊಳಗಿನ ಬಾಲಕಿಯರು), ಮುಹಮ್ಮದ್ ಶ್ಯಾನ್ ನೌಶೇ ಇಬ್ರಾಹಿಂ (8 ವರ್ಷದೊಳಗಿನ ಬಾಲಕರು) ಮತ್ತು ಶರ್ವಣಿಕಾ (8 ವರ್ಷದೊಳಗಿನ ಬಾಲಕಿಯರು) ಬಂಗಾರದ ಪದಕ ಗೆದ್ದರು.

ಶೆರಳ್ಳಿ ಪಟ್ನಾಯಕ್ (8 ವರ್ಷದೊಳಗಿನ ಬಾಲಕಿಯರು), ಅರಿತ್ ಕಪಿಲ್ (8 ವರ್ಷದೊಳಗಿನ ಬಾಲಕರು) ಮತ್ತು ಕಿಯಾನಾ ಪರಿಹಾರ್ (8 ವರ್ಷದೊಳಗಿನ ಬಾಲಕಿಯರು) 3 ಬೆಳ್ಳಿ ಪದಕ ಜಯಿಸಿದರು. 16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಸೆರಾ ದಗಾರಿಯಾ ಮತ್ತು ದಿವಿ ಬಿಜೇಶ್ ಕಂಚಿನ ಪದಕ ಗೆದ್ದರು. ಗುರುವಾರದಿಂದ ಆರಂಭವಾದ ಕೂಟದಲ್ಲಿ ಭಾರತದ 60 ಆಟಗಾರರು ಸ್ಪರ್ಧಿಸಿದ್ದಾರೆ.

ಟಿಟಿ: ರಾಜ್ಯ ತಂಡಕ್ಕೆ ರಕ್ಷಿತ್ ಸಾರಥ್ಯ

ಬೆಂಗಳೂರು: ರಕ್ಷಿತ್ ಆರ್. ಬಾರಿಗಿಡದ ಮತ್ತು ವಿ. ಖುಷಿ ಇದೇ 16ರಿಂದ 22ರ ವರೆಗೆ ಪಂಚಕುಲದಲ್ಲಿ ನಡೆಯುವ 85ನೇ ಸೀನಿಯರ್ ರಾಷ್ಟ್ರೀಯ ಮತ್ತು ಅಂತರ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ರಾಜ್ಯದ ಪುರುಷರ ಮತ್ತು ಮಹಿಳೆಯರ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡಗಳು: ಪುರುಷರು: ರಕ್ಷಿತ್ ಆರ್. (ನಾಯಕ), ಅನಿರ್ಬನ್ ರಾಯ್, ಎಂ.ಕಲೈವನನ್, ಪಿ. ಯಶವಂತ್, ಶ್ರೇಯಲ್ ತೆಲಂಗ್. ಮಹಿಳೆಯರು: ವಿ. ಖುಷಿ (ನಾಯಕಿ), ದೇಶ್ನಾ ಎಂ., ಅನರ್ಘ್ಯಾ, ಯಶಸ್ವಿನಿ ಘೋರ್ಪಡೆ, ತೃಪ್ತಿ ಪುರೋಹಿತ್.

ಮೂರನೇ ಟಿ20: ಕುಲದೀಪ್‌ಗೆ ಐದು ವಿಕೆಟ್‌, ಸರಣಿ ಸಮಬಲ

ಸೂರ್ಯ ಶತಕ: ಭಾರತಕ್ಕೆ ಜಯ

ಜೋಹಾನ್ಸ್‌ಬರ್ಗ್ (ಪಿಟಿಐ/ಎಎಫ್‌ಪಿ): ಸೂರ್ಯ ಕುಮಾರ್ ಯಾದವ್ ಅವರ ಅಬ್ಬರದ ಶತಕ ಮತ್ತು ಕುಲದೀಪ್ ಯಾದವ್ ಅವರ ಸ್ಪಿನ್ ದಾಳಿಯ ನೆರವಿನಿಂದ ಭಾರತ ತಂಡವು ಗುರುವಾರ ಇಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 106 ರನ್‌ಗಳ ಜಯ ಸಾಧಿಸಿತು.

ಈ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ ಉಭಯ ತಂಡಗಳು 1–1ರಿಂದ ಸಮಬಲ ಸಾಧಿಸಿದವು. ಮೊದಲ ಪಂದ್ಯವು ಮಳೆಗಾಹುತಿಯಾಗಿದ್ದರೆ, ಎರಡನೇ ಪಂದ್ಯದಲ್ಲಿ ಆತಿಥೇಯ ತಂಡವು 5 ವಿಕೆಟ್‌ಗಳಿಂದ ಗೆದ್ದಿತ್ತು.

ನ್ಯೂ ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ಸೂರ್ಯಕುಮಾರ್ (100; 56ಎ, 4x7, 6x8) ಮತ್ತು ಯಶಸ್ವಿ ಜೈಸ್ವಾಲ್ (60; 41ಎ;4x6, 6x3) ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 201 ರನ್ ಗಳಿಸಿತು.

ಕಠಿಣ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ತಂಡವು ಭಾರತದ ಬೌಲರ್‌ಗಳ ಸ್ಪಿನ್ ದಾಳಿಯೆದುರು ತತ್ತರಿಸಿತು. ಹೀಗಾಗಿ, 13.5 ಓವರ್‌ಗಳಲ್ಲಿ 95 ರನ್‌ಗೆ ಆಲೌಟ್ ಆಯಿತು. ಕುಲದೀಪ್ 17ಕ್ಕೆ 5 ವಿಕೆಟ್ ಪಡೆದು ಮಿಂಚಿದರು. ರವೀಂದ್ರ ಜಡೇಜ ಎರಡು ವಿಕೆಟ್ ಪಡೆದರು.

ಇದಕ್ಕೂ ಮೊದಲು ಕೇಶವ ಮಹಾರಾಜ್ ಮತ್ತು ತಬ್ರೇಜ್ ಶಂಸಿ ಅವರ ಸ್ಪಿನ್ ಮೋಡಿಗೆ ಭಾರತ ತಂಡವು ಆರಂಭಿಕ ಆಘಾತ ಎದುರಿಸಿತು. ಮೂರು ಓವರ್ ಮುಗಿಯುವ ಮುನ್ನವೇ ಶುಭಮನ್ ಗಿಲ್ ಮತ್ತು ತಿಲಕ್ ವರ್ಮಾ ಪೆವಿಲಿಯನ್ ಸೇರಿಯಾಗಿತ್ತು.

ಕ್ರೀಸ್‌ನಲ್ಲಿದ್ದ ಜೈಸ್ವಾಲ್ ಜೊತೆಗೂಡಿದ ಸೂರ್ಯ ಪ್ರಜ್ವಲಿಸಿದರು. ಇವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 128 ರನ್ ಸೇರಿಸಿದರು.



ಟಿ20 ಸರಣಿ ಸಮಬಲವಾಗಿದ್ದು, ಟ್ರೋಫಿಯೊಂದಿಗೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ –ಎಎಫ್‌ಪಿ ಚಿತ್ರ

ಆತಿಥೇಯ ತಂಡದ ಎಲ್ಲ ಬೌಲರ್‌ಗಳಿಗೂ ಸೂರ್ಯ ಬಿಸಿ ಮುಟ್ಟಿಸಿದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಟಿ20 ಮಾದರಿಯಲ್ಲಿ ಮೂರನೇ ಶತಕ ಪೂರೈಸಿ ಸಂಭ್ರಮಿಸಿದ ನಂತರದ ಎಸೆತದಲ್ಲಿ ಬ್ರೀಟ್ಜ್ಕೆ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ವಿಕೆಟ್ ಪಡೆದ ಲಿಜಾದ್ ವಿಲಿಯಮ್ಸ್ ಸಮಾಧಾನದ ನಿಟ್ಟುಸಿರು ಬಿಟ್ಟರು.

ಇನ್ನೊಂದು ಬದಿಯಲ್ಲಿದ್ದ ಯಶಸ್ವಿ 14ನೇ ಓವರ್‌ನಲ್ಲಿ ಅವರು ತಬ್ರೇಜ್ ಶಂಸಿ ಬೌಲಿಂಗ್‌ನಲ್ಲಿ ರೀಜಾಗೆ ಕ್ಯಾಚಿತ್ತರು. ನಂತರ ಬಂದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲಿಲ್ಲ. ರಿಂಕು ಸಿಂಗ್ ಒಂದು ಸಿಕ್ಸರ್ ಇದ್ದ 10 ರನ್ ಗಳಿಸಿದರು.

ದಕ್ಷಿಣ ಆಫ್ರಿಕಾದ ಪರ ಡೇವಿಡ್ ಮಿಲ್ಲರ್ (35; 25ಎ), ನಾಯಕ ಏಡನ್ ಮರ್ಕರಂ (25; 14ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಮುಕೇಶ್ ಕುಮಾರ್, ಅರ್ಷದೀಪ್ ಸಿಂಗ್ ತಲಾ ಒಂದು ವಿಕೆಟ್ ಪಡೆದರು.

ಮೂರನೇ ಓವರ್‌ನಲ್ಲಿ ಮೊಹಮ್ಮದ್ ಸಿರಾಜ್ ಎಸೆತದಲ್ಲಿ ರೀಜಾ ಹೆಂಡ್ರಿಕ್ಸ್ ಹೊಡೆದ ಚೆಂಡನ್ನು ತಡೆಯಲು ಯತ್ನಿಸುವಾಗ ಸೂರ್ಯ ಕುಮಾರ್ ಪಾದಕ್ಕೆ ನೋವಾಯಿತು. ಬಳಿಕ ಫಿಸಿಯೊ ನೆರವಿನೊಂದಿಗೆ ಅವರು ಮೈದಾನದಿಂದ ಹೊರನಡೆದರು. ನಂತರ ಉಪನಾಯಕ ರವೀಂದ್ರ ಜಡೇಜ ತಂಡವನ್ನು ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 201 (ಯಶಸ್ವಿ ಜೈಸ್ವಾಲ್ 60, ಸೂರ್ಯಕುಮಾರ್ 100, ರಿಂಕು ಸಿಂಗ್ 14, ಕೇಶವ್ ಮಹಾರಾಜ್ 26ಕ್ಕೆ2, ಲಿಝಾದ್ ವಿಲಿಯಮ್ಸ್ 46ಕ್ಕೆ2, ನಾಂದ್ರೆ ಬರ್ಗರ್ 43ಕ್ಕೆ1, ತಬ್ರೇಜ್ ಶಂಸಿ 38ಕ್ಕೆ1)
ದಕ್ಷಿಣ ಆಫ್ರಿಕಾ: 13.5 ಓವರ್‌ಗಳಲ್ಲಿ 95 (ಡೇವಿಡ್ ಮಿಲ್ಲರ್ 35, ಏಡನ್ ಮರ್ಕರಂ 25; ಕುಲದೀಪ್ ಯಾದವ್ 17ಕ್ಕೆ5, ರವೀಂದ್ರ ಜಡೇಜ 25ಕ್ಕೆ2, ಮುಕೇಶ್ ಕುಮಾರ್ 21ಕ್ಕೆ1, ಅರ್ಷದೀಪ್ ಸಿಂಗ್ 13ಕ್ಕೆ1)
ಫಲಿತಾಂಶ: ಭಾರತಕ್ಕೆ 106 ರನ್ ಜಯ
ಪಂದ್ಯದ ಮತ್ತು ಸರಣಿಯ ಆಟಗಾರ: ಸೂರ್ಯಕುಮಾರ್ ಯಾದವ್

ಚಿನ್ನಕ್ಕೆ ಗುರಿಯಿಟ್ಟ ಮನೀಶ್ ನರ್ವಾಲ್

ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್: ಏರ್ ಪಿಸ್ತೂಲ್ ಸ್ಪರ್ಧೆ

ನವದೆಹಲಿ (ಪಿಟಿಐ): ಭಾರತದ ಅಗ್ರ ಪ್ಯಾರಾ ಶೂಟರ್ ಮನೀಶ್ ನರ್ವಾಲ್ ಅವರು ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್‌ನ ಪುರುಷರ ಎಸ್‌ಎಚ್–1 ವಿಭಾಗದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಗುರುವಾರ ಚಿನ್ನಕ್ಕೆ ಗುರಿಯಿಟ್ಟರು.


ಮನೀಶ್ ನರ್ವಾಲ್

ಕಳೆದ ತಿಂಗಳು ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಎಸ್‌ಎಚ್1 ವಿಭಾಗದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದ 21 ವರ್ಷದ ಮನೀಶ್ 240.2 ಅಂಕಗಳೊಂದಿಗೆ ಸಾಧನೆ ಮಾಡಿದರು.

ಹಾಂಗ್‌ಝೌನಲ್ಲಿ ನಡೆದ ಎಚ್‌ಎಚ್1 ವಿಭಾಗದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಮನೀಶ್ ಅವರನ್ನು ಹಿಂದಿಕ್ಕಿ ಬೆಳ್ಳಿ ಗೆದ್ದಿದ್ದ ರುದ್ರಾಂಶ್ ಖಂಡೇಲ್ವಾಲ್ ಇಲ್ಲಿ ಎರಡನೇ ಸ್ಥಾನ ಪಡೆದರು.

ತಮಿಳುನಾಡಿನ ಪವರ್ ಲಿಫ್ಟರ್ ಕಸ್ತೂರಿ ರಾಜಮಣಿ 67 ಕೆ.ಜಿ ವಿಭಾಗದಲ್ಲಿ ಮೂರನೇ ಪ್ರಯತ್ನದಲ್ಲಿ 100 ಕೆ.ಜಿ ಭಾರ ಎತ್ತುವ ಮೂಲಕ ಚಿನ್ನದ ಪದಕ ಗೆದ್ದರು. ಗುಜರಾತ್‌ನ ಪಾರುಲ್ ಗೋಹಿಲ್ (64 ಕೆಜಿ) ಮತ್ತು ಪಂಜಾಬ್‌ನ ಸುಮನ್ ದೀಪ್ (57 ಕೆಜಿ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

73 ಕೆಜಿ ಎಲೈಟ್ ವಿಭಾಗದಲ್ಲಿ ಗುಜರಾತ್‌ನ ರೇಷ್ಮಾ ಮೊಗಿಲ್ 72 ಕೆಜಿ ಎತ್ತುವ ಮೂಲಕ ಮೊದಲ ಸ್ಥಾನ ಪಡೆದರು. ದೆಹಲಿಯ ಸಾಹಿಸ್ತಾ (58 ಕೆಜಿ) ಬೆಳ್ಳಿ ಗೆದ್ದರೆ, ರಾಜಸ್ಥಾನದ ಮಾಯಾ (57 ಕೆಜಿ) ನಂತರದ ಸ್ಥಾನ ಪಡೆದರು.

ಪುರುಷರ 80 ಕೆ.ಜಿ ವಿಭಾಗದಲ್ಲಿ ಪಂಜಾಬ್‌ನ ಗುರುಸೇವಕ್ ಸಿಂಗ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅವರು ಒಟ್ಟು 171 ಕೆಜಿ ಭಾರ ಎತ್ತಿ ಬಂಗಾರ ಗೆದ್ದರೆ, ಕೇರಳದ ಅಬ್ದುಲ್ ಸಲಾಂ (155 ಕೆಜಿ) ಬೆಳ್ಳಿ, ದೆಹಲಿಯ ಹನಿ ದಬಾಸ್ (152 ಕೆಜಿ) ಕಂಚಿನ ಪದಕಕ್ಕೆ ತೃಪ್ತಿಪಟ್ಟರು.

ಪ್ಯಾರಾ ಟೇಬಲ್ ಟೆನಿಸ್‌ನಲ್ಲಿ ಗುಜರಾತ್‌ನ ಭಾವಿನಾ ಪಟೇಲ್, ಮಹಿಳಾ ಕ್ಲಾಸ್ -4 ವಿಭಾಗದ ಆರಂಭಿಕ ಪಂದ್ಯದಲ್ಲಿ ಗುಜರಾತ್‌ನ ಶಮೀಮ್ ಚಾವ್ಡಾ ವಿರುದ್ಧ 3-0 ಅಂತರದಿಂದ ಗೆಲುವು ಸಾಧಿಸಿದರು. ಇವರು ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ಹಾಂಗ್‌ಝೌನಲ್ಲಿ ಕಂಚು ಜಯಿಸಿದ್ದರು.

ಗುಜರಾತ್‌ನ ಸೋನಾಲ್ ಪಟೇಲ್ ಮಹಿಳಾ ಕ್ಲಾಸ್ 1-3 ವಿಭಾಗದ ಆರಂಭಿಕ ಪಂದ್ಯದಲ್ಲಿ ತಮಿಳುನಾಡಿನ ಫಾತಿಮಾ ಬೀವಿ ಅವರನ್ನು 3-0 ಅಂತರದಿಂದ ಸೋಲಿಸಿದರು.

ಶಾಟ್‌ಪಟ್; ಸೂರ್ಯಗೆ ಬೆಳ್ಳಿ

ತೀರ್ಥಹಳ್ಳಿ: ಖೇಲೊ ಇಂಡಿಯಾ ಪ್ಯಾರಾ ಕ್ರೀಡಾಕೂಟದ ಪುರುಷರ ಎಫ್–35 ವಿಭಾಗದ ಶಾಟ್‌ಪಟ್ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಇಲ್ಲಿನ ಕಟ್ಟೇಹಕ್ಕಲು ಸಮೀಪದ ತಗಡವಳ್ಳಿ ಗ್ರಾಮದ ಸೂರ್ಯ ಟಿ.ಡಿ. ಬೆಳ್ಳಿ ಪದಕ ಪಡೆದಿದ್ದಾರೆ.


ಸೂರ್ಯ ಟಿ.ಡಿ.

ನವದೆಹಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಇವರು ಒಟ್ಟು 8.83 ಮೀಟರ್ಸ್ ದೂರ ಕಬ್ಬಿಣದ ಗುಂಡು ಎಸೆದು ಈ ಸಾಧನೆ ಮಾಡಿದ್ದಾರೆ.

ಸಂದೇಶ್‌ಗೆ ಬಂಗಾರ

88 ಕೆಜಿ ಎಲೈಟ್ ವಿಭಾಗದಲ್ಲಿ ಕರ್ನಾಟಕದ ಸಂದೇಶ್ ಬಿ.ಜಿ 171 ಕೆಜಿ ಭಾರ ಎತ್ತುವ ಮೂಲಕ ಚಿನ್ನಕ್ಕೆ ಕೊರಳೊಡ್ಡಿದರು. ದೆಹಲಿಯ ಜಗಮೋಹನ್ (145 ಕೆಜಿ) ಎರಡನೇ ಸ್ಥಾನ ಪಡೆದರೆ, ಗುಜರಾತ್ನ ದಿವ್ಯೇಶ್ ಲಡಾನಿ (140 ಕೆಜಿ) ಕಂಚಿನ ಪದಕ ಗೆದ್ದರು.

ಐಪಿಎಲ್: ಕೆಕೆಆರ್ ನಾಯಕನಾಗಿ ಮರಳಿದ ಶ್ರೇಯಸ್ ಅಯ್ಯರ್



ಕೋಲ್ಕತ್ತ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಬಲಗೈ ಬ್ಯಾಟರ್ ಶ್ರೇಯಸ್ ಅಯ್ಯರ್ ನಾಯಕರಾಗಿ ಮರುನೇಮಕವಾಗಿದ್ದಾರೆ.

ಮುಂದಿನ ವರ್ಷ ನಡೆಯುವ ಐಪಿಎಲ್ ಆವೃತ್ತಿಯಲ್ಲಿ ತಂಡವು ಅವರ ನಾಯಕತ್ವದಲ್ಲಿ ಆಡಲಿದೆ ಎಂದು ಫ್ರ್ಯಾಂಚೈಸಿಯು ಗುರುವಾರ ಪ್ರಕಟಿಸಿದೆ.

ಬೆನ್ನುನೋವಿನಿಂದಾಗಿ ಲಂಡನ್‌ನಲ್ಲಿ ಶಸ್ತ್ರಚಿಕಿತ್ಸೆ ಅಗತ್ಯವಿರುವ ಕಾರಣ ಶ್ರೇಯಸ್ ಅವರು 2023ರ ಐಪಿಎಲ್ ಆವೃತ್ತಿಯಲ್ಲಿ ಆಡಿರಲಿಲ್ಲ. ಇದರಿಂದಾಗಿ ಕೆಕೆಆರ್ ನಿತೀಶ್ ರಾಣಾ ಅವರಿಗೆ ನಾಯಕನ ಜವಾಬ್ದಾರಿ ನೀಡಿತ್ತು.

ಈ ಬಗ್ಗೆ ಟ್ವೀಟ್ ಮಾಡಿರುವ ಕೆಕೆಆರ್ ಸಿಇಒ ವೆಂಕಿ ಮೈಸೂರು, ‘ಶ್ರೇಯಸ್ ಮತ್ತೆ ನಾಯಕತ್ವ ವಹಿಸಿಕೊಂಡಿರುವುದಕ್ಕೆ ನಮಗೆ ಸಂತೋಷವಾಗಿದೆ’ ಎಂದು ಹೇಳಿದ್ದಾರೆ.

‘ಕಳೆದ ಆವೃತ್ತಿಯಲ್ಲಿ ಗಾಯದ ಕಾರಣ ನನ್ನ ಗೈರುಹಾಜರಿ ಸೇರಿದಂತೆ ಹಲವಾರು ಸವಾಲುಗಳು ತಂಡ ಎದುರಿಸಿದೆ. ನಿತೀಶ್ ಅವರನ್ನು ಉಪನಾಯಕರಾಗಿ ನೇಮಕ ಮಾಡಿರುವುದು ಸಂತೋಷವಾಗಿದೆ’ ಎಂದು ಶ್ರೇಯಸ್ ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಏಷ್ಯಾಕಪ್ ಟೂರ್ನಿಯಲ್ಲಿ ಆಡುವ ಮೂಲಕ ಕ್ರಿಕೆಟ್‌ಗೆ ಮರಳಿದ್ದರು. ಮೊಹಾಲಿಯಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ 86 ಎಸೆತಗಳಲ್ಲಿ ಶತಕ ಬಾರಿಸಿದ್ದರು. ವಿಶ್ವಕಪ್ ಟೂರ್ನಿಯಲ್ಲಿಯೂ ಮಿಂಚಿದ್ದರು.

ಟಿಟಿ: ಅರ್ಚನಾಗೆ ಸಿಂಗಲ್ಸ್ ಕಿರೀಟ

ಬೆಂಗಳೂರು: ಅಗ್ರ ಶ್ರೇಯಾಂಕದ ಅರ್ಚನಾ ಕಾಮತ್, ಹರಿಯಾಣದ ಪಂಚಕುಲದಲ್ಲಿ ಗುರುವಾರ ಮುಕ್ತಾಯಗೊಂಡ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಪಿಎಸ್‌ಪಿಬಿ (ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್) ಟೇಬಲ್ ಟೆನಿಸ್ ಅಕಾಡೆಮಿಯನ್ನು ಪ್ರತಿನಿಧಿಸಿದ್ದ ಕರ್ನಾಟಕದ ಅರ್ಚನಾ ಅವರು ಫೈನಲ್‌ನಲ್ಲಿ 11-8, 11-6, 11-8, 7-11, 11-8ರಿಂದ ಎರಡನೇ ಶ್ರೇಯಾಂಕದ ಐಹಿಕಾ ಮುಖರ್ಜಿ (ಆರ್‌ಬಿಐ) ಅವರನ್ನು ಮಣಿಸಿ ಈ ಋತುವಿನಲ್ಲಿ ಎರಡನೇ ಪ್ರಶಸ್ತಿ ಗೆದ್ದರು.

ಅರ್ಚನಾ ಅವರು ಸೆಮಿಫೈನಲ್‌ನಲ್ಲಿ 11-9, 11-4, 11-6, 11-6ರಿಂದ ತಮಿಳುನಾಡಿನ ಯಾಶಿನಿ ಶಿವಶಂಕರ್ ಅವರನ್ನು ಮಣಿಸಿದ್ದರು.



ಪ್ರಶಸ್ತಿಯೊಂದಿಗೆ ಅರ್ಚನಾ ಕಾಮತ್

ನವೆಂಬರ್‌ನಲ್ಲಿ ವಡೋದರಾದಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೂರ್ನಿಯ ಫೈನಲ್‌ನಲ್ಲಿ ಅರ್ಚನಾ ಕಾಮತ್ ಅವರು ಐಹಿಕಾ ಮುಖರ್ಜಿ ವಿರುದ್ಧವೇ ಜಯ ಸಾಧಿಸಿ, ಋತುವಿನ ಮೊದಲ ಪ್ರಶಸ್ತಿ ಗೆದ್ದಿದ್ದರು.

ಸಂಕ್ಷಿಪ್ತ ಸುದ್ದಿ

ಬಿಎಫ್‌ಸಿ ಕೋಚ್ ಆಗಿ ಗೆರಾರ್ಡ್

ಬೆಂಗಳೂರು: ಸ್ಪೇನ್‌ನ ಮಾಜಿ ಆಟಗಾರ ಗೆರಾರ್ಡ್ ಜರಗೋಜಾ ಅವರನ್ನು ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡಕ್ಕೆ ಮುಂದಿನ ಎರಡು ವರ್ಷಗಳ ಅವಧಿಗೆ ಮುಖ್ಯ ಕೋಚ್ ಆಗಿ ನೇಮಿಸಲಾಗಿದೆ.



ಪ್ರಸಕ್ತ ಋತುವಿನ ಇಂಡಿಯನ್ ಸೂಪರ್ ಲೀಗ್‌ನಲ್ಲಿ ಕಳಪೆ ಪ್ರದರ್ಶನದ ಬೆನ್ನಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ ತನ್ನ ಮುಖ್ಯ ಕೋಚ್ ಸೈಮನ್ ಗ್ರೇಸನ್ ಅವರನ್ನು ಕೈಬಿಟ್ಟಿತ್ತು. ಆ ಸ್ಥಾನಕ್ಕೆ 41 ವರ್ಷದ ಗೆರಾರ್ಡ್ ಅವರನ್ನು ನೇಮಿಸಲಾಗಿದೆ.

ಬಿಎಫ್‌ಸಿಗೆ ಗೆರಾರ್ಡ್ ಹೊಸ ಪರಿಚಯವೇನಲ್ಲ. ಈ ಹಿಂದೆ ಸಹಾಯಕ ತರಬೇತುದಾರರಾಗಿ ತಂಡದಲ್ಲಿ ಸೇವೆ ಸಲ್ಲಿಸಿರುವ ಅವರು, 2018–19ರ ಇಂಡಿಯನ್ ಸೂಪರ್ ಲೀಗ್‌ನ ವಿಜೇತ ಬಿಎಫ್‌ಸಿ ತಂಡದ ಭಾಗವಾಗಿದ್ದರು.

ಅಂಧರ ಕ್ರಿಕೆಟ್: ಭಾರತಕ್ಕೆ ಸರಣಿ

ಮುಂಬೈ (ಪಿಟಿಐ): ಸುಷ್ಮಾ ಪಟೇಲ್ ಅವರ ಬಿರುಸಿನ ಬ್ಯಾಟಿಂಗ್ (45; 37 ಎ) ನೆರವಿನಿಂದ ಭಾರತ ತಂಡವು ಗುರುವಾರ ಇಲ್ಲಿ ನಡೆದ ಅಂಧ ಮಹಿಳೆಯರ ಟಿ20 ಕ್ರಿಕೆಟ್ ಸರಣಿಯಲ್ಲಿ ನೇಪಾಳ ಎದುರು ಏಳು ವಿಕೆಟ್‌ಗಳಿಂದ ಜಯಿಸಿತು.

ಇದರೊಂದಿಗೆ ಭಾರತ ತಂಡವು ಐದು ಪಂದ್ಯಗಳ ಸರಣಿಯಲ್ಲಿ 3–1ರ ಮುನ್ನಡೆ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ನೇಪಾಳ 20 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತು. ನಾಯಕಿ ಬಿಂಟಾ ಪುನ್ 69 ರನ್ ಗಳಿಸಿದರು. ಅವರು ಮಂಕೇಶಿ ಚೌಧರಿ ಅವರೊಂದಿಗೆ 101 ರನ್ ಗಳ ಜೊತೆಯಾಡಿದರು.

ಪುನ್ ಔಟಾದ ಬಳಿಕ ನೇಪಾಳ ಕೊನೆಯ ನಾಲ್ಕು ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಗುರಿ ಬೆನ್ನತ್ತಿದ ಭಾರತ, ಮೂರು ವಿಕೆಟ್ ಕಳೆದುಕೊಂಡು 19ನೇ ಓವರ್‌ನಲ್ಲಿ ದಡ ಸೇರಿತು. ಸುಷ್ಮಾ ಪಂದ್ಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ಸರಣಿಯ ಕೊನೆಯ ಪಂದ್ಯ ಶುಕ್ರವಾರ ನಡೆಯಲಿದೆ. ಮೊದಲ ಎರಡು ಟಿ20 ಪಂದ್ಯವನ್ನು ಭಾರತ ಮತ್ತು ಮೂರನೇ ಪಂದ್ಯವನ್ನು ನೇಪಾಳ ಗೆದ್ದಿತ್ತು.

ಕ್ವಾರ್ಟರ್ ಫೈನಲ್‌ಗೆ ಚಿರಾಗ್ ಸೆನ್

ಕಟಕ್ (ಪಿಟಿಐ): ಭಾರತದ ಚಿರಾಗ್ ಸೇನ್ ಇಲ್ಲಿ ನಡೆಯುತ್ತಿರುವ ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಪುರುಷ ಸಿಂಗಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಮೂರನೇ ಶ್ರೇಯಾಂಕದ ಮ್ಯಾಡ್ಸ್ ಕ್ರಿಸ್ಟೋಫರ್ಸನ್ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ ಹೂಡಾ 21-18, 21-16ರಿಂದ ಅಶ್ಮಿತಾ ಚಾಲಿಹಾ ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ತಲುಪಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ-ತನಿಶಾ ಕ್ರಾಸ್ಟೊ ಮತ್ತು ರುತುಪರ್ಣ ಪಾಂಡಾ- ಶ್ವೇತಪರ್ಣ ಪಾಂಡಾ ಜೋಡಿ ಕ್ವಾರ್ಟರ್ ಫೈನಲ್ ತಲುಪಿದರು.

ಮಿಶ್ರ ಡಬಲ್ಸ್‌ನಲ್ಲಿ ಉನ್ನತಿ ಹೂಡಾ ಮತ್ತು ಕಿರಣ್ ಜಾರ್ಜ್ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿದರು. ತನಿಶಾ ಮತ್ತು ಧ್ರುವ್ ಕಪಿಲಾ ಜೋಡಿ 21-16, 21-12 ರಿಂದ ಇಂಡೊನೇಷ್ಯಾದ ಅಮ್ರಿ ಸ್ಯಾಹ್ನವಿ ಮತ್ತು ವಿನ್ನಿ ಒಕ್ತಾವಿನಾ ಕಂಡೊ ಅವರನ್ನು ಸೋಲಿಸಿದರು. ಅಶ್ವಿನಿ ಮತ್ತು ರೋಹನ್ ಕಪೂರ್ 21-13, 21-13ರಿಂದ ಎಂಟನೇ ಶ್ರೇಯಾಂಕದ ಸುಮಿತ್ ರೆಡ್ಡಿ ಮತ್ತು ಸಿಕ್ಕಿ ರೆಡ್ಡಿ ವಿರುದ್ಧ ಗೆದ್ದರು.